ಕಾಟೇರಿ ಡ್ಯಾಂ ಸೈಟ್ ಮೈದಾನದಲ್ಲಿ
ಅಖಿಲ ಭಾರತ ಬಸವ ಧರ್ಮ
ಪ್ರಥಮ ಸಮ್ಮೇಳನ

ಬೆಲೆ ೩ ರೂ. **ಕಲ್ಯಾಣ ಕಿರಣ** ಜೂನ್ ೧೯೯೩



ಕಲ್ಯಾಣ ಕಿರಣ

ಮಾಸಪತ್ರಿಕೆ, ಜೂನ್-1993, ಬಿಡಿ ಸಂಚಿಕೆ 3-00 ರೂ.

ಸಂಪುಟ : 21 ಸಂಚಿಕೆ : 9 ಬಸವ ಶಕೆ : 888, ಜೂನ್ 1993

ವಾರ್ಷಿಕ ಚಂದಾ : 30 ರೂ. ಆಜೀವ ಸದಸ್ಯತ್ವ : 300-00

ಲೇಖನಗಳು ಕಿರಣಗನ್ನಡಿ

ಮುಖಪುಟ : ವಿಶ್ವಗುರು ಬಸವಣ್ಣನವರು.

ಹೊದ್ದಿಕೆಯ 4 ನೇ ಪುಟ : ಸಮ್ಮೇಳನಾಧ್ಯಕ್ಷರು ಪೂಜ್ಯ ಮಾತಾಜಿ.

KALYANA KIRANA - monthly magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore-560 074.

Phone : 437234

ಕಲ್ಯಾಣ ಕಿರಣ

ಸಂಪುಟ : 21 ಸಂಚಿಕೆ : 9 ಬಸವ ಶಕೆ : 888, ಜೂನ್ 1993

ನೀಲಾಂಬಿಕೆಯು ಕಾಲಜ್ಞಾನ ವಚನಗಳು

ಕಪ್ಪಡಿ ಸಂಗಮಂ ತಪ್ಪದೆ ಹೇಳಿದ
ಅಪ್ಪ ಬಸವಣ್ಣ ಬರುವುದನು ಸುವ್ವಿ
ಏಳು ನೂರಾ ಎಪ್ಪತ್ತು ವರ್ಷಕ್ಕೆ ಬರುತಾನೆ ಸುವ್ವಿ ||೧||

ನಾರಿ ಒಬ್ಬಳು ಬಂದು ಭಾರಿ ಅಬ್ಬರ ಹೊತ್ತು
ಆರೂಢ ಭಿಕ್ಷವ ಬೇಡ್ಯಾಳು । ಸುವ್ವಿ
ಮತ್ತಿನ್ನು ವೀರ ಬಸವಣ್ಣ ಬರುವಾಗ ಸುವ್ವಿ ||೩||

ಅಂದಿಗೆ ಬಸವಣ್ಣ ಬಂದಾನು ಎಂಬುದ
ಒಂದು ಸೂಚನೆಯ ಪೇಳಿದೆನು । ಸುವ್ವಿ
ಮುಂದೆ ಸಾರುವೆನು ಶರಣರಾ ದಿನಗಳನು ಸುವ್ವಿ ||೪||

ನಕ್ಷತ್ರ ಉದುರ್‍ಯಾವು ಭೂಮಿಯು ನಡುಗೀತು
ರಾಕ್ಷಸ ತುರುಕರು ಹತವಾಗಿ ಹೋದಾರು
ರಕ್ಷಿಪ ಬಸವಣ್ಣ ಬರುತ್ತಾನೆ ಸುವ್ವಿ ||೬||

ಲಿಂಗವಿರುಪಾಕ್ಷನ ರಂಗಮಂಟಪದ ಮುಂದೆ
ಲಿಂಗದ ಕಣಜ ಒಡೆದಾರು ಸುವ್ವಿ ।
ವಿಭೂತಿ ಹಿಂಗದೆ ತೆಗೆದು ಬಯಲಿಗೆ ಸುವ್ವಿ ||೭||

ಹೊಟ್ಟೆಲ್ಲ ಹಾರೀತು ಗಟ್ಟೆಲ್ಲ ಉಳಿದೀತು
ಪಟ್ಟಕ್ಕೆ ಚನ್ನಬಸವಣ್ಣ ಬರುವಾಗ ಸುವ್ವಿ
ಇಷ್ಟಲಿಂಗದ ನಿಷ್ಠರು ಸುವ್ವಿ ||೧೬||

ಎಣ್ಣೆ ಕಾವೇರಿಲಿ ಚನ್ನಬಸವಣ್ಣ ಬರುವಾಗ
ಮುನ್ನೆಯರು ಆರತಿ ಬೆಳಗ್ಯಾರು ಸುವ್ವಿ । ಅವರಿಗೆ
ಹೊನ್ನು ಬಂಗಾರವ ಕೊಡುವನು ಸುವ್ವಿ ||೨೦||

ಬರುವ ಸಂಭ್ರಮವನು ಏನೆಂಬೆ
ತ್ರಿಪುರಕೆ ಕಪ್ಪುಗೊರಳನು ನಡೆದಂತೆ ಸುವ್ವಿ
ಹಗಲಿನ ಇಪ್ಪತ್ತು ನೂರು ದೀವಟಿಗೆಗಳು ಸುವ್ವಿ ||೨೨||

ಸರ್ವಪುರಾತನರ ಕಾಲಜ್ಞಾನ

ಸಂ—ಶಿವರುದ್ರ ಸ್ವಾಮಿಗಳು ಸಾಲಿಮಠ

ಪ್ರ—ಭಾರತ ಬುಕ್ ಡಿಪೋ, ಕೊಪ್ಪೀಕರ ರೋಡ
ಹುಬ್ಬಳ್ಳಿ, ೧೯೬೩

ಶರಣರ ನಿಜವಾದ ಭವಿಷ್ಯ

—ಮಾತಾಜಿ

ಆದಿ ಶರಣರು ಕಲ್ಯಾಣದಿಂದ ಹೊರಡುವಾಗ ಮುಂದಿನ ಶತಮಾನಗಳಲ್ಲಿ ನಡೆಯುವ ಆಗುಹೋಗುಗಳನ್ನು ಕುರಿತು ನುಡಿದಿದ್ದಾರೆ. ಅದರಲ್ಲಿಯೂ 20 ನೆಯ ಶತಮಾನ ಅವರು ಬಹಳಷ್ಟು ಸಲ ಉಲ್ಲೇಖಿಸುವ ವರ್ಷ. ಹಿಂದೆ ಹತ್ತು (1+9) ಮುಂದೆ ಹನ್ನೊಂದು ಎಂದು ಹಲವಾರು ಶರಣರು ಹೇಳಿರುತ್ತಾರೆ. ಹತ್ತು ಅಂಕಿ ಬರುವುದು 1900 ದಾಟಿದ ಮೇಲೆ ತಾನೆ ?

ಕಲ್ಯಾಣವನ್ನು ಬಸವಣ್ಣನವರು ತೊರೆದ ನಂತರ 770 ವರ್ಷಕ್ಕೆ ಶರಣರ ಸುಳಿವು ಕಾಣಬರುತ್ತದೆ ಎನ್ನುತ್ತಾಳೆ ನೀಲಾಂಬಿಕೆ. ನಮಗೆ ಅರ್ಥವಾಗುವ ಲೆಕ್ಕಾಚಾರ ನೋಡಿಕೊಂಡರೆ 1168+770=1938 ಈ ಅವಧಿಯಲ್ಲೇ ಲಿಂ|| ಫ. ಗು. ಹಳಕಟ್ಟಿ ಶರಣರು ವಚನ ಸಾಹಿತ್ಯವನ್ನು ಬಯಲು ಮಾಡಿದುದು. ಮನೆಗಳ 'ದೇವರ ಜಗಲಿ' ಮೇಲೆ ಕುಳಿತು ಪೂಜೆಗೊಳ್ಳುತ್ತ ಬೆಳಕು ಕಾಣದ ವಚನ ಸಾಹಿತ್ಯ ಅವರ ಪ್ರಯತ್ನದಿಂದ ಬೆಳಕಿಗೆ ಬರತೊಡಗಿತು.

ಹುಬ್ಬಳ್ಳಿಯ ಶ್ರೀ ಗುರು ಬಸವ ಮಂಟಪದಲ್ಲಿ ದಿ. 15-5-93 ಒಂದು ಕಾರ್ಯಕ್ರಮವಿತ್ತು. ಆಗ ಏನೋ ನೆನಪಾಗಿ ಇದು ಸ್ಥಾಪನೆಯಾದುದು ಯಾವ ವರ್ಷ ಎಂದು ಕೇಳಿದೆ. ಆಗ ಅದರ ಅಧ್ಯಕ್ಷ ಶರಣ ಸಾದರ ಹಳ್ಳಿಯವರು **1938,** ಇಲ್ಲಿ ಬರೆಸಿದ್ದೇವೆ ಎಂದು ತೋರಿಸಿದರು. ಆನಂದ-ಆಶ್ಚರ್ಯ ಒಟ್ಟಿಗೇ ಆದವು, ನವ ಕಲ್ಯಾಣಮಠ ಎಂಬ ಸಂಸ್ಥೆ ಕಟ್ಟಿ, ಗುರುಸಿದ್ಧ ಪ್ರಭುದೇವರು ಎಂಬ ಮಹಾತ್ಮರು ಬಸವ ತತ್ತ್ವದ ಪುನರುತ್ಥಾನ ಪ್ರಾರಂಭಿಸಿದ್ದರು. ಅಲ್ಲಿಗಾಗಲೇ ಬಸವ ತತ್ತ್ವವು ಲಿಂಗಾಯತ ಸಮಾಜದಲ್ಲಿ ನಶಿಸಿ ಗುರುತ್ವವು ಕೇವಲ ಒಂದು ವರ್ಗದ ಸೊತ್ತು ಎಂದು ಲಿಂಗಾಯತ ಸಮಾಜವು ಮಲೆತು ನಿಂತಾಗ, ಈ ನವ ಕಲ್ಯಾಣ ಚಳುವಳಿ ಗುರುತ್ವವು ಎಲ್ಲರದು, ಇದು ಜಾತಿ ಆಧಾರಿತವಲ್ಲ, ತತ್ತ್ವ ಆಧಾರಿತ ಎಂದು ಘೋಷಿಸಿತು. ಆಗ ನಡೆದ ಒಂದು ಘಟನೆಯಲ್ಲಿ ಓರ್ವ ವಯೋವೃದ್ಧ ಶರಣರು ಹೀಗೆ ನೆನಪಿಸಿಕೊಂಡರು. ಶ್ರೀ ಗುರು ಬಸವ ಮಂಟಪದ ಪ್ರಭಾವಕ್ಕೊಳಗಾದ ಓರ್ವ ಶರಣರು ಲಿಂಗೈಕ್ಯರಾದಾಗ ಅವರ ಮಕ್ಕಳು ಈ ಶರಣರಿಂದಲೇ ಶವ ಸಂಸ್ಕಾರ ಆಗಬೇಕು ಎಂದರು. ಅಂಥಾ ಕ್ರಿಯೆಗಳನ್ನು ಮಾಡುತ್ತಿದ್ದ ಓರ್ವ ಅಯ್ಯನವರು ಓರ್ವ ಮುಸಲ್ಮಾನ್ ಮಹಿಳೆಯನ್ನು ಇಟ್ಟುಕೊಂಡುದ್ದರಿಂದ ಲಿಂಗೈಕ್ಯ ಶರಣರ ಮಕ್ಕಳು ತಮ್ಮ ತಂದೆಯಂಥಾ ಪವಿತ್ರಾತ್ಮರ ದೇಹದ ಮೇಲೆ ಅವರ ಕಾಲು ಬೇಡ ಎಂದರು. ಆದರೆ ಆ ಅಯ್ಯನವರು ತಾವೇ ಮಾಡಬೇಕೆಂದು ಹಟತೊಟ್ಟು, ಬಸವ ಮಂಟಪದ ಶರಣರು ಸ್ಮಶಾನದಲ್ಲಿ ತೋಡಿಸಿದ್ದ ಗುಂಡಿಯನ್ನು ಮುಚ್ಚಿಸಿದರಂತೆ. ಅಲ್ಲಿ ಜಾಗವನ್ನು ಸಹ ಕೊಡುವುದಿಲ್ಲ ಎಂದರಂತೆ.

ಲಿಂಗೈಕ್ಯರ ಮಕ್ಕಳು ಮತ್ತು ಬಸವ ಮಂಟಪದವರು ಬೇರೊಂದು ಜಾಗದಲ್ಲಿ ನೆಲವನ್ನು ಸ್ವತಃ ಅಗೆದು ಸಮಾಧಿ ಕ್ರಿಯೆ ಪೂರೈಸಿ ಸಮಾಧಾನ ಹೊಂದಿದರಂತೆ.

ಅಂತೂ ಇಂಥಾ ಹತ್ತಾರು ಅಡೆತಡೆ ವಿರೋಧಗಳನ್ನು ಎದುರಿಸಿಯೂ ಈ ಶರಣರು ಭಕ್ತರು ಗುರುವಾಗುವ ಹಕ್ಕನ್ನು ಪ್ರತಿಪಾದಿಸಿದರು. ಹೆಣ್ಣುಮಕ್ಕಳು ಗದ್ದುಗೆಯ ಮೇಲೆ ಕುಳಿತು ಧಾರ್ಮಿಕ ವಿಧಿ-ವಿಧಾನಗಳನ್ನು ನಡೆಸಬಲ್ಲರು, ಲಿಂಗದೀಕ್ಷೆ-ವಿವಾಹಾದಿ ಕಾರ್ಯಗಳನ್ನೂ ನಿರ್ವಹಿಸಬಲ್ಲರು ಎಂಬುದೂ ಈ ಚಳುವಳಿಯ ಅಂಗವೆ, ಶರಣೆ. ಸಂಗಮ್ಮ ತಾಯಿ ಕರವೀರಶೆಟ್ಟರು ಆ ಕಾರ್ಯಗಳನ್ನು ನಡೆಸಿಕೊಂಡು ಬಂದರು.

1956 ರಲ್ಲಿ ಪೂಜ್ಯ ಅಪ್ಪಾಜಿಯವರು ಸ್ವಯಂ ಸ್ಫೂರ್ತಿಯ ಸನ್ಯಾಸ ತೆಗೆದುಕೊಂಡರು. ಮುಂದೆ 1965 ರಲ್ಲಿ ನಾನು ಬಂದು ದೀಕ್ಷೆ ತೆಗೆದುಕೊಂಡೆ. ಹೀಗೆ ಅನೇಕ ಜನರ ಬದುಕಿನಲ್ಲಿ ಆದ ಪರಿವರ್ತನೆ ನಡೆದ ಘಟನೆಗಳಿಗೆ ಹೋಲಿಸಿದರೆ ಹಿಂದೆ ಹತ್ತು ಮುಂದೆ ಹನ್ನೊಂದು ಎಂಬುದು ಬಹಳ ಮಹತ್ವಪೂರ್ಣ ಎನ್ನಿಸದೆ ಇರದು.

ಬಸವ ತತ್ತ್ವವು ಪೂರ್ಣ ಪ್ರಕಾಶದೊಡನೆ ಬೆಳಗುವ ಕಾಲದ ಇನ್ನು ಕೆಲವು ಕುರುಹುಗಳನ್ನು ತಾಯಿ ನೀಲಲೋಚನೆ ಹೀಗೆ ಹೇಳುತ್ತಾರೆ. ಕೋಮುವಾದಿಗಳಾದ ತುರುಕರು ಹತವಾಗಿ ಹೋಗುವರು. ಎಲ್ಲೆಂದರಲ್ಲೇ ಬೆಂಕಿ, (ನಕ್ಷತ್ರ ಉದುರ್ಯಾವು) ದೊಂಬಿಯಿಂದ ಜನಜೀವನ ಗದಗುಟ್ಟುತ್ತದೆ (ಭೂಮಿಯು ನಡುಗೀತು) ಸೌಮ್ಯವಾದಿಗಳಾದ ತುರುಕರನ್ನು ರಕ್ಷಿಸುವ ಬಸವಣ್ಣ ಬರುವನು. 'ಹಂಪೆಯ ವಿರುಪಾಕ್ಷನ ಲಿಂಗದ ಕಣಜ ಒಡೆದಾರು' ಎಂದು ಅಂದೇ ನೀಲಾಂಬಿಕೆ ಹೇಳಿದ್ದಾಳೆ. ಕೆಲವಾರು ತಿಂಗಳ ಹಿಂದೆ ಓರ್ವ ಬ್ರಾಹ್ಮಣ ಸ್ವಾಮಿಗಳು ವಿರುಪಾಕ್ಷಲಿಂಗ ಮುಕ್ಕಾಗಿದೆ ಎಂದು ಮೂಢ ಭಕ್ತರನ್ನು ಪ್ರೇರೇಪಿಸಿ, ಮುಜರಾಯಿ ಇಲಾಖೆಯವರಿಗಾಗಲೀ ದತ್ತಿ ಇಲಾಖೆಗಾಗಲೀ ತಿಳಿಸದೆ ರಾತ್ರೋರಾತ್ರಿ ಆ ಲಿಂಗವನ್ನು ತೆಗೆಸಿ,ಅಡಿಯಲ್ಲಿದ್ದ ನವರತ್ನಗಳನ್ನು ತೆಗೆದುಕೊಂಡು ಹೊಸದೊಂದು ಲಿಂಗವನ್ನು ಪ್ರತಿಷ್ಠಾಪಿಸಿದ ಬಗ್ಗೆ ವಾರ್ತಾ-ಪತ್ರಿಕೆಗಳಲ್ಲಿ ಓದಿದೆವು. ಇದು ಲಿಂಗದ ಕಣಜವ ಒಡೆದಾರು' ಎಂಬುದಕ್ಕೆ ವ್ಯಾಖ್ಯಾನವಾಗದೆ ?

ಹೊಟ್ಟೆಲ್ಲ ಹಾರೀತು ಗಟ್ಟೆಲ್ಲ ಉಳಿದೀತು.
ಪಟ್ಟಕ್ಕೆ ಚನ್ನಬಸವಣ್ಣ ಬರುವಾಗ ಸುವ್ವಿ
ಇಷ್ಟಲಿಂಗದ ನಿಷ್ಠರು ಸುವ್ವಿ !

ಎಂತಹ ಸುಂದರವಾದ ಮಾತಿದು !

ಬಿತ್ತಿತ್ತು ಬೆಳೆಯಿತು ಕೆಯ್ಯ ಕೊಯ್ಯಿತ್ತು ಗೂಡು ಮುರಿಯಿತ್ತು
ಕುತ್ತರಿಯೊಟ್ಟಿತ್ತು ಒಕ್ಕಿತ್ತು ತೂರಿತ್ತು ಅಳೆಯಿತ್ತು, ಸಲಗೆ ತುಂಬಿತ್ತು
ಕೂಡಲ ಸಂಗಮದೇವಯ್ಯಾ
ಮೇಟಿ ಕಿತ್ತಿತ್ತು ಕಣ ಹಾಳಾಯಿತಯ್ಯ ! (ಬ.ಷ.ಹೆ.ವ. ೧೪೨)

ಈ ವಚನದಲ್ಲಿ ವಿಶ್ವಗುರು ಬಸವಣ್ಣನವರು ತಮ್ಮ ಸಮಗ್ರ ಸಾಧನೆಯನ್ನೇ ವಿವರಿಸುತ್ತಾರೆ. ಅವರು ಹೊಸ ತತ್ತ್ವಗಳೆಂಬ ಬೀಜಗಳನ್ನು ಬಿತ್ತಿದರು. ಶರಣರ ಬೆಳೆಸು ಬಂದಿತು. ಲಿಂಗವಂತ ಸಮಾಜದ ಚೀಲದಲ್ಲಿ ತುಂಬಿಟ್ಟರು. ದುರ್ದೈವದಿಂದ ಕಲ್ಯಾಣ ಕ್ರಾಂತಿಯಾಯಿತು. ಬಸವಣ್ಣನೆಂಬ ಮೇಟಿಗೂಟವನ್ನು ಜಾತಿವಾದಿಗಳು ಕಿತ್ತರು; ಈ ಬೆಳೆಯನ್ನೆಲ್ಲ ಪರಿಷ್ಕರಿಸಲು ಸಾಧನವಾಗಿದ್ದ ಅನುಭವ ಮಂಟಪ ಎಂಬ ಕಣವೂ ಹಾಳಾಯಿತು.

ಅನುಯಾಯಿಗಳೆಂಬ ಕಾಳನ್ನು ಸಲಗೆ (ತುಂಬಿಡುವ ಸಾಧನ)ಗಳಲ್ಲಿ ತುಂಬಿಟ್ಟು ಆದಿ ಶರಣರು ಹೋದರು. ಕಾಲಾಂತರದಲ್ಲಿ ಅದರಲ್ಲೂ 19ನೆಯ ಶತಮಾನದ ಅಂತ್ಯದಲ್ಲಿ ಈ ಕಾಳುಗಳನ್ನು ಜೊಳ್ಳು ಮಾಡಲು ಬಗೆಬಗೆಯ ಹುಳಗಳು ಸೇರಿದವು. ಬಹುಶಃ ಬಸವಾದಿ ಪ್ರಮಥರ (ತತ್ತ್ವಗಳ) ಅವತಾರವಾಗುತ್ತಿದ್ದಂತೆಯೆ ಈ ಕೊಂಡೆಯ ಮಂಚಣ್ಣ (ರಂಥವರ) ಅವತಾರವೂ ಅಗತ್ಯವೇನೊ ! ಅದಕ್ಕೆ ತಾಯಿ ನೀಲಾಂಬಿಕೆ ಮುನ್ಸೂಚನೆ ನೀಡುತ್ತಾಳೆ. ಲಿಂಗವಂತ ಸಮಾಜದ ಸಲಗೆಯಲ್ಲಿ ತುಂಬಿದ ಕಾಳುಗಳು ಮತ್ತೊಮ್ಮೆ ಶೋಧಿಸಲ್ಪಡಬೇಕು. ಹೊಟ್ಟೆಲ್ಲ ಹಾರಿಹೋಗಿ ಗಟ್ಟಿಕಾಳು ಉಳಿಯಬೇಕು. ಚನ್ನಬಸವಣ್ಣ ಪಟ್ಟಕ್ಕೆ ಬಂದು ಅಂಥ ಇಷ್ಟಲಿಂಗ ತತ್ತ್ವವನ್ನು ಬೋಧಿಸಿ, ನಿಷ್ಠೆಯನ್ನು ಕಲಿಸುವನು.

"ಇಷ್ಟಲಿಂಗವು ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನ ಕುರುಹಲ್ಲ, ಪರಾತ್ಪರ ವಸ್ತು ಪರಮಾತ್ಮನ ಕುರುಹು. ಇದು ಮೂರ್ತಿಯಲ್ಲ" ಎಂದು ಮೊಟ್ಟಮೊದಲ ಬಾರಿಗೆ ಏಕದೇವೋಪಾಸನೆ ಕುರಿತು "ಲಿಂಗತತ್ತ್ವ ದರ್ಪಣ" ಎಂಬ ಕ್ರಾಂತಿಕಾರಿ ಪುಸ್ತಕವನ್ನು ಪೂಜ್ಯ ಅಪ್ಪಾಜಿಯವರು ಬರೆದರು. ಮತ್ತು ಇದು ಸಂಸ್ಕೃತ ಜನ್ಯ ಧರ್ಮವಲ್ಲ, ಕನ್ನಡದ ಧರ್ಮ ಎಂದು ಕನ್ನಡದಲ್ಲಿ ವಚನಗಳ ನೆರವಿನಿಂದ ಪೂಜೆ ಮಾಡುವ ಲಿಂಗಪೂಜಾ ವಿಧಾನವನ್ನು ಬರೆದರು. ಆ ಎರಡರ ಪರಿಷ್ಕೃತ ರೂಪಗಳೇ ಚುಳುಕಾದ ಚೇತನ ಮತ್ತು ದೇವಪೂಜಾ ವಿಧಾನ.

"ಎಣ್ಣೆ ಕಾವೇರಿ" ಎಂಬ ಸ್ಥಳದಲ್ಲಿ ಚನ್ನಬಸವಣ್ಣ ಬಂದಾಗ ವೈಭವದ ಸ್ವಾಗತ ಸಿಕ್ಕುವುದು ; ಆ ದೃಶ್ಯವು ಶಿವನು ತ್ರಿಪುರಕ್ಕೆ ನಡೆದು ಬಂದಂತಿರುತ್ತದೆ. ಹಗಲಿನಲ್ಲೇ ಸಾವಿರಾರು ದೀಪಗಳು ಉರಿಯುತ್ತವೆ. ನೀಲಾಂಬಿಕೆಯ ಕಾಲಜ್ಞಾನ ದಿ. 9-5-93 ರಂದು ಸತ್ಯವಾಯಿತು. "ಎಣ್ಣೆ ಕಾವೇರಿ" ಎಂಬ ಪದ ಕಾಲಜ್ಞಾನ ವಚನಗಳಲ್ಲಿ ವಿವಿಧ ಶರಣರಿಂದ ಬಳಕೆಯಾಗಿದೆ. ನಾನು ಮಾರ್ಚ ತಿಂಗಳಲ್ಲೇ ಕಾಲಜ್ಞಾನ ವಚನಗಳನ್ನು ಓದಿದೆನಾದರೂ ಈ ಪದಗಳಿಗೆ ಅಷ್ಟೊಂದು ಗಮನ ಹರಿಸಿರಲಿಲ್ಲ. ಕಾಟೇರಿಗೆ ಹೋಗುತ್ತಲೇ ಕಾರ್ಯಕರ್ತರನ್ನು ಕೇಳಿದೆ. "ಕಾವೇರಿ ನದಿಗೂ ಇಲ್ಲಿಗೂ ಎಷ್ಟು ದೂರ; ಈ ನದಿಗೂ ಅದಕ್ಕೂ ಸಂಬಂಧವಿದೆಯೆ? ಎಣ್ಣೆ ಏನಾದರೂ ಇಲ್ಲಿ ದೊರೆಯುವುದೆ?" ಆಗ ಅವರು ಹೇಳಿದರು. ನೀಲಗಿರಿ ಎಣ್ಣೆ ಇಲ್ಲಿ ತಯಾರಾಗುತ್ತದೆ. ಆದರೆ ಕಾವೇರಿ

ಹತ್ತಿರದಲ್ಲಿಲ್ಲ, "ಎಣ್ಣೆ ಕಾವೇರಿ" ಎಂಬುದು ಪುಸ್ತಕದಲ್ಲಿ ಮುದ್ರಣಗೊಂಡ ಹೆಸರು. 'ಎಣ್ಣೆ' ಪದಕ್ಕೆ ಅರ್ಥ ದೊರಕಿತು. ಕಾವೇರಿ ಬದಲು ಮೂಲ ತಾಳವೋಲೆ ಪ್ರತಿಯಲ್ಲಿ ಕಾಟೇರಿ ಇರಬಹುದೆ ? ತಾಡವೋಲೆಯಿಂದ ಹಸ್ತಪ್ರತಿ ಮಾಡಿ ಮುದ್ರಿಸಿರುವವರು ಕಾಟೇರಿ ಎಂಬುದು ಅರ್ಥವಾಗದೆ ಪರಿಚಿತವಾದ ಪದ ಕಾವೇರಿ ಎಂದು ಬರೆದಿರಬಹುದೆ? "ಹೀಗೆ ಅರ್ಥವಾದಾಗ ಬಹಳ ಆನಂದವಾಯಿತು. "ಎಣ್ಣೆ ಕಾಟೇರಿ"ಯಲ್ಲಿ ನಡೆಯುತ್ತಿರುವ ಬಸವ ಧರ್ಮ ಪ್ರಥಮ ಸಮ್ಮೇಳನ ಆದಿ ಶರಣರೇ ಸಂಕಲ್ಪಿಸಿದ ಸಮ್ಮೇಳನವೆ ಎನಿಸಿ ಇನ್ನಷ್ಟು ಹಿಗ್ಗಾಯಿತು.

ದಿ.9-5-1993ರಂದು ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ ಭವ್ಯ ಮೆರವಣಿಗೆಯನ್ನು ಅಲ್ಲಿಯ ಶರಣ ಬಂಧುಗಳು ಏರ್ಪಡಿಸಿದ್ದರು. ಕಾಟೇರಿ ಡ್ಯಾಂ ಸೈಟಿನ ಪ್ರವೇಶ ದ್ವಾರದಿಂದ ಸಭಾಮಂಟಪದವರೆಗೆ ಆ ಮೆರವಣಿಗೆ ಸಾಗಿತ್ತು. ಅದೇನು ಆ ಶರಣ ಬಂಧುಗಳ ಭಕ್ತಿ–ಉತ್ಸಾಹ ! ಆ ಶರಣರು ಬಸವಣ್ಣನ ನಿಜವಾದ ಕರುಳಕುಡಿಗಳು. ಅವರಿಗೆ 'ಬಸವಾ' ಎಂದರೆ ಸರ್ವಸ್ವ. ಕಾಟೇರಿ-ಸಕಲಟ್ಟಿ ಜನರು 70 ವರ್ಷಗಳಿಂದಲೂ ಬಸವ ಜಯಂತಿಯನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಕರ್ನಾಟಕದಲ್ಲಿ ಆಗಿನ್ನೂ ಆರಂಭವಾಗಿರಲೇ ಇಲ್ಲ ಎಂಬುದು ಗಮನಾರ್ಹ. ಅದಕ್ಕಾಗಿಯೇ ಬಸವ ಧರ್ಮದ ಮಹಾಜಗದ್ಗುರು ಪೀಠಾಧೀಶರನ್ನು ಬರಮಾಡಿಕೊಳ್ಳಲು ಎಲ್ಲಿಲ್ಲದ ಉತ್ಸಾಹ. "ಬಸವಲಿಂಗ ನಮಃಶಿವಾಯ" ಎನ್ನುತ್ತಾ ವೃದ್ಧರೂ, ಹೆಣ್ಣು ಮಕ್ಕಳು, ಸಣ್ಣಮಕ್ಕಳು ಮೆರವಣಿಗೆಯಲ್ಲಿ ಕುಣಿಯಲು ತೊಡಗಿದ್ದರು. ಅವರಿಂದ ಪ್ರೇರಿತರಾಗಿ ಕರ್ನಾಟಕದ ಶರಣರೂ ಕುಣಿಯಲು ತೊಡಗಿದರು. ಸಾಮಾನ್ಯವಾಗಿ ಕರ್ನಾಟಕದಲ್ಲಿ ಹೆಣ್ಣುಮಕ್ಕಳು ಕುಣಿಯುವುದಿಲ್ಲ, ಆದರೆ ನೀಲಗಿರಿ ಶರಣರ ಭಕ್ತಿ ಎಲ್ಲರನ್ನೂ ಭಾವ ಪುಳಕಿತಗೊಳಿಸಿ, ಕುಣಿಸಲು ಪ್ರೇರೆಪಿಸಿತ್ತು. ಒಂದು ಕಿಲೋಮೀಟರಿಗೂ ಮೀರಿ ಉದ್ದವಿದ್ದ ಮೆರವಣಿಗೆ, ಹಸಿರು ಬಣ್ಣದ ಗುಡ್ಡಗಳ ನಡುವೆ ಅಂಕುಡೊಂಕಾದ ರಸ್ತೆಯಲ್ಲಿ ವರ್ಣ ರಂಜಿತವಾಗಿ ಕಾಣುತ್ತಿತ್ತು.

ತಾಯಿ ನೀಲಾಂಬಿಕೆ ಇಪ್ಪತ್ತು ನೂರು ದೀವಟಿಗೆಗಳನ್ನು ಊಹಿಸಿದ್ದರೆ, ಐದು ಸಾವಿರಕ್ಕೂ ಮಿಕ್ಕಿ ಬಸವ–ಕಿರಣಗಳು ಮೆರವಣಿಗೆಯಲ್ಲಿ ಸಾಗಿದ್ದೊಂದು ವಿಶೇಷ, ಆದಿ ಶರಣರ ಕಾಲಜ್ಞಾನ ವಚನಗಳು ಒಂದೊಂದಾಗಿ ಸತ್ಯವಾಗುತ್ತಿರುವುದು ಗಮನಾರ್ಹವಾಗಿದೆ. ★

ದೂರವಾಣಿ ಸಂಖ್ಯೆ ಬದಲಾದ ಬಗ್ಗೆ

ಬಸವ ಗಂಗೋತ್ರಿ, ಕುಂಬಳಗೋಡು – ಇದರ ಫೋನ್ ನಂಬರು ಈಗ **437234** ಎಂದು ಬದಲಾಗಿದೆ. ಬೆಂಗಳೂರಿಗೆ ನೇರ ಸಂಪರ್ಕ ಹೊಂದಿದೆ. ಆಸಕ್ತರು ಗಮನಿಸಿರಿ.

—ವ್ಯವಸ್ಥಾಪಕರು

ಬಸವ ಗಂಗೋತ್ರಿ.

ಬಸವ ಸಂತಾನ—
ನೀಲಗಿರಿ ಲಿಂಗವಂತರು

ಅಕ್ಟೋಬರ ಶಿಬಿರ ಬಸವ ಗಂಗೋತ್ರಿಯಲ್ಲಿ ನಡೆದಿತ್ತು, ಆಗ ಪುಷ್ಪ ಮತ್ತು ಗುರು ಬಸವಪ್ಪ ಎಂಬ ಶರಣ-ದಂಪತಿಗಳು ಕಾರ್ಯಕ್ರಮ ನಡೆದುದು ಗೊತ್ತಾಗಿ ಬಂದರು. ಮೂರುದಿನ ಮಾತ್ರ ಉಳಿದಿದ್ದವು. ಬಸವ ತತ್ತ್ವದ ಶಿಬಿರ ನೋಡಿ ಅವರಿಗೆ ಸಂತೋಷ, ಬಸವ ಭಕ್ತರನ್ನು ಕಂಡು ನಮಗೆ ಆನಂದ. ನೀಲಗಿರಿಯ ಗುಡ್ಡಗಾಡುಗಳಲ್ಲಿ ಅವರು ವಾಸವಾಗಿರುವುದಾಗಿಯೂ, ಅಲ್ಲಿ ಲಿಂಗವಂತರು ಇರುವುದಾಗಿಯೂ, ಕನ್ನಡ ಓದಲು-ಬರೆಯಲು ಬರದಿದ್ದರೂ ವಚನಗಳನ್ನು ತಮಿಳಿನಲ್ಲಿ ಬರೆದುಕೊಂಡು ಕಲಿತಿರುವುದಾಗಿಯೂ ಹೇಳಿದರು. ಅವರು ಶರಣ ಮೇಳಕ್ಕೂ ಬಂದರು; ಶರಣ ಮೇಳದ ನಂತರ ಪೂಜ್ಯ ಮಾತೆ ಗಂಗಾದೇವಿಯವರನ್ನು ಕಾಟೇರಿಗೆ ಕಳಿಸಿಕೊಟ್ಟೆವು. ಶರಣೆ ಪುಷ್ಪಾ ಮತ್ತು ಶರಣ ಗುರುಬಸವಪ್ಪ ಅವರ ಮನೆಯಲ್ಲಿ ಇದ್ದುಕೊಂಡು ಅವರ ಆದರಾತಿಥ್ಯ ಸ್ವೀಕರಿಸಿ ಅಲ್ಲಿಯೇ ಪ್ರವಚನ ಮಾಡಿದರು. ಪ್ರಾಕೃತಿಕವಾಗಿ ಅದು ಬಲು ವಿಷಮ ಸಮಯ. ತೀವ್ರ ಚಳಿಗಾಲ. ನಮಗೂ ಗೊತ್ತಿಲ್ಲ. ಅಂಥ ಚಳಿ ಸಹಿಸಿಕೊಂಡು ಇವರೂ ಪ್ರವಚನ ಮಾಡಿದ್ದಾರೆ.

ಕಾಟೇರಿ ನಂತರ ಸಕಲಟ್ಟಿಯಲ್ಲಿ ಪ್ರವಚನ. ಒಂದು ಬೃಹತ್ ಗುಡ್ಡವನ್ನು ಏರಿ, ಇಳಿದು ಅಂಥ ವಿಷಮ ಹವೆಯಲ್ಲೂ ಸಕಲಟ್ಟಿಯವರು ದಿನಾ ಪ್ರವಚನಕ್ಕೆ ಬರುತ್ತಿದ್ದರಂತೆ. ಸಕಲಟ್ಟಿ ಶರಣರ ಮೇಲೆ ಅಪಾರವಾದ ಪ್ರಭಾವ ಬೀರಿದೆ. ಗಂಗಾ ಮಾತಾಜಿ ಅಂದರೆ ಅವರಿಗೆ ಅಚ್ಚು ಮೆಚ್ಚು. ಕೆಲವರು ನಮ್ಮ ತಾಯಿ ಅವರು ಅಂದರೆ, ಮತ್ತೆ ಕೆಲವರು ನಮ್ಮೂರ ಮಗಳು ಎನ್ನುತ್ತಾರೆ. ಸುಮಾರು 150 ಮನೆಗಳಿರುವ ಹಟ್ಟಿ (Camp) ಸಕಲಟ್ಟಿ. ಅದರ ಕೆಳಗಿರುವ ಇನ್ನೊಂದು ಹಟ್ಟಿ ಸೊಗತೊರೈ. ಪ್ರವಚನಾ ನಂತರ ರಾಷ್ಟ್ರೀಯ ಬಸವ ದಳ ಮಾಡಿಕೊಂಡಿದ್ದಾರೆ. ಅವರ ಶ್ರಮದ ಪ್ರತಿಫಲವೇ "ಅಖಿಲಭಾರತ ಬಸವ ಧರ್ಮ ಸಮ್ಮೇಳನ". ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬಂತೆ ಇವರು ಸಾಧಿಸಿದ್ದು, ಹೊತ್ತಭಾರ ಅಪಾರವಾದುದು.

ಸುಪ್ರಸಿದ್ಧ ಗಿರಿಧಾಮ ಊಟಿಯಲ್ಲಿ ಬೊಟಾನಿಕಲ್ ಗಾರ್ಡನ್ ಇದೆ. ಅಲ್ಲಿ ತೋಡರು ಎನ್ನುವ ದ್ರಾವಿಡ ಜನಾಂಗವೊಂದಿದೆ. ಎಲ್ಲ ಆದಿ ವಾಸಿಗಳು ಪಾಶ್ಚಿಮಾತ್ಯ ಸಂಸ್ಕೃತಿಯ ವೇಷಭೂಷಣ ಹೊಂದಿ, ಮೂಲಸ್ವರೂಪ ಕಳೆದುಕೊಳ್ಳುತ್ತಿರುವುದರಿಂದ ಸರ್ಕಾರ ಆ ತೋಡರರನ್ನು ವಿಶೇಷವಾಗಿ ಸಂರಕ್ಷಿಸಿದ್ದಾರೆ.

ಅಮೆರಿಕಾದ ಆದಿವಾಸಿಗಳು, ಅವರನ್ನು ರೆಡ್ ಇಂಡಿಯನ್ನರೆಂದು ಕೊಲಂಬಸ್ ಕರೆದ. ಈ ರೆಡ್ ಇಂಡಿಯನ್ನರು ಅಮೇರಿಕಾಕ್ಕೆ ವಲಸೆ ಬಂದವರೊಡನೆ ಘರ್ಷಣೆಗಿಳಿದು ನಾಶಹೊಂದಿದರು, ಬೆರೆತು ಮೂಲ ಸಂಸ್ಕೃತಿಯನ್ನು ಕಳೆದುಕೊಂಡರು. ಆಗ ಸರ್ಕಾರವು "ಇಂಥಾ ಜನ ಹೀಗೆ ಇದ್ದರು, ಅವರ ಸಂಸ್ಕೃತಿ ಇದು" ಎಂದು ಜಗತ್ತಿನಲ್ಲಿ ದಾಖಲೆ ಇರಲಿ ಎಂದು ಒಂದು ವಿಶಿಷ್ಟ ಪ್ರದೇಶವನ್ನು ಅಭಯಾರಣ್ಯ ಮಾಡಿ, ಅವರನ್ನು ಮೂಲ ಸ್ವರೂಪದಲ್ಲೇ ಕಾಪಾಡುವ ಯೋಜನೆ ಹಾಕಿತು.

ಈ ನೀಲಗಿರಿಯ ಕೆಲವು ಹಳ್ಳಿಗಳ ಕೆಲವು ಮನೆಗಳನ್ನು ನೋಡಿದರೆ ಅವರು ಕಲ್ಯಾಣದ ಶರಣ ಸಂಸ್ಕೃತಿಯ ವಾರಸುದಾರರು ಎಂಬುದು ಖಚಿತವಾಗುತ್ತದೆ.

ಹೃದಯ ಸ್ಪರ್ಶಿ ಪ್ರಸಂಗ : ಗುರು ಬಸವಣ್ಣನವರ ದಿವ್ಯ ಮೂರ್ತಿಯನ್ನು ತೊಟ್ಟಿಲಿಗೆ ಹಾಕಬೇಕು ಎಂದು ನನಗೆ ಆಸೆಯುಂಟಾಗಿ ಸ್ಟ್ಯಾಂಡ್ ಇರುವ ತೊಟ್ಟಿಲನ್ನು ಕೇಳಿದೆ. ನಮ್ಮಲ್ಲಿಲ್ಲ ಬೇರೆ ಕಡೆ ನೋಡುತ್ತೇವೆ ಎಂದು ಯಾರಲ್ಲೂ ಇಲ್ಲ ಎಂದು ಹೇಳಿದರು. ಆಗ ಶರಣ ರಾಜು ಅವರ ಪತ್ನಿ ಲಕ್ಷ್ಮಿ ಹೇಳಿದರು, "ಕಲ್ಯಾಣದಲ್ಲಿ ಕ್ರಾಂತಿಯಾಗಿ ಅವಸರ ಅವಸರದಿಂದ ಕೈಗೆ ಸಿಕ್ಕಿದ್ದನ್ನು ಎತ್ತಿಕೊಂಡು ಹೊರಡುವಾಗ ಒಬ್ಬರು ತೊಟ್ಟಿಲಲ್ಲಿ ಮಲಗಿಸಿದ್ದ ಮಗುವನ್ನು ಮರೆತು ಬಂದು ಬಿಟ್ಟರಂತೆ. " ಈ ದುರ್ಘಟನೆಯಿಂದಾಗಿ ಮನೆಯಲ್ಲಿ ಯಾರೂ ತೊಟ್ಟಿಲನ್ನು ಇಡಬಾರದು ಎಂದು ನೇಮ ಹಾಕಿಕೊಂಡರಂತೆ.

ಭಾಷೆ : ಒಬ್ಬರು ಹಿರಿಯರು ಹೇಳಿದರು. "ನಮಗೆ ವಚನಗಳನ್ನು ಓದಿದರೆ ಅರ್ಥವಾಗುತ್ತೆ. ನಿಮ್ಮ ಈಗಿನ ಕನ್ನಡ ಅರ್ಥವಾಗುವುದಿಲ್ಲ." ಈ ಜನರಿಗೆ 3 ಭಾಷೆ ಬರುತ್ತವೆ. ರಾಜ್ಯಭಾಷೆ ತಮಿಳು, ಸ್ಥಳೀಯ ಭಾಷೆಯಾದ ಬಡಗು, ಮಾತೃ ಭಾಷೆ ಕನ್ನಡ. ಇವರದ್ದು ವಚನ ಸಾಹಿತ್ಯದ ಪ್ರಕ್ರಿಯೆಯಿಂದ ಕೂಡಿದ ಕನ್ನಡವಾಗಿದೆ,

ದಡಿ : ಪೂಜ್ಯ ಅಪ್ಪಾಜಿಯವರು ನಡೆದಾಡಲು ಹೋಗುವವರಿದ್ದರು. ಬೆತ್ತ ಒಳಗಿತ್ತು. ಶರಣ ರಾಜು ಅವರ ಮೊಮ್ಮಗನನ್ನು ಕರೆದು ಬೆತ್ತ ತಗೊಂಡು ಬಾ ಎಂದರು. ಅವನಿಗೆ ಅರ್ಥವಾಗಲಿಲ್ಲ. ಆಗ ರಾಜು ಅವರು "ದಡಿ ತಗೊಂಬಾ" ಅಂದಾಗ ಆ ಹುಡುಗ ತಂದನು. ಬಸವಣ್ಣನವರ ವಚನದಲ್ಲಿ (೫೫೫) ಕೂಡಲ ಸಂಗಮದೇವಂಗೆ ಶರಣೆಂಬುವುದೊಂದು **ದಡಿ** ಸಾಲದೆ ? ಎಂದಿದೆ.

ಏಗು : ಶರಣ. ಚಂದ್ರಶೇಖರ ಮನೆಯಲ್ಲಿ ಪಾದಪೂಜೆ ನಡೆದಿತ್ತು. ತೀರ್ಥಪ್ರಸಾದ ತಗೊಳ್ಳಲು ಬಂದ ಓರ್ವ ಮುದ್ದಾದ ಹೆಣ್ಣುಮಗುವಿಗೆ ನಿನ್ನ ಹೆಸರೇನು ? ಎಂದೆ. ಅದು ನಾಚಿತು, ಅವರ ತಾಯಿ ಹೇಳಿದಳು, "ಏಗು" ಎಂದು. ಏಗು ಎಂದರೇನು ಎಂದು ಕೇಳಿದಾಗ ಆಕೆ ಹೇಳಿದಳು **"ಹೇಳು"** ಎಂದರ್ಥ, ಧರ್ಮಪಿತರ ವಚನ ೩೦೨ ರಲ್ಲಿ ಈ ಪದ ಬಂದಿದೆ. ಏಗುವುದು ಅಂದರೆ ಹೇಳುವುದು ಎಂಬರ್ಥದಲ್ಲಿ ಕರ್ನಾಟಕದಲ್ಲಿ ಎಲ್ಲೂ ರೂಢಿಯಲ್ಲಿಲ್ಲ. ಏಗಿ (ದುಡಿದು) ಏಗಿ ಸಾಕಾಗಿದೆ

ಎಂದು ಬಳಕೆಯಲ್ಲಿದೆ ಅಷ್ಟೆ.

ಕುಳ್ಳಿ : ಅಲ್ಲಿಯ ಜನರು ಯಾರಾದರೂ ಬಂದಾಗ, ಕುಳ್ಳಿ ಎನ್ನುತ್ತಾರೆ. ಕುಂಡರ್ರಿ, ಕೂತುಕೊಳ್ಳಿ, ಕುಳಿತುಕೊಳ್ಳಿ, ಕರ್ನಾಟಕದ ಇತರೆ ಭಾಗದಲ್ಲಿರುವ ಪ್ರಯೋಗಗಳು 'ಕುಳ್ಳಿ' ಎಂದರೆ ನೆಲ ಕುಳಿ ಹೋಹುದೆ ? (೨೪೧)

ಕುನ್ನಿ : ಕುನ್ನಿ ಎಂದರೆ ನಾಯಿ ಕುನ್ನಿ ಎಂದು ಕರ್ನಾಟಕದಲ್ಲಿ ಕುಖ್ಯಾತಿಯಿದೆ. ಬಸವಣ್ಣನವರ ವಚನದಲ್ಲಿ (೭೫೨) ಬಂದ ವಾಕ್ಯ "ನಮ್ಮ ಕುನ್ನಿಗೆ ಕೂಸ ಕೊಡಬೇಡ" ಎಂಬುದು ಅರ್ಥವೇ ಆಗುತ್ತಿರಲಿಲ್ಲ. ಊಹೆಯ ಮೇಲೆ ಇದು ಮದುವೆ, ಹೆಣ್ಣು-ಗಂಡುಗಳ ಕೊಡಕೊಳ್ಳುವಿಕೆಗೆ ಸಂಬಂಧಿಸಿದ್ದು ಎಂದು ಅರ್ಥೈಸಿದ್ದೆ. ಆದರೆ ಅಲ್ಲಿ ನಿಮಗೆ ಎಷ್ಟು ಕುನ್ನಿ ಇವೆ ಎಂಬ ಪ್ರಯೋಗ ಇಂದಿಗೂ ಇದೆ. ಕುನ್ನಿ-ಗಂಡು ಮಗು, ಕೂಸು-ಹೆಣ್ಣು ಮಗು ಎಂಬರ್ಥದಲ್ಲಿ ಬಳಕೆಯಲ್ಲಿದೆ.

ಯಾರಾದರೂ ಹಿರಿಯರ ಮುಂದೆ ಒಮ್ಮೆ ಬಸವಣ್ಣನವರ ವಚನಗಳನ್ನೆಲ್ಲ ಓದಿ, ಕೆಲವು ಪದಗಳ ಅರ್ಥವನ್ನು ತಿಳಿದುಕೊಳ್ಳಬೇಕೆಂದಿದೆ. ಏಕೆಂದರೆ ಬರುಬರುತ್ತ ಶುದ್ಧ ಕನ್ನಡವೇ ಇಲ್ಲದಂತಾಗುತ್ತಿದೆ. ಬೆಂಗಳೂರು-ಮೈಸೂರುಗಳಲ್ಲಿ ಇಂಗ್ಲೀಷ್ ಬೆರೆದ ಕನ್ನಡ, ಬೀದರದಲ್ಲಿ ಉರ್ದುಕನ್ನಡ, ಬಿಜಾಪುರ-ಧಾರವಾಡ ಜಿಲ್ಲೆಗಳಲ್ಲಿ ಮರಾಠಿ ಕನ್ನಡ, ಬಳ್ಳಾರಿ ಕಡೆ ತೆಲುಗು ಕನ್ನಡ, ಹೊಸೂರು ಕಡೆ ತಮಿಳು ಕನ್ನಡ. ಹೀಗೆ ಕನ್ನಡ, ವಿಕೃತಗೊಂಡಿದೆ. ಶ್ರೀ ಗಿರೀಶ ಕಾರ್ನಾಡರು ಬರೆದ ತಲೆದಂಡ' ನಾಟಕದ ತುಂಬಾ ಮರಾಠಿ ಮಿಶ್ರಿತ ಕನ್ನಡವೇ ತುಂಬಿ "ಇದು ಬಸವಣ್ಣನ ಬಾಯಲ್ಲಿ ಬಂದ ಕನ್ನಡವೇ" ಎಂದು ಆಶ್ಚರ್ಯವಾಗದೆ ಇರದು.

ಕುಂಕುಮ ಧಾರಣೆ :

ಚಂದ್ರಶೇಖರ ಮನೆಯಲ್ಲಿ ಪಾದಪೂಜೆ ನಡೆದಿತ್ತು. ಸುಮಾರು ಐವತ್ತು ಮಹಿಳೆಯರು ಸೇರಿದ್ದರು. ಎಲ್ಲರ ಹಣೆಯ ಮೇಲೂ ಲಕ್ಷಣವಾಗಿ ಭಸ್ಮ, ಯಾರ ಹಣೆಯ ಮೇಲೂ ಕುಂಕುಮವಿಲ್ಲ. ನಮಗೆ ಆಶ್ಚರ್ಯ, ಕರ್ನಾಟಕದಲ್ಲಿ ಹೆಣ್ಣು ಮಕ್ಕಳಿಗೆ ಮೊದಲು ಕಲಿಸುವ ಪಾಠ ಬರಿ ಹಣೆ (ಕುಂಕುಮವಿಲ್ಲದ ಹಣೆ) ಯಾರಿಗೂ ತೋರಿಸಬಾರದು ಎಂಬುದು. ಆ ಶರಣರಲ್ಲಿ ಇರುವ ಪರಿಪಾಠ ಬರಿ ಹಣೆ-ವಿಭೂತಿ ಇಲ್ಲದ ಹಣೆ ಯಾರಿಗೂ ತೋರಿಸಬಾರದು ಎಂಬುದು. ಕುಂಕುಮ ನಗಣ್ಯ. ಆಗ ಓರ್ವರು ಹೇಳಿದರು, "ನಾವು ಹಚ್ಚಿಕೊಳ್ಳುವುದೇ ಇಲ್ಲ. ಅಂಗಡಿಗೆ ಹೋಗುವಾಗ ಬೇರೆ ಸಮಾಜದವರು ಹಚ್ಚಿಕೊಳುತ್ತಾರಲ್ಲ ಎಂದು ಹಚ್ಚುತ್ತೇವೆ ಅಷ್ಟೆ."

ಕ್ರಾಂತಿಯೋಗಿ ಬಸವಣ್ಣ ಚಿತ್ರದಲ್ಲಿ ನಾವು ನೀಲಾಂಬಿಕೆ-ನಾಗಲಾಂಬಿಕೆಯರಿಗೆ ಕುಂಕುಮ ಹಚ್ಚದಿದ್ದುದಕ್ಕೆ ಅನೇಕರು ಟೀಕಿಸಿದ್ದರು. ಅದೇ ನಿಜ ಶರಣ ಸಂಸ್ಕೃತಿ.

ಲಿಂಗಾಯತ ಧರ್ಮವು ಸೃಷ್ಟಿಕರ್ತನನ್ನು ಅಂತಿಮ ಶಕ್ತಿ ಎಂದು ನಂಬಿ, ಪತಿ-ಪತ್ನಿ ಉಭಯತರೂ ದೇವರಿಗೆ ಅಡಿಯಾಳುಗಳು ಇಬ್ಬರೂ ಅವನಿಗೇ ಶರಣ ಸತಿಯರು, ಆದರಿಂದ ಕರ್ತನ ಲಾಂಛನವಾದ ವಿಭೂತಿಯೊಂದೇ ಸಾಕು ಎಂದು ಪ್ರತಿಪಾದಿಸುತ್ತದೆ. ಶುದ್ಧ ಸಾತ್ವಿಕತೆಯ ಸಂಕೇತವಾದ ವಿಭೂತಿಯ ಮೇಲೆ ರಕ್ತವರ್ಣದ ಲಾಂಛನ ಕುಂಕುಮ ಇಡುವುದನ್ನು ಮಾನ್ಯ ಮಾಡುವುದಿಲ್ಲ.

ಧರ್ಮಗುರು ಬಸವಣ್ಣ :

ಈ ಜನರಿಗೆ ಧರ್ಮಗುರು ಬಸವಣ್ಣನ ಹೊರತು ಇನ್ನೊಂದು ಆರಾಧ್ಯ ವಸ್ತುವಿಲ್ಲ,' ಅಂಗದ ಮೇಲೆ ಲಿಂಗ, ಪೂಜಾ ಗೃಹದಲ್ಲಿ ಬಸವ ಭಾವ ಚಿತ್ರ. ಸಮ್ಮೇಳನಕ್ಕೆ ಬಂದ ಜನರಿಗೆಲ್ಲ ಆ ಶರಣರ ಮನೆಗಳನ್ನು ನೋಡುವ ಅವಕಾಶ ಸಿಗಲಿಲ್ಲ. ಸಭಾ-ಭವನ ಇದ್ದುದು ಕಾಟೇರಿಯಲ್ಲಿ, ವಾಸಕ್ಕೆ ವ್ಯವಸ್ಥೆ ಮಾಡಿದ್ದು ಪಾಲಾಡ್ ಎಂಬಲ್ಲಿ. ಅವರ ಮನೆಗಳಲ್ಲಿ ಉಳಿದು ಬಂದ ಕೆಲವರು ಕರ್ನಾಟಕದವರು ಆಶ್ಚರ್ಯಪಟ್ಟರು. ಅವರು 70 ವರ್ಷಗಳಿಂದ ಬಸವ ಜಯಂತಿ ಆಚರಿಸುವ ದಾಖಲೆ ಇದೆಯಂತೆ. ಕರ್ನಾಟಕದಲ್ಲಿ ಶರಣ ಹರ್ಡೇಕರ್ ಮಂಜಪ್ಪ, ಧಾರವಾಡದ ಶ್ರೀ ಮೃತ್ಯುಂಜಯ ಸ್ವಾಮಿಗಳ ಪ್ರಯತ್ನದಿಂದ ಆರಂಭವಾಯಿತು. ನೀಲಗಿರಿ ಶರಣರು ಹಾಡುವ ಕೆಲವು "ಬಸವ ಸ್ತೋತ್ರ" ನಮ್ಮನ್ನು 12ನೆಯ ಶತಮಾನಕ್ಕೆ ಕರೆದೊಯ್ಯುತ್ತವೆ. ಅವರೆಲ್ಲ ಸಮ್ಮೇಳನ ವ್ಯವಸ್ಥಾಪಕರೇ ಆದುದರಿಂದ ಅವರಿಂದ ಹಾಡು ಹೇಳಿಸುವ ಅವಕಾಶ ದೊರೆಯಲಿಲ್ಲ. ಶರಣ ಮೇಳಕ್ಕೆ ಬಂದಾಗ ಕೇಳುವ ಅವಕಾಶಕ್ಕಾಗಿ ಕಾಯಬೇಕಾಗಿದೆ.

ಮೂಲ ಸ್ವರೂಪವನ್ನು, ಸಂಸ್ಕೃತಿಯನ್ನು ಕಳೆದುಕೊಂಡು ಶಿಥಿಲವಾಗಿರುವ ಕರ್ನಾಟಕದ ಲಿಂಗಾಯತ ಸಮಾಜದಿಂದ ದೂರವಿದ್ದು ಶರಣ ಸಂಸ್ಕೃತಿಯನ್ನು ಉಳಿಸಿಕೊಂಡಿರುವ ಈ ಬಸವ ಸಂತಾನವೇ ನಮ್ಮ ಧರ್ಮಗುರು ಬಸವಣ್ಣನವರು ಎಂಬುದಕ್ಕೆ ಸಾಕ್ಷಿ ಹೇಳುತ್ತದೆ. ನೂರಾರು ಮಠಗಳು, ಹತ್ತಾರು ಸ್ಥಾನಿಕ ಪಂಥ (Lococults) ಗಳ ಹಾವಳಿಯಿಲ್ಲದ್ದರಿಂದ ಬಹುಗುರೂಪಾಪನೆಯ ರೋಗ ಬಡಿಯದೆ ಅವರು ತಮ್ಮ ಸಂಸ್ಕೃತಿ ಉಳಿಸಿಕೊಳ್ಳಲು ಸಾಧ್ಯವಾಗಿದೆ.

ಅವರುಗಳಲ್ಲಿ ದೀಕ್ಷಾದಿ ವಿಧಿ-ವಿಧಾನ ಮುಂತಾಗಿ ಮನೆಯ ಹಿರಿಯರೇ ಮಾಡುವ ಪರಿಪಾಠವಿದ್ದಿತಂತೆ. ಇತ್ತೀಚೆಗೆ ಪಾಲಾಡಿನಲ್ಲಿ ಶ್ರೀ ಬಸವರಾಜ ಸ್ವಾಮಿಗಳು, ಗುರು ಬಸವ ಶಾಂತಿನಿಕೇತನ ಎಂಬ ಮಠ ಕಟ್ಟಿಕೊಂಡು ಧಾರ್ಮಿಕ ಕ್ರಿಯೆಗಳನ್ನು ನೆರವೇರಿಸುತ್ತಿದ್ದಾರೆ. ಹಟ್ಟಿಯ ಹಿರಿಯರು ಧಾರ್ಮಿಕ ಸಂಚಾಲಕತ್ವ ವಹಿಸುವುದು ಪುರೋಹಿತ ಶಾಹಿಯ ವಿಕೇಂದ್ರೀಕರಣ ಎಂಬುದು ಗಮನಾರ್ಹ.

ನೀಲಗಿರಿಯ ಕೆಲವು ಹಳ್ಳಿಗಳು ಶರಣ ಸಂಸ್ಕೃತಿಗೆ ಮಾದರಿಯಾಗಿವೆ. ಆದರೆ ಕೆಲವು ಶ್ರೀಮಂತರು ದೇವೀ ಉಪಾಸನೆಗೆ ಇನ್ನು ಕೆಲವು ಮೂಢರು ಅಯ್ಯಪ್ಪ ಸ್ವಾಮಿ

ಭಕ್ತಿಗೆ ಬಲಿಯಾದರೆ ಮತ್ತೆ ಕೆಲವರು ಕಾನ್ವೆಂಟ್ ಶಿಕ್ಷಣದಿಂದ ಆಂಗ್ಲ ಸಂಸ್ಕೃತಿಯ ಪ್ರಭಾವಕ್ಕೆ ಬಲಿಯಾಗುತ್ತಿದ್ದಾರೆ. ದುಡ್ಡಿರುವ ಇವರು ಜನರೊಡನೆ ಬೆರೆಯುವುದಿಲ್ಲ. ತಮ್ಮ ಧರ್ಮವನ್ನು ತಿಳಿದುಕೊಳ್ಳಲೂ ಸಿದ್ಧರಿರುವುದಿಲ್ಲ. ಅವರ ಸಂಪರ್ಕ ಇಟ್ಟು ಕೊಂಡಿರುವ ಕೋಟ್ಯಾಧೀಶ ಸ್ವಾಮಿಗಳು ಧರ್ಮ-ಸಂಸ್ಕೃತಿಯನ್ನಂತೂ ಕಲಿಸುವುದಿಲ್ಲ; ಅವರ-ಶಿಷ್ಯ ಸಂಬಂಧ ವ್ಯವಹಾರಿಕ ಸಂಬಂಧ ಮಾತ್ರ. ಇಂಥ ಮಹನೀಯರು ತಮ್ಮ ಧರ್ಮ-ಸಂಸ್ಕೃತಿಗಳನ್ನು ಕಳೆದುಕೊಳ್ಳುವ ಮೊದಲಿಗೇ ಎಚ್ಚರಗೊಳ್ಳಲು ರಾಷ್ಟ್ರೀಯ ಬಸವ ದಳಗಳು ಮತ್ತು ಜಾಗೃತಗೊಂಡ ನಿಜ ಶರಣರು ಕೆಲಸ ಮಾಡುವಂತಾಗಲೆಂದು ಹಾರೈಸೋಣ ಅಲ್ಲವೆ ? ಏಕೆಂದರೆ ಅವರು ನಮ್ಮ ನಿಜ ಬಂಧುಗಳು ! ★

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಅಖಿಲ ಭಾರತ ಬಸವ ಧರ್ಮ ಪ್ರಥಮ ಸಮ್ಮೇಳನ

ಸಮಗ್ರವರದಿ : **ಬಸವಕುಮಾರ್ ಪಾಟೀಲ, ಬೀದರ**

ಮಹಾಮಾನವತಾವಾದಿ, ಮಂತ್ರಪುರುಷ, ವಿಶ್ವವಿಭೂತಿ, ಧರ್ಮಗುರು ಬಸವಣ್ಣನವರ ತತ್ತ್ವಗಳಲ್ಲಿ ಶ್ರದ್ಧೆ-ವಿಶ್ವಾಸವಿರುವ ಬಸವ ಭಕ್ತರು, ಬಸವ ತತ್ತ್ವಾನುಯಾಯಿಗಳಾದ ಲಿಂಗವಂತರು ವರ್ಷಕ್ಕೊಮ್ಮೆಯಾದರೂ ಒಂದು ಸ್ಥಾನದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಪರಸ್ಪರರಲ್ಲಿ ಸಮಾನತ್ವ, ಸಹೋದರತ್ವ, ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ಪ್ರತಿವರ್ಷವೂ ಬಸವಕ್ರಾಂತಿ (ಸಂಕ್ರಾಂತಿ) ದಿನದಂದು ಶರಣ ಮೇಳವು ನಡೆಯುತ್ತಲಿದೆಯಷ್ಟೆ ?

ಇದೇ ರೀತಿಯಲ್ಲಿ ನಾಡಿನ ವಿವಿಧ ಭಾಗಗಳಲ್ಲಿ ಲಿಂಗವಂತ ಧರ್ಮೀಯರ ಸಮ್ಮೇಳನಗಳು ನಡೆದು ಸಂಸ್ಕಾರ, ಸಂಘಟನೆ ಸಾಧ್ಯವಾಗುವಂತೆ ಮಾಡಬೇಕೆಂದು ಶರಣ ಮೇಳದಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠದಿಂದ ಕರೆ ನೀಡಲಾಯಿತು. ಆ ಆದೇಶವನ್ನು ಮನ್ನಿಸಿ ನೀಲಗಿರಿ ಜಿಲ್ಲೆಯ ಸಕಲಟ್ಟಿ ರಾಷ್ಟ್ರೀಯ ಬಸವ ದಳದವರು ಮತ್ತು ಕಾಟೇರಿಯ ಪರವಾಗಿ ಗುರುಬಸವಪ್ಪನವರು 1993 ರ ಮೇ 8 ಮತ್ತು 9 ರಂದು ಅಖಿಲ ಭಾರತ ಬಸವ ಧರ್ಮ ಪ್ರಥಮ ಸಮ್ಮೇಳನವನ್ನು ಹಮ್ಮಿಕೊಂಡರು.

ಎತ್ತರವಾದ ಮುಗಿಲನ್ನು ಮುಟ್ಟುವ ಗಿರಿಶೃಂಗಗಳು, ಬೆಟ್ಟದ ತುದಿಯಿಂದ ಕೊಳ್ಳದವರೆಗೂ ಹಸಿರು ರತ್ನಗಂಬಳಿ ಹಾಸಿದಂತಹ ಟೀ ತೋಟಗಳು, ಮಧ್ಯೆಮಧ್ಯೆ ಟೀ ಗಿಡಗಳ ರಕ್ಷಣೆಗೆಂದು ಬೆಳೆಸಿದ ನೆರಳೀಯುವ ಎತ್ತರವಾದ ಮರಗಳು, ಗಿರಿಶೃಂಗಗಳ ಜೊತೆ ಮುಷ್ಟಿಯುದ್ಧ ಮಾಡಲೆಂಬಂತೆ ಧಾವಿಸಿ ಬಂದು ತಾಡಿಸಿ, ಚದುರಿ, ಹಿಂಜಿದ ಅರಳೆಯಂತೆ ಹಗುರವಾಗಿ ಸ್ಪರ್ಶಿಸಿ ಮುಂದೆ ಸಾಗುವ ಮೋಡಗಳು ಒಂದೊಂದೂ ಸುಂದರ. ಎಲ್ಲಿ ನೋಡಿದರೂ ಹಸಿರಿನ ಸಾಮ್ರಾಜ್ಯ. ಬಯಲುಸೀಮೆಯ ಜನರಿಗಂತೂ ಯಾವುದೋ ಕಾಲ್ಪನಿಕ ಸ್ವರ್ಗದಲ್ಲಿ ಸಂಚರಿಸಿದ ಅನುಭವ. ಬೆಟ್ಟಗಳನ್ನು ವಾಹನಗಳು ಹತ್ತುವಾಗ ಪಕ್ಕದ ಕೊಳ್ಳದಲ್ಲಿ ನಮ್ಮ ಮಟ್ಟಕ್ಕಿಂತಲೂ ಕೆಳಗೆ ತೇಲುವ ಮೋಡಗಳನ್ನು ನೋಡಿದಾಗ ನಾವು ವಿಮಾನದಲ್ಲಿ ಕುಳಿತು ಸಾಗುವ ಅನುಭವ.

ಇಂಥದೊಂದು ಅನುಭವವನ್ನು ಪೂಜ್ಯ ಮಾತಾಜಿಯವರು 'ಹೃದಯ ವೀಣೆ ಮಿಡಿದಾಗ' ಎಂಬ ಪದ್ಯ ಸಂಕಲನದಲ್ಲಿ ಹೀಗೆ ಚಿತ್ರಿಸಿದ್ದಾರೆ :

ಏರುತ ಏರುತ ಮುಗಿಲನು ಮೆಟ್ಟುತ ಮೇಲೇರಲು ನಾವು
ತೋರುವುದಲ್ಲಿ ಹಾಲಿನ ಶರಧಿಯು ನಮ್ಮಯ ಅಡಿಯಲ್ಲಿ ॥ಪ॥
ಸೂರ್ಯನ ಹೊನ್ನಿನ ಕಿರಣಗಳಿಲ್ಲಿ ಚೆಲ್ಲಿರೆ ಬೆಡಗಿನ ಸೊಬಗಾ
ನೂತನ ಲೋಕವು ಮೆರೆಯುತ ತಾನಿರೆ ಮಾತು ಮೂಕ
ವಾಗುವುದಿಲ್ಲಿ ॥ಅ. ಪ.॥
ಹಿಮದ ಬಣ್ಣದ ಹಂಸೆಯ ಹಿಂಡು ತೇಲುತ ತಾನಿಹುದೋ
ಬಿಳಿಯಾನೆಗಳು ಒಂದರಹಿಂದೊಂದು ಹಮ್ಮಿಂ ಹೊರಟಿಹವೊ ?
ಮೇಲಿಹ ನೀಲಿಯ ಬಾನಿನ ಅಂಗಳ ಶರಧಿಯ ಪ್ರತಿಬಿಂಬ
ಇರುಳಿನ ಆಗಸ ಹೊನ್ನಿನ ಹೂವಿನ ರೇಶಿಮೆ ಜರಿ ಸೀರೆ ॥೧॥
ಕೋಲನು ಇರಿಸಿ ಮೊಸರನು ಮಥಿಸಲು ತಕ ತಕ ಕುಣಿಯುವುದೆಂತೋ
ಅಂತೆಯೆ ಮೇಘಗಳ್ ಸ್ಪರ್ಧಿಸಿ ನಡೆವುದು ಕಣ್ಣಿಗೆ ಕಟ್ಟುವುದು.
ಅರಳೆಯ ಉಂಡೆಯ ಹಿಂಜುತ ಎಸೆಯುತ ಯಾರೀ ಆಟವನಾಡುವರೋ ?
ಮುಗಿಲಿನ ಕೆಳಗಿನ ಜನರಿಗೆ ಸೂರ್ಯನ ಮೊಗವನು ಮುಚ್ಚುವರೋ ? ॥೨॥
ಸಂತರ ಬದುಕನು ಮುಚ್ಚಲು ಎಳಸುವ ಕಷ್ಟದ ಹಿಂಡಂತೆ
ಸೂರ್ಯನ ಮೊಗಕವಕುಂತನವೆಳೆಯುವ ಕಾರ್ಯವು ನಡೆದಿಹುದೊ ?
ಮೋಡದ ಆಚೆಯ ಹೊನ್ನಿನ ಲೋಕವು ತತ್ತ್ವವ ಸಾರುತಿದೆ.
ತೋರುವ ಅಡಗುವ ಲೋಕದ ಆಚೆಯ ಸತ್ಯವ ತೋರುತಿದೆ ॥೩॥
ಶರಣರ ಬದುಕಿನ ತೆರೆಗಳ ಆಚೆ ಉಜ್ವಲ ಬೆಳಕೊಂದು
ಲೋಕದ ಕಣ್ಣಿಗೆ ಕಾಣದ ತೆರದಲಿ ಬೆಳಗುವ ತಾನಿಹುದು॥

ತೋರಿಕೆಯಾಚೆಗೆ ಇರುವಿಕೆಯೊಂದಿದೆ ಅದುವೆ ನಿಜ ತತ್ತ್ವ
ವಿಶ್ವದ ಲೀಲೆಯ ಹಿಂದೆ ತಾನಿಹುದು ಸತ್-ಚಿತ್-ಆನಂದ ॥೪॥

ಸೂರ್ಯೋದಯವಂತೂ ಚೇತೋಹಾರಿಯಾಗಿರುತ್ತದೆ. ಗುಡ್ಡ-ಬೆಟ್ಟಗಳ ಆಚೆಯಿಂದ ಹೊಂಗಿರಣಗಳನ್ನು ಚೆಲ್ಲುತ್ತ ಮೇಲೇರುತ್ತ, ಎದುರಿನ ಗುಡ್ಡಗಳನ್ನು ತುದಿಯಿಂದ ಸ್ವಲ್ಪಸ್ವಲ್ಪವೇ ಬೆಳಕಿನ ಆಲಿಂಗನದಲ್ಲಿ ಮುಚ್ಚುತ ಬರುವ ಸೂರ್ಯ ಅತ್ಯಂತ ರಮ್ಯ,

ಸಮ್ಮೇಳನದ ಸ್ಥಳವಂತೂ ಬಲು ಸುಂದರ. ಸುತ್ತಲೂ ಮುಗಿಲು ಮುಟ್ಟುವ ಶೃಂಗಗಳು. ಮಧ್ಯೆ ವಿಶಾಲವಾದ ಮೈದಾನ. ಅಂಥ ಮೈದಾನ (ಅದೂ ಕೇಂದ್ರಾಡಳಿತ ಪ್ರದೇಶ. ಅಲ್ಲಿ ಮದ್ದುಗುಂಡು ಬಾಂಬು ತಯಾರಿಸುವ ಕಾರ್ಖಾನೆ—ಮಿಲಿಟರಿ ನೆಲೆ ಇದೆ) ಸುತ್ತಮುತ್ತ ಎಲ್ಲೆಲ್ಲೂ ಇಲ್ಲ. ಆಕಾಶಕ್ಕೆ ಮತ್ತು ಬೆಟ್ಟಗಳಿಗೆ ಕನ್ನಡಿ ಹಿಡಿದಂತೆ ಪ್ರಶಾಂತವಾಗಿ ನಿಂತ ಕಾಟೇರಿ ಅಣೆಕಟ್ಟಿನ ಸ್ತಬ್ಧ ನೀರು. ಅದರ ಮೇಲಿಂದ ಬೀಸಿ ಬರುವ ತಂಗಾಳಿ ಆಪ್ಯಾಯಮಾನವಾಗಿರುತ್ತಿತ್ತು.

ಮೈದಾನದಲ್ಲಿ ವಿಶಾಲವಾದ ಬಸವ ಮಹಾಮಂಟಪ ; ಜಗನ್ಮಾತಾ ಅಕ್ಕಮಹಾದೇವಿ ವೇದಿಕೆ, ಶಿವಯೋಗಿ ಸಿದ್ಧಮಲ್ಲೇಶ್ವರ ಮಹಾದ್ವಾರ-ಪಕ್ಕದಲ್ಲೇ ಶಿವಯೋಗಿ ಶ್ರೀ ಗುರು ಮಲ್ಲೇಶ್ವರ ದಾಸೋಹ ಮಂಟಪದಲ್ಲಿ ಪ್ರಸಾದ ದಾಸೋಹಕ್ಕೆ ಏರ್ಪಾಡು.

ಶನಿವಾರ ದಿ. 8-5-1993 ರಂದು ಬೆಳಿಗ್ಗೆ 10-15 ಗಂಟೆಗೆ ಅಖಿಲ ಭಾರತ ಬಸವ ಧರ್ಮ ಪ್ರಥಮ ಸಮ್ಮೇಳನದ ಕಾರ್ಯಕಾರಿ ಸಮಿತಿಯ ಮಹಾಪೋಷಕಾಧ್ಯಕ್ಷರಾದ ಶರಣ ಎಲ್. ನಂಜಯ್ಯನವರು ಷಟ್ಕೋನ ಬಸವ ಧ್ವಜವನ್ನು ಆರೋಹಣ ಮಾಡಿದರು. ಸಂಕಲ್ಪ ಗೀತೆ-ಧ್ವಜ ಗೀತೆ ಹಾಡಿಸಿ, ಬಸವ ಭಕ್ತರು ನಾವು ಎಂಬ ಹಾಡಿನ ನಂತರ ಷಟ್ ಸೂತ್ರ ಘೋಷಣೆ ಮಾಡಿಸಲಾಯಿತು. ಪಾಲಾಡಿನ ಶ್ರೀ ಗುರು ಬಸವ ನಿಕೇತನದ ಪೂಜ್ಯ ಶ್ರೀ ನಿ. ಪ್ರ. ಬಸವರಾಜ ಸ್ವಾಮಿಗಳು ಶಿವಯೋಗಿ ಸಿದ್ಧ-ಮಲ್ಲೇಶ್ವರ ಮಹಾದ್ವಾರವನ್ನು ಉದ್ಘಾಟಿಸಿದರು.

ರಾಷ್ಟ್ರೀಯ ಬಸವ ದಳಗಳ ಬೆಂಗಳೂರು-ಧಾರವಾಡ-ಹುಬ್ಬಳ್ಳಿ ಶರಣೆಯರು ಸಮೂಹ ಗೀತೆಯ ಮೂಲಕ ಪ್ರಾರ್ಥನೆ ಮಾಡುತ್ತಲೇ, ಆದಿ ಪ್ರಮಥ ಗಣಾಧೀಶ ಬಸವಣ್ಣನವರ ಅಲಂಕೃತ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಕಾಟೇರಿಯ ಮುಖ್ಯಸ್ಥರಾದ ಆರ್. ಬಸವರಾಜನ್ ಅವರು ಎಲ್ಲರನ್ನೂ ಸ್ವಾಗತಿಸಿ, ಗುಡ್ಡಗಾಡಿನ ತಮ್ಮ ಪುಟ್ಟ ಹಳ್ಳಿಗೆ ಮಹಾಶರಣರನ್ನು ಬರಮಾಡಿಕೊಳ್ಳುವ ಸೌಭಾಗ್ಯ ಒದಗಿದ್ದಕ್ಕೆ ಆನಂದ ವ್ಯಕ್ತಪಡಿಸಿದರು. ಶಿವಶ್ರೀ ಶಿವಮಣಿ ಶಿವಪ್ಪಯ್ಯನವರು ವಿದ್ವತ್ ಪೂರ್ಣವಾಗಿ ಪ್ರಾಸ್ತಾವಿಕ ಭಾಷಣ ಮಾಡಿದರು. ಕೇವಲ ಕೆಲವರಿಂದ ಮುಖ್ಯವಾಗಿ ವೀರಶೈವ

ಮಹಾಸಭೆಯ ಕೆಲವು ಘಟಕಗಳಿಂದ ಪ್ರತ್ಯಕ್ಷವಾಗಿ ಮತ್ತೆ ಕೆಲವು ಸ್ವಾಮಿಗಳಿಂದ ಪರೋಕ್ಷವಾಗಿ ವೀರಶೈವ ಪದ ಬಳಸದೆ ಇದ್ದುದಕ್ಕೆ ಆಕ್ಷೇಪ ವ್ಯಕ್ತವಾದುದನ್ನು ಪ್ರಸ್ತಾಪಿಸಿ, ತಾವು ಶರಣ ಮೇಳದ **ಮಹಾಗಣ ಸಭೆಯಲ್ಲಿ** ಕೈಗೊಂಡ **'ಬಸವ ಧರ್ಮ'** ಸಮ್ಮೇಳನ ಪದಕ್ಕೆ ಅಂಟಿಕೊಂಡುದರ ಕಾರಣವನ್ನು ವಿವರಿಸಿದರು. "ಧರ್ಮ-ಗುರು ಬಸವಣ್ಣ ಯಾರಿಗೆ ಬೇಕೋ, ಅವರು ನಮ್ಮ ಹಿತವರು. ಯಾರು ಧರ್ಮ ಗುರುವಿಗೆ ಮಾನ್ಯತೆ ಕೊಡುವುದಿಲ್ಲವೋ ಅವರು ಎಷ್ಟೇ ದೊಡ್ಡವರಿದ್ದರೂ ನಮ್ಮ ಧರ್ಮಬಂಧುಗಳಲ್ಲ. ಎಂಥ ಕಷ್ಟನಷ್ಟಗಳ ನಡುವೆಯೂ ನಾವು ನಮ್ಮ ಧರ್ಮಗುರು ನಿಷ್ಠೆಯನ್ನು ಕಾಪಾಡಿಕೊಂಡು ಬಂದಿದ್ದೇವೆ. ಇದನ್ನು ಕದಲಿಸಲು ಯಾರಿಗೂ ಸಾಧ್ಯವಿಲ್ಲ." ಎಂದು ಚಪ್ಪಾಳೆಯ ನಡುವೆ ಘೋಷಿಸಿದರು. ಒಬ್ಬರು ಸ್ವಾಮಿಗಳು 'ವೀರಶೈವ' ಮುಖಂಡರನ್ನು ಕರೆಸಿ, "ನೀವು ಶ್ರೇಷ್ಠ ಜಾತಿಯವರು, ಅವರು (ಅಂದರೆ ಬಸವ ಧರ್ಮ ಪೀಠದವರು) ಬೇರೆಯವರಿಗೆ, ಮಾಂಸ ತಿನ್ನುವ ಜನಕ್ಕೆಲ್ಲ ದೀಕ್ಷೆ ಕೊಡುತ್ತಾರೆ. ಆದ್ದರಿಂದ ಅವರಿಗೆ ಪ್ರೋತ್ಸಾಹಿಸಬೇಡಿ." ಎಂದರಂತೆ. ಆದಕ್ಕೆ ಆ ಜನ ನನ್ನನ್ನು ಕೇಳಿದರು; ಹೀಗೆ ಮಾಡಬಹುದಾ ? ಎಂದು. ಆಗ ನಾನು ಹೇಳಿದೆ, "ನಾವು ಈ ಎಲ್ಲ ಪೂಜ್ಯರ ಪ್ರವಚನ ಕೇಳಿದ್ದೇವೆ. ಅವರಿಂದ ನಮ್ಮವರಿಗೆ ಮಾತ್ರವಲ್ಲ ಬೇರೆಯವರಿಗೂ ದೀಕ್ಷೆ ಕೊಡಿಸಿ-ದ್ದೇವೆ. ಅವರು ಬೋಧೆಯಿಂದ ಜನರನ್ನು ಸದಾಚಾರ ಸಂಪನ್ನರನ್ನಾಗಿ ಮಾಡಿ, ಹಸನಾದ ಭೂಮಿಯಲ್ಲಿ ಬೀಜ ಬಿತ್ತುವಂತೆ ದೀಕ್ಷೆ ಕೊಡುತ್ತಾರೆ. ಆದರೆ ನಿಮ್ಮ ಸ್ವಾಮಿಗಳು ಮಾಂಸಾಹಾರ, ಮದ್ಯಪಾನ ಮಾಡುವ ಲಿಂಗಾಯತರಿಗೆ ದೀಕ್ಷೆ ಕೊಡು-ತ್ತಾರೆ; ಅವರ ಮನೆಗಳಲ್ಲಿ ಉಂಡು ಬರುತ್ತಾರೆ. ಅವರನ್ನೇನಾದರೂ ಹೊರಗೆ ಹಾಕಿದ್ದಾರಾ? " ಎಂದು ಕೇಳಿದೆ. ಆಗ ಆ ಜನ ಉತ್ತರ ಕೊಡಲಾರದೆ ಹೋದರು; ಆಚಾರ ಗುಣ-ಶೀಲದಿಂದ ವ್ಯಕ್ತಿ ಧರ್ಮವಂತನಾಗುವನಲ್ಲವೆ ?

ಹಟ್ಟಿಯ ಹಿರಿಯರು, ಊರ ಗೌಡರು ಆದ ಬಸವಯ್ಯ ಇತ್ಯಾದಿ ಮುಖಂಡರು ಎಲ್ಲ ಅತಿಥಿಗಳಿಗೂ ಮಾಲಾರ್ಪಣೆ ಮಾಡಿದರು.

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮದ ಮಹಾಮನೆ ಮಹಾಮಠದಿಂದ ತಂದ ಬಸವ ಜ್ಯೋತಿಯ ನೆರವಿನಿಂದ ಜ್ಯೋತಿ ಹೊತ್ತಿಸಿ, ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಸಮ್ಮೇಳನವನ್ನು ಜಯಘೋಷದ ನಡುವೆ ಉದ್ಘಾಟಿಸಿದರು.

ಪೂಜ್ಯ ಮಹಾಜಗದ್ಗುರುಗಳು ತಮ್ಮ ಉದ್ಘಾಟನಾ ಭಾಷಣದಲ್ಲಿ ಹೀಗೆ ಪ್ರಸ್ತಾಪಿಸಿದರು.

"ಶರಣ ಶಿವಮಣಿ ಶಿವಪ್ಪನವರು ಬಹಳ ಮಾರ್ಮಿಕವಾಗಿ ಒಂದು ಮಾತನ್ನಾಡಿ-ದ್ದಾರೆ. ಅದುವೇ ಧರ್ಮಗುರು ನಿಷ್ಠೆ. ನಾವು ಜಗತ್ತಿನ ಇತರೆ ಬೃಹತ್ ಸಮಾಜಗಳನ್ನು ನೋಡುವಾ.

ಕ್ರೈಸ್ತಧರ್ಮ, ಜೀಸಸನಲ್ಲಿ ಶ್ರದ್ಧೆ–ಬೈಬಲದಲ್ಲಿ ನಿಷ್ಠೆ.

ಇಸ್ಲಾಂದಲ್ಲಿ ಮೊಹಮ್ಮದ ದೈವತ್ವದಲ್ಲಿ ಶ್ರದ್ಧೆ-ಕುರಾನದಲ್ಲಿ ನಿಷ್ಠೆ.

ಬೌದ್ಧ ಧರ್ಮದಲ್ಲಿ ಬುದ್ಧನಲ್ಲಿ ಶ್ರದ್ಧೆ, ಧರ್ಮಪದದಲ್ಲಿ ನಿಷ್ಠೆ

ಅದಕ್ಕಾಗಿಯೇ ಆ ಜನ ಸುಂದರ-ಬಂಧುರ ಸಮಾಜವನ್ನು ಕಟ್ಟಿದ್ದಾರೆ. ನಮ್ಮಲ್ಲಿ ಆ ನಿಷ್ಠೆ ಬೆಳೆಸುವ ಬದಲು ಕೆಡಿಸುವ ಗುರುಗಳೇ ಜಾಸ್ತಿಯಾಗಿದ್ದಾರೆ.

ದೇವರು ಸೃಷ್ಟಿಯನ್ನು ಕೊಟ್ಟುದಕ್ಕೆ ನಾವು ಕೃತಜ್ಞರಾಗಿರೋಣ. ಆದರೆ ದೇವರು ಮಾನವನು ಹೇಗೆ ಬದುಕಬೇಕೆಂಬುದನ್ನು ಕಲಿಸಲಿಲ್ಲ. ಅವನು ಶಿಲೆ ಸೃಷ್ಟಿಸಿದ, ಶಿಲ್ಪಿ ಕಲೆ ಸೃಷ್ಟಿಸಿದ. ಹಾಗೆಯೇ ಪ್ರವಾದಿಗಳು ಧರ್ಮ ಸಂಸ್ಥಾಪಕರು ದೇವರು ಕೊಟ್ಟ ಸೃಷ್ಟಿಯನ್ನು ಸಾರ್ಥಕಪಡಿಸಿಕೊಂಡು ಬದುಕುವ ಕಲೆ ಕಲಿಸಿದರು. ಕಳಬೇಡ ಕೊಲಬೇಡ ವಚನವನ್ನು ದೇವರು ಹೇಳಿದ್ದಾನೋ ಧರ್ಮಗುರು ಬಸವಣ್ಣನವರೊ ? ಜಗತ್ಕರ್ತ ಪರಮಾತ್ಮನಿಗೆ, ಧರ್ಮಕರ್ತ ಬಸವಣ್ಣ ಉಭಯತರಿಗೂ ನಾವು ಕೃತಜ್ಞರಾಗಿರಬೇಕು.

ಬಸವಣ್ಣನವರು ಕೊಟ್ಟುದು ಬಸವ ಧರ್ಮ, ಅದು ಇಷ್ಟಲಿಂಗವನ್ನೇ ಕೇಂದ್ರವನ್ನಾಗಿ ಇಟ್ಟುಕೊಂಡ ಕಾರಣ ಲಿಂಗಾಯತ ಧರ್ಮ. ಇಂಗ್ಲೀಷಲ್ಲಿ, GOD ಪದವಿದೆ. ಇದು ಸೃಷ್ಟಿ-ಸ್ಥಿತಿ-ಲಯಗಳನ್ನೂ ಸಂಕೇತಿಸುತ್ತದೆ. ಅದೇ ರೀತಿ ಲಿಂಗ ಪದವೂ ಸಹಿತ, ಇಂಥ ಲಿಂಗದೇವನನ್ನು ಇಷ್ಟ ಲಿಂಗರೂಪದಲ್ಲಿ ಧರಿಸಿ ಪೂಜಿಸುವುದನ್ನು ಧರ್ಮಗುರು ಬಸವಣ್ಣನವರು ನಮಗೆ ಕಲಿಸಿದ್ದಾರೆ. ಇಸ್ಲಾಂ ತತ್ತ್ವವಾಚಕ ಪದ, ಮಹಮ್ಮದೀಯ ಧರ್ಮ ಎನ್ನುವುದು ವ್ಯಕ್ತಿವಾಚಕ ಪದ. ಹಾಗೆಯೇ ಲಿಂಗಾಯತ ಎನ್ನುವುದು ತತ್ತ್ವವಾಚಕ ಪದ, ಬಸವ ಧರ್ಮ ಎನ್ನುವುದು ವ್ಯಕ್ತಿ ವಾಚಕಪದ.

ಬಸವಾದಿ ಪ್ರಮಥರು ರೂಪಿಸಿ ಕೊಟ್ಟ ಲಿಂಗಾಯತ ಸಮಾಜ ಎಂಬ ಕಾಳಿನ ಚೀಲದಲ್ಲಿ ಈ ಶತಮಾನದಲ್ಲಿ ಅದೂ ಇತ್ತೀಚೆಗೆ, ಐದು ಬಾಲಹುಳುಗಳು ಕೆಲವಾರು ನುಸಿಗಳು ಹೊಕ್ಕು ಕೆಲವು ಕಾಳನ್ನು ಜೊಳ್ಳು ಮಾಡಿವೆ. ಈಗ ಎಚ್ಚರವಹಿಸದಿದ್ದರೆ ಇಡೀ ಚೀಲದ ಕಾಳೇ ಜೊಳ್ಳಾಗಿ ಬಿಡಬಹುದು. ಅದಕ್ಕೆ ಈಗ ಐದು ಬಾಲಹುಳುಗಳು ಜೊಳ್ಳು ಮಾಡಿದ, ನುಸಿಗಳು ತಿಂದ ಕಾಳನ್ನು ಕೇರಿ ತೆಗೆದು, ಒಳ್ಳೆಯ ಕಾಳುಗಳನ್ನು ಸಂರಕ್ಷಿಸಬೇಕಾಗಿದೆ.

ವೀರಶೈವ ಮಹಾಸಭೆಯ ಒಂದು ಹಳೆಯ ನಿರ್ಣಯಗಳ ಪ್ರತಿ ಸಿಕ್ಕಿತ್ತು. ಅದರಲ್ಲಿ ಅವರು ಹೇಳಿದ್ದಾರೆ. ವೇದ ಉಪನಿಷತ್ತು ಆಗಮಗಳ ಮೇಲೆ ಆಧಾರಿತವಾದುದೇ ವೀರಶೈವ ಎಂದು. ಅವರ ವೀರಶೈವ ಹೀಗೇ ಇದ್ದರೆ ಅದು ಹಾಗೆಯೇ ಇರಲಿ. ಬಸವ ಭಕ್ತರು ತಮ್ಮ ಧರ್ಮ "ವೇದಕ್ಕೆ ಒರೆಯಕಟ್ಟುವೆ, ಶಾಸ್ತ್ರಕ್ಕೆ ನಿಗಳನಿಕ್ಕುವೆ, ತರ್ಕದ ಬೆನ್ನಬಾರನೆತ್ತುವೆ, ಆಗಮದ ಮೂಗಕೊಯ್ವೆ" ಎಂದು ಘೋಷಿಸಿದ ಬಂಡಾಯ ಧರ್ಮ ಎಂಬುದನ್ನು ಅರಿತಿದ್ದಾರೆ. ಅಂದ ಬಳಿಕ ಜಗಳವಾಡುವುದೇಕೆ ? ನಮ್ಮ ಅಪ್ಪ (ಬಸವಣ್ಣ)ನ ಆಸ್ತಿಯನ್ನು (ವಚನ ಸಾಹಿತ್ಯವನ್ನು) ನಾವು ತಗೊಂಡು ಬೇರೆಯಾಗೋಣ. ಅಪ್ಪನನ್ನು ಅಪ್ಪಾ ಎನ್ನದವರಿಗೆ ಅಂದರೆ ಧರ್ಮಗುರು ಗುರು

ಬಸವಣ್ಣನನ್ನು ಧರ್ಮಗುರು ಎನ್ನದವರಿಗೆ ಈ ಆಸ್ತಿಯ ಮೇಲೆ ಹಕ್ಕಿಲ್ಲ. ಹೀಗೆ ಸ್ಪಷ್ಟ ನಿಲುವನ್ನು ತಳೆಯುವ ಕಾಲವು ಬಂದೊದಗಿದೆ. ಆದಕ್ಕಾಗಿಯೇ ಅಖಿಲ ಭಾರತ ಬಸವ ಧರ್ಮ ಪ್ರಥಮ ಸಮ್ಮೇಳನ ಎಂದು ಕರೆದಿರುವುದು." ಪೂಜ್ಯ ಮಹಾಜಗದ್ಗುರುಗಳ ವೀರವಾಣಿ ಎಲ್ಲರನ್ನೂ ಮಂತ್ರಮುಗ್ಧಗೊಳಿಸಿತು.

ಅಲ್ಲಿಯ ಗಣ್ಯರು, ಕೇಂದ್ರಾಡಳಿತದ ಕಾರ್ಖಾನೆಯ ನಿರ್ದೇಶಕರಾದ ಶ್ರೀ ಎಲ್. ವಿಶ್ವನಾಥ ಅವರು ಲಿಂಗಾಯತ ಯಾರು? ಎಂಬ ತಮಿಳು ಪಟವನ್ನು ಬಿಡುಗಡೆ ಮಾಡಿದರು. ಸಮ್ಮೇಳನ ಸ್ಥಳವನ್ನು ಒದಗಿಸಿ ಕೊಟ್ಟುದಕ್ಕೆ, ಹಲವು ಬಗೆಯ ಸಹಕಾರ ನೀಡಿದ್ದಕ್ಕಾಗಿ ಅವರನ್ನು ಶಾಲು ಹೊದ್ದಿಸಿ ಸತ್ಕರಿಸಲಾಯಿತು.

ಶರಣ. ಎಲ್. ಗುರುಬಸವಪ್ಪನವರು ಸ್ಥಳೀಯ ಭಾಷೆ (ಬಡಗು) ಮತ್ತು ಕನ್ನಡ ಮಿಶ್ರಣ ಮಾಡಿದ ಭಾಷೆ ಸಮ್ಮೇಳನದ ವಿಶೇಷ ಕುರಿತು ಮಾತನಾಡಿದರು. ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರು ಬಸವ ಧರ್ಮ ಪೀಠದ ಘನವಾದ ಧ್ಯೇಯ, ಈ ಸಮ್ಮೇಳನದ ಉದ್ದೇಶ, ತಾವು ಇಲ್ಲಿಗೆ ಮೊದಲು ಬಂದ ಬಗೆ, ನಂತರ ಬೆಳೆದ ಆಧ್ಯಾತ್ಮಿಕ ನಿಕಟ ಸಂಬಂಧ ಕುರಿತು ಮಾತನಾಡಿದರು. ಪಾಲಾಡಮಠದ ಪೂಜ್ಯ ಶ್ರೀ ನಿ.ಪ್ರ. ಬಸವರಾಜ ಸ್ವಾಮಿಗಳು ಬಹಳ ಅಭಿಮಾನದಿಂದ ಆಶೀರ್ವಚನ ನೀಡಿದರು. ತಾವು ಮೈಸೂರು ಜಿಲ್ಲೆಯಲ್ಲಿ ಇದ್ದವರೆಂದು, ಇಲ್ಲಿಯ ಜನರ ಬಸವ ಭಕ್ತಿಯನ್ನು ನೋಡಿ ಇಲ್ಲೇ ಬಂದು ನೆಲೆಸಿದರೆಂದು, ಪೂಜ್ಯ ಗಂಗಾ ಮಾತಾಜಿ ಬಂದು ಪ್ರವಚನ ಮಾಡಿ, ರಾಷ್ಟ್ರೀಯ ಬಸವ ದಳ ಮಾಡುತ್ತಲೇ ಚಿನ್ನದ ಹೂವಿಗೆ ಸುವಾಸನೆ ಬಂದಂತೆ ಅಭಿಮಾನದ ಜೊತೆಗೆ ತಾತ್ತ್ವಿಕ ಅರಿವು ಮೂಡಿತೆಂದು ಬಣ್ಣಿಸಿದರು. ಪೂಜ್ಯ ಶ್ರೀ ಗಂಗಾಮಾತಾಜಿಯವರೇ ಇಷ್ಟೊಂದು ಪರಿವರ್ತನೆ ತರುತ್ತಿರಬೇಕಾದರೆ ಇವರ ಹಿಂದಿರುವ ಗುರುಶಕ್ತಿ ಹೇಗಿರಬಹುದೆಂದು ಎಲ್ಲರಿಗೂ ಪೂಜ್ಯ ದ್ವಯರನ್ನು ದರ್ಶಿಸುವ ಉತ್ಕಟ ಹಂಬಲವಿತ್ತು. ಆದಕ್ಕೀಗ ಸುಸಂಧಿ ಬಂದಿದೆ. ಇವರುಗಳು ಅದ್ಭುತ ಕ್ರಿಯಾಶೀಲ ಚೈತನ್ಯ ಮೂರ್ತಿಗಳು. ಇವರ ಆಗಮನದಲ್ಲಿ ಇಲ್ಲೆಲ್ಲ ಚೈತನ್ಯ ಸಂಚಾರವಾದಂತಾಗಿದೆ. ಇದು ಮುಂದಿನ ಜಾಗೃತಿಗೆ ನಾಂದಿಹಾಡದೆ ಇರದು."

ಕಡೆಯದಾಗಿ ಸಮ್ಮೇಳನಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಭಾಷಣ. ಮುದ್ರಿತ ಭಾಷಣದ ಕನ್ನಡ ಪ್ರತಿ ಮತ್ತು ತಮಿಳಿನ ಭಾಷಾಂತರ ಎರಡನ್ನೂ ಜನರಿಗೆ ಹಂಚಲಾಯಿತು.

"ಇಂದು ಬಸವ ಧರ್ಮದ ಇತಿಹಾಸದಲ್ಲಿ ಒಂದು ಸುದಿನ. ಒಂದು ಬೃಹತ್ತಾದ ಅವಿಭಕ್ತ ಕುಟುಂಬ, ರೇಲ್ವೆ ಗಾಡಿಯಲ್ಲಿ ಹೋಗುವಾಗ ಆ ಗಾಡಿ ಅಪಘಾತಕ್ಕೆ ಈಡಾಯಿತು. ತಂದೆ ಒಂದು ಕಡೆ ತಾಯಿ ಮತ್ತೊಂದು ಕಡೆ, ಮಕ್ಕಳು ಇನ್ನೊಂದು ಕಡೆ–ಹೀಗಾಗಿ ಆ ಕುಟುಂಬ ಚದುರಿ ಬಿಟ್ಟಿತು. ಅತ್ಯಂತ ಶ್ರೀಮಂತ ಮನೆತನದವರಾದರೂ ಏನೂ ಇಲ್ಲದ ಸ್ಥಿತಿಗೆ ಬಂದು ದಿಕ್ಕೆಟ್ಟು ಅಲೆದರು. ಅಂಥ ಎಲ್ಲರೂ ಒಂದು

ಕಡೆ ಸೇರಿ, ತಾವು ಶ್ರೀಮಂತ ಮನೆತನದ ವಾರಸುದಾರರೆಂದು ತಿಳಿದು, ಕಳೆದು ಕೊಂಡ ಆಸ್ತಿಯನ್ನು ಮರಳಿ ಪಡೆದರೆ ಎಷ್ಟು ಸಂಭ್ರಮ ಉಂಟಾಗಲಿಕ್ಕಿಲ್ಲ. ಈಗ ಆಗಿರುವುದು ಹೀಗೆಯೆ. ಕಲ್ಯಾಣ ಕ್ರಾಂತಿ-ಅದೂ ಸಮತಾವಾದದ ಸ್ಥಾಪನೆಗಾಗಿ ಆದಾಗ ಧರ್ಮಗುರು, ಧರ್ಮಸಾಹಿತ್ಯ, ಅನುಯಾಯಿಗಳು ಅತ್ತಿತ್ತ ಚದುರಿ ಒಂದು ಪರಂಪರೆಯ ವಾರಸುದಾರರು ಎಂಬ ಕಲ್ಪನೆಯಿಲ್ಲದೆ ಇಷ್ಟು ದಿನ ಅಲೆದುದಾಯಿತು. ಇಂದು ಪುನಃ ಎಲ್ಲರೂ ಒಂದೆಡೆ ಸೇರಿ ಮೂಲಪರಂಪರೆಯೊಡನೆ ತಮ್ಮನ್ನು ತಾವು ಬೆಸೆದುಕೊಳ್ಳುತ್ತಿರುವುದು ಹಿಗ್ಗಿನ ವಿಷಯ.

ಎಣ್ಣೆ ಕಾವೇರಿ (ಕಾಟೇರಿ)ಯಲ್ಲಿ ಹೀಗೆ ಶರಣರು ಸೇರುತ್ತಾರೆ ಎಂಬುದೂ ಆದಿ ಶರಣರ ಕಾಲಜ್ಞಾನದಲ್ಲಿ ಸಾಂಕೇತಿಕವಾಗಿ ವ್ಯಕ್ತವಾಗಿದೆ. ಇಂಥ ಗುಡ್ಡಗಾಡಿನಲ್ಲಿ ತೀರ ಅಲ್ಪ ಸಂಖ್ಯೆಯಲ್ಲಿರುವ ಶರಣರು ಇಂಥದೊಂದು ಬೃಹತ್ ಮತ್ತು ಯಶಸ್ವೀ ಸಮ್ಮೇಳನವನ್ನು ಸಂಘಟಿಸಿರುವುದು ಒಂದು ಪವಾಡವೇ ಸರಿ. ಈ ಪ್ರೇರಣೆ ಮತ್ತು ಯಶಸ್ಸಿಗೆ ಆದಿ ಶರಣರ ಸಂಕಲ್ಪವೂ ಕಾರಣ.

ಕಾಗೆಯೊಂದಗುಳ ಕಂಡರೆ ಕೂಗಿ ಕರೆಯದೇ
ತನ್ನ ಬಳಗವೆಲ್ಲವ ?

ಎಂಬುದರಲ್ಲಿ ಧರ್ಮಪಿತರು ನಮಗೆ ಆದೇಶ ನೀಡಿದ್ದಾರೆ. ಕಾಗೆ ಕೋಳಿಗಳಂತಹ ಪಕ್ಷಿಗಳು ಸಹ ಕೂಡಿ ಬದುಕುತ್ತವೆ, ಹಂಚಿ ಉಣ್ಣುತ್ತವೆ. ಅಂದಾಗ ಭಕ್ತನಾಗಿ ಭಕ್ತಿ ಪಕ್ಷ, ಹೊಂದದಿದ್ದರೆಂತು ? ಕುಡುಕರು ಸೆರೆ ಅಂಗಡಿ-ಬಾರ್‌ಗಳಲ್ಲಿ ತಮ್ಮ ಮತ ಧರ್ಮ ಜಾತಿ ಎಲ್ಲ ಮರೆತು ಕುಡಿಯುತ್ತ ಕೂರುವರು. ಜೂಜುಕೋರರೂ ಅಷ್ಟೇ. ಇಂಥ ವ್ಯಸನಿಗಳಲ್ಲಿರುವ **'ಕೂಡಿ ಬದುಕುವ'** ಗುಣವೂ ಮನುಷ್ಯರಲ್ಲಿ ಅದೂ ಸದ್ಭಕ್ತರಲ್ಲಿ ಇಲ್ಲದಿದ್ದರೆ ಹೇಗೆ ? ಅದಕ್ಕಾಗಿಯೇ ನಾವು ಬಂಧುತ್ವ ಭಾವನೆಯಿಂದ ಆಗಾಗ ಅಲ್ಲಲ್ಲಿ ಕೂಡಬೇಕು.

ಲಿಂಗಾಯತ ಧರ್ಮವು ಸ್ವತಂತ್ರ ಧರ್ಮ; ಹಿಂದೂ ಸಾಂಸ್ಕೃತಿಕ ಕಕ್ಷೆಯಲ್ಲಿ ಬರುವ ಸ್ವತಂತ್ರವಾದ, ಶೈವ ಮತ್ತು ದ್ರಾವಿಡ ಸಂಸ್ಕೃತಿಯ ಹಿನ್ನೆಲೆಯ ಧರ್ಮ. ವಿಶ್ವಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಇಂದಿನವರೆಗೂ ಅದು ಅವ್ಯಾಹತವಾಗಿ ಸಾಗಿಬಂದಿದೆ. ಆದರೆ ಇಂದಿನ ಲಿಂಗವಂತ ಸಾಹಿತ್ಯ-ಸಂಸ್ಕೃತಿಯ ವಿಪುಲ ಪರಂಪರೆ ಹೊಂದಿದ್ದರೂ ಆಚರಣೆಯ ದೃಷ್ಟಿಯಲ್ಲಿ ದಾರಿದ್ರ್ಯವನ್ನು ಪ್ರದರ್ಶಿಸುತ್ತಿದ್ದಾರೆ. ಲಿಂಗಾಯತ ಸಮಾಜದಲ್ಲಿ ಇಂದು ಹಲವಾರು ಬಗೆಯ ಜನರನ್ನು ಗುರುತಿಸಬಹುದು.

1. ತಮ್ಮ ಧರ್ಮದ ನಿಜ ಸ್ವರೂಪ ಅರಿಯದೆ ಮಾಂಸಾಹಾರ ಭಕ್ಷಣೆ, ಮದ್ಯಪಾನ ಮುಂತಾದ ಎಲ್ಲವನ್ನೂ ಮೈಗೂಡಿಸಿಕೊಂಡು ಅನಾಚಾರದ ತುಟ್ಟತುದಿಗೆ

(41 ನೇ ಪುಟಕ್ಕೆ ಮುಂದುವರಿದಿದೆ)

ಚಿಂತನೆಗಾಗಿ :

ತುಲಾಭಾರ ಶಾಸ್ತ್ರೀಯವೆ ?

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಸನ್ಮಾನ ಮಾಡುವಾಗ, 60 ವರ್ಷ ತುಂಬಿದಾಗ, 75 ವರ್ಷ - 100 ವರ್ಷ ದಾಟಿದಾಗ ತುಲಾಭಾರ ಎಂಬ ಒಂದು ಆಚರಣೆ ಮಾಡುತ್ತಾರೆ. ಮಹನೀಯರನ್ನು ತಕ್ಕಡಿಯ ಒಂದು ಪರಡಿಯಲ್ಲಿ ಕೂಡ್ರಿಸಿ, ಇನ್ನೊಂದು ಪರಡಿಯಲ್ಲಿ ನಾಣ್ಯ, ಉತ್ತುತ್ತಿ, ಖರ್ಜೂರ, ಬೆಳ್ಳಿ ಮುಂತಾದ ವಸ್ತುಗಳನ್ನು ತೂಗುವರು. ಆ ನಾಣ್ಯವನ್ನು ಗುರುಗಳಿದ್ದರೆ ಅವರಿಗೇ ಕಾಣಿಕೆಯಾಗಿ ಕೊಡುವರು; ಶ್ರೀಮಂತ ಲೌಕಿಕರಿದ್ದರೆ ತೂಗಿದ ನಾಣ್ಯವನ್ನು ಬಡಬಗ್ಗರು ಭಿಕ್ಷುಕರಿಗೆ ಕೊಡುವರು. ಉತ್ತುತ್ತಿ-ಖರ್ಜೂರ, ಮುಂತಾದವನ್ನು ಪ್ರಸಾದ ರೂಪದಲ್ಲಿ ಹಂಚುವರು. ಹೀಗೆ ತುಲಾಭಾರ ಅವರವರ ಆರ್ಥಿಕ ಸ್ಥಿತಿಗನುಸಾರವಾಗಿ ಬೆಲ್ಲ-ಸಕ್ಕರೆಯಿಂದ ಆರಂಭವಾಗುತ್ತದೆ.

ಪರಮ ಪೂಜ್ಯರಾದ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳಿಗೆ 60 ವರ್ಷ ತುಂಬಿದಾಗಲೂ ನಮ್ಮ ಕೆಲವು ಶಿಷ್ಯರು-ಅಭಿಮಾನಿಗಳು ನಾಣ್ಯಗಳನ್ನು ಸಂಗ್ರಹಿಸಿದ್ದರು. ಒಂದು ರೂಪಾಯಿ ನಾಣ್ಯದ ಮಹತ್ವ ಕಡಿಮೆ ಎಂದು 5 ರೂಪಾಯಿಗಳ ನಾಣ್ಯ ಕೂಡಿ ಹಾಕಿದ್ದರು. 60 ವರ್ಷದ ಆಚರಣೆ ಸಂದರ್ಭದಲ್ಲಿ ತುಲಾಭಾರ ಮಾಡಬೇಕೆಂದು ಕೆಲವರ ಆಸೆಯಾಗಿತ್ತು.

ಆದರೆ ನನ್ನ ಅಂತರಾತ್ಮಕ್ಕೆ ಒಪ್ಪಿಗೆ ಎನಿಸಲಿಲ್ಲ. ಈ ತುಲಾಭಾರ ಬೇಡ ಎಂದು ಹೇಳಿದೆ. ನನ್ನ ಮನಸ್ಸಿಗೆ ಅನಿಸಿದ್ದು ಇಷ್ಟು, ಒಬ್ಬ ಮಹಾನ್ ತ್ಯಾಗಿಯನ್ನು, ಜ್ಞಾನಿಯನ್ನು ಅವರುಗಳ ಉನ್ನತ ನಿಲುವನ್ನು ಈ ಜಡ ಪದಾರ್ಥಗಳಾದ ಬೆಳ್ಳಿ, ನಾಣ್ಯ, ಖರ್ಜೂರ, ಉತ್ತುತ್ತಿ, ಇವುಗಳ ತೂಕಕ್ಕೆ ಅಳೆಯುವುದೆ ? ಇಂಥ ತುಲಾಭಾರ ಆ ವ್ಯಕ್ತಿಗಳ ಹಿರಿಮೆಯನ್ನು ವರ್ಧಿಸಬಲ್ಲುದೆ ?

ಘನವಂತರಾದ ಸಾರ್ವಜನಿಕ ಸೇವೆ ಗೈದ ಮಹನೀಯರನ್ನು ಗೌರವಿಸಬೇಕು. ಇದು ಸಮಾಜದ ಅನುಯಾಯಿಗಳ ಆದ್ಯ ಕರ್ತವ್ಯ. ಆದರೆ ಅವರನ್ನು ಜಡ ತಕ್ಕಡಿಯಲ್ಲಿಟ್ಟು ಜಡ ವಸ್ತುಗಳಿಟ್ಟು ತೂಗುವ ಮೂಲಕವೇ ? ಅವರಿಗೆ ಕಾಣಿಕೆ ಸಮರ್ಪಿಸಬೇಕಲ್ಲವೆ ? 1. ಕೆ. ಜಿ. ಗೆ ಎಷ್ಟು ನಾಣ್ಯ ಬರುತ್ತವೊ. ತೂಗಿ, ತೂಕ ಯಂತ್ರದ ಮೂಲಕ ಅವರ ತೂಕ ನೋಡಿ ಅಷ್ಟು ಲೆಕ್ಕ ಮಾಡಿ ಕಾಣಿಕೆ ಸಲ್ಲಿಸಬಹುದಲ್ಲವೆ ?

ಇನ್ನು ಕೆಲವು ಶ್ರೀಮಂತರನ್ನು ಕಲ್ಲುಸಕ್ಕರೆ, ದ್ರಾಕ್ಷಿ, ಉತ್ತುತ್ತಿ, ಖರ್ಜೂರಗಳಿಂದ ತೂಗಿ ಅದನ್ನು ಬಡಬಗ್ಗರು ಭಿಕ್ಷುಕರಿಗೆ ಕೊಡುವರು. ಇದರಲ್ಲಿ ಅಹಂ ತುಂಬಿರುತ್ತದೆ. 'ಮಾಡಿದೆನೆಂಬುವುದು' ಕಾಡುತ್ತಿರುತ್ತದೆ. ತಾನು ಉಳ್ಳವನು. ಇಲ್ಲದವರಿಗೆ ಕೊಡುವೆನೆಂಬ ಹಮ್ಮು ಇರುತ್ತದೆ.

ಈ ವಿಚಾರದ ಹಿನ್ನೆಲೆಯಲ್ಲಿ ನಾನು ತುಲಾಭಾರವನ್ನು ಒಪ್ಪುವುದಿಲ್ಲ. ವಚನ ವಾಙ್ಮಯದಲ್ಲಿ ಈ ಬಗ್ಗೆ ಎಲ್ಲಿಯೂ ಪ್ರಸ್ತಾಪವಾದಂತೆ ತೋರದು. ಆದ್ದರಿಂದ ನಿರ್ಣಯಿಸಲು ಈಗ ಶರಣರ ಸಭೆಯ ಮುಂದೆ ಈ ವಿಷಯ ಇಡುತ್ತಿದ್ದೇನೆ. ಶರಣ ಬಂಧುಗಳು ಆಲೋಚಿಸಿರಿ. ನಿಮ್ಮ ಅಭಿಪ್ರಾಯ ತಿಳಿಸಿರಿ. ವಚನಗಳಲ್ಲಿ ಎಲ್ಲಾದರೂ ಅನುಮೋದನೆ ಅಥವಾ ನಿಷೇಧ ಇದ್ದರೂ ನಮ್ಮ ಗಮನಕ್ಕೆ ತನ್ನಿರಿ. ★

ಷಡಂಗ ದಾಸೋಹ

—ಮಾತಾಜಿ

ಜನ್ಮ ಜನ್ಮಕ್ಕೆ ಹೋಗಲೀಯದೆ 'ಸೋಹಂ' ಎಂದೆನಿಸದೆ
'ದಾಸೋಹಂ' ಎಂದೆನಿಸಯ್ಯಾ
ಲಿಂಗಜಂಗಮದ ಪ್ರಸಾದದ ನಿಲವ ತೋರಿ ಬದುಕಿಸಯ್ಯಾ
ಕೂಡಲ ಸಂಗಮದೇವಾ, ನಿಮ್ಮ ಧರ್ಮ —ಬ. ಷ. ವ. 833

ಜಹಿರಾಬಾದದಲ್ಲಿ ನಡೆದ ಶರಣ ಸಮ್ಮೇಳನಕ್ಕೆ ಅತಿಥಿಗಳಾಗಿ ಬಂದಿದ್ದ ಖ್ಯಾತ ವಿದ್ವಾಂಸ ಡಾ|| ಭಗವಾನ್‌ದಾಸ್ ತಿವಾರಿಯವರು ಭಾಷಣ ಮಾಡುತ್ತ 'ಶಿವೋಹಂ' ಭಾವ ತಳೆದು ನಿಲ್ಲುವುದೇ ಶರಣನ ಗುರಿ, ಇದುವೆ ಅದ್ವೈತ-ಶಿವಾದ್ವೈತ ಎಂದು ಮಾತನಾಡಿದರು. ಸಮ್ಮೇಳನಾಧ್ಯಕ್ಷೆ ನಾನಾಗಿದ್ದರೂ ಸಮಾರೋಪ ಭಾಷಣ ಮಾಡಲಿಕ್ಕೆ, ಸ್ವಾತಂತ್ರ್ಯವಿದ್ದರೂ ಸಮಯವಿರುತ್ತಿರಲಿಲ್ಲ. ಎಲ್ಲಾ ಭಾಷಣಕಾರರ ಉಪನ್ಯಾಸಗಳನ್ನು ವಿಶ್ಲೇಷಿಸುತ್ತ ಹೋದರೆ ಸಮಯವು ವ್ಯರ್ಥವಾಗುತ್ತದೆ ಎಂದು ಹೇಳಬೇಕಾದ ಸಂಗತಿಗಳನ್ನು ಹೇಳುತ್ತಿದ್ದೆ ಅಷ್ಟೆ.

ಇಂದು ಬಹಳ ಜನ ಷಟಸ್ಥಲ-ಶಕ್ತಿ, ವಿಶಿಷ್ಟಾದ್ವೈತಗಳು ಅದ್ವೈತ-ಶಿವಾದ್ವೈತವನ್ನು ಹೇಳುತ್ತವೆಂದೇ ತಿಳಿದಿದ್ದಾರೆ. ಈ ತಪ್ಪು ಕಲ್ಪನೆಗೆ ಧರ್ಮಪಿತರ ಮೇಲಿನ ವಚನದಲ್ಲಿದೆ ಉತ್ತರ.

ಸ ಅಹಂ, ಶಿವ ಅಹಂ ಎಂಬುದು ಜನ್ಮ ಜನ್ಮಕ್ಕೆ ಕರೆದೊಯ್ಯುತ್ತದೆ. ಆದ್ದರಿಂದ ಈ ಭಾವ (ಸಿದ್ಧಾಂತ) ನನಗೆ ಬೇಡ ; ದಾಸೋಹಂ ಭಾವ ನನಗಿರಲಿ. ಲಿಂಗದ ಅಂದರೆ ಸೃಷ್ಟಿಕರ್ತನ ಪ್ರಸಾದ (*Grace*) ಮತ್ತು ಜಂಗಮದ ಪ್ರಸಾದ (ಅನುಗ್ರಹ-ಆಶೀರ್ವಾದ) ನನಗಿರಲಿ ಎನ್ನುತ್ತಾರೆ ಧರ್ಮಪಿತ ಬಸವಣ್ಣನವರು. ಇದೊಂದೇ ವಚನ ಸಾಕು ಬಸವ ಧರ್ಮ ಅದ್ವೈತವನ್ನು ಪ್ರತಿಪಾದಿಸುವ ಧರ್ಮವಲ್ಲ ಎಂದು ಹೇಳಲು.

ಬಸವ ಪ್ರಣೀತ ಲಿಂಗವಂತ ಧರ್ಮ ಸೇಶ್ವರವಾದಿ ಧರ್ಮ, ಸೃಷ್ಟಿಕರ್ತನನ್ನು ನಂಬುವ ಮತ್ತು ಆವನ ಕೃಪೆಯಲ್ಲಿ ವಿಶ್ವಾಸವಿಟ್ಟ, ಅವನನ್ನು ಪರಮೋಚ್ಚ ಶಕ್ತಿ ಎಂದು ಗೌರವಿಸುವ ಧರ್ಮ. ಅದ್ವೈತವು ಜೀವಪರಮಾತ್ಮರಲ್ಲಿ ಅಭಿನ್ನತೆ ಹೇಳುವ ಸಿದ್ಧಾಂತ.

ತ್ರಿವಿಧ ದಾಸೋಹವು ಬಸವ ಧರ್ಮದಲ್ಲಿ ವಿವಿಧ ಬಗೆಯಿಂದ ಪ್ರಕಟಗೊಳ್ಳುತ್ತದೆ.

ತನುವನ್ನು — ಧರ್ಮಗುರುವಿಗೂ
ಮನವನ್ನು — ಸೃಷ್ಟಿಕರ್ತನಿಗೂ
ಧನವನ್ನು — ಸಮಾಜಕ್ಕೂ

ಸವೆಸಬೇಕೆಂಬುದೇ ಈ ತ್ರಿವಿಧ ದಾಸೋಹದ ತಿರುಳು. ಧರ್ಮ ಅಥವಾ ಸತ್ ಪರಂಪರೆ ಉಳಿಯಬೇಕು. ಎಂದರೆ ಇವುಗಳು ಸಾಧನವಾಗಿ ಬೇಕೇಬೇಕು ಎಂಬುದು ಧರ್ಮಪಿತರ ಅಭಿಪ್ರಾಯ.

ಇಂದು (8-3-93) ಆಲೋಚಿಸುತ್ತಾ ಕುಳಿತಾಗ ಧರ್ಮದ ಉಳಿವು ಮತ್ತು ಬೆಳವಿಗೆಗೆ ಇನ್ನೂ ಕೆಲವು ಅಂಶಗಳು ಬೇಕೇನೋ ಅನ್ನಿಸಿ ಈ ರೀತಿ ಆಲೋಚನೆ ಸುಳಿಯಿತು. ದಾಸೋಹದಲ್ಲಿ ಷಡಂಗಗಳನ್ನು ಗುರುತಿಸಬಹುದು. ತನು-ಮನ-ವಚನ-ಧನ-ಸಮಯ- ಮತ್ತು ಪ್ರಾಣ. ಯಾವುದೇ ಕಾರ್ಯಮಾಡಬೇಕಾದರೂ ತನುವು ಅದರಲ್ಲಿ ತೊಡಗಬೇಕು. ಕೆಲವರು ತಮ್ಮಲ್ಲಿರುವ ಹಣವನ್ನು ದೇಣಿಗೆಯಾಗಿ ಕೊಟ್ಟರೆ ಸಾಕು ಎಂದು ತಿಳಿದಿರುತ್ತಾರೆ. ಅದಕ್ಕಾಗಿ ಹಗಲಿರುಳು ಹಣವನ್ನು ಸಂಪಾದಿಸುವುದರಲ್ಲೇ ಆಸಕ್ತರಾಗಿರುತ್ತಾರೆ. ಕೇವಲ ಹಣವನ್ನು ದೇಣಿಗೆಯಾಗಿ ಕೊಟ್ಟರೆ ಸಾಲದು, ತನ್ನ ತನುವೂ ಧಾರ್ಮಿಕ ಕ್ರಿಯೆಯಲ್ಲಿ ತೊಡಗಬೇಕು ಎಂಬುದನ್ನು ಮರೆತಿರುತ್ತಾರೆ.

ಮನಸ್ಸು ತೊಡಗಬೇಕು ; ಲಿಂಗಪೂಜೆಯಲ್ಲಿ, ಧರ್ಮಚಿಂತನೆಯಲ್ಲಿ, ಜ್ಞಾನ ಸಂಪಾದನೆಯಲ್ಲಿ ಮನಸ್ಸು ಆಸಕ್ತವಾಗಬೇಕು. ಮನಸ್ಸು ಅಭಿಮಾನವನ್ನು ರೂಢಿಸಿಕೊಳ್ಳಬೇಕು.

ಧನವು ವಿನಿಯೋಗವಾಗಬೇಕು : ಕೆಲವು ಜನರು ಮುಖ್ಯವಾಗಿ ಧರ್ಮದ ಬಗ್ಗೆ ಬರೆಯುವವರು, ಸಾಹಿತಿಗಳು ಎಂದೆಂದೂ ಧರ್ಮಕ್ಕಾಗಿ ಧನ ತ್ಯಾಗವನ್ನು ಮಾಡುವುದಿಲ್ಲ. ಅವರು ಬರವಣಿಗೆಯ ಮೂಲಕ ತಾವು ಮಹತ್ತರವಾದ ಸೇವೆ ಸಲ್ಲಿಸುತ್ತಿರುವುದಾಗಿ ನಂಬುವರು. ಮಾನವ ಶರೀರದಲ್ಲಿ ವಿವಿಧ ಅವಯವಗಳಿರುತ್ತವೆ. ಯಾವ ಅವಯವಕ್ಕೆ ವ್ಯಾಯಾಮವಿರುವುದಿಲ್ಲವೋ, ಚಲನೆ ಇರುವುದಿಲ್ಲವೋ ಆ ಅವಯವವು ರೋಗಗ್ರಸ್ತವಾಗುತ್ತವೆ. ಅದೇ ರೀತಿ ಈ ಅಂಶಗಳೂ ಸಹ. ಧರ್ಮಕ್ಕಾಗಿ ಪ್ರತಿಯೊಬ್ಬ ವ್ಯಕ್ತಿಯ ತನು-ಮನ-ಧನ ಸವೆಯಲೇಬೇಕು.

ವಚನ ದಾಸೋಹ : ಧರ್ಮದ ಬಗ್ಗೆ ತಪ್ಪು ಕಲ್ಪನೆ ಹೊಂದಿದ, ಸಂದೇಹ ತುಂಬಿಕೊಂಡ ಅನುಯಾಯಿಗಳಿರಬಹುದು; ಅಥವಾ ಈತನ ಧರ್ಮದ ಬಗ್ಗೆ ಟೀಕಿಸುವ ಪರವಾದಿಗಳಿರಬಹುದು. ಅಂಥವರನ್ನು ತಾಳ್ಮೆಯಿಂದ, ಜಾಣ್ಮೆಯಿಂದ ತಿದ್ದುವ ವಚನ ದಾಸೋಹವೂ ಬಹುಮುಖ್ಯ. ಕೆಲವರು ಮೌನ ತಾಪಸಿಗಳಿರುವರು. ಅವರು ಮಾತೇ ಸೂತಕ, ಮೌನವೇ ದೊಡ್ಡ ಸಾಧನೆ ಎಂದು ತಿಳಿದಿರುವರು. ಇನ್ನೊಬ್ಬರನ್ನು ನಾಸ್ತಿಕತೆದಿಂದ ಆಸ್ತಿಕತೆಗಾಗಲೀ, ಅನೈತಿಕತೆಯಿಂದ ನೈತಿಕತೆಗಾಗಲೀ ಪರಿವರ್ತಿಸುವ ಕಳಕಳಿ ಹೊಂದಿರುವುದಿಲ್ಲ. ಅಪಾರ ಧನವನ್ನು ಗಳಿಸಿ ದಾನಮಾಡದೆ ಇರುವ ಕಡು ಲೋಭಿಯಂತೆಯೇ ಇವರೂ ಸಹ. ಆದ್ದರಿಂದ ಒಂದು ಧರ್ಮದ ಉಳುವಿಗೆ ವಚನ ದಾಸೋಹವೂ ಬಹಳ ಮುಖ್ಯ.

ಸಮಯ ದಾಸೋಹ : ಅನುಭವ ಜ್ಞಾನದಿಂದ ಅನ್ನಿಸುತ್ತಿದೆ. ಒಂದು ಧರ್ಮ, ಸಮಾಜಗಳ ಉಳುವಿಗೆ, ಬೆಳವಿಗೆಗೆ ಸಮಯದಾನವೂ ಅಷ್ಟೆ ಮುಖ್ಯ. ಬಹುಪಾಲು ಜನರು ಧರ್ಮದಲ್ಲಿ ಆಸಕ್ತಿ ತೋರುವುದಿಲ್ಲ. ಕೆಲವರು ಎಂಥ ಉದ್ಯೋಗಿಗಳೇ ಇರಲಿ, ವ್ಯಾಪಾರ-ಉದ್ಯಮ-ವೈದ್ಯಕೀಯ-ಇತ್ಯಾದಿ ಒಳ್ಳೆಯ ಕಾರ್ಯ ನಡೆದಾಗ ಅಷ್ಟಿಷ್ಟು ಅಥವಾ ಉದಾರವಾಗಿ ದಾನ ಮಾಡುವರು. ಕೇಳಿದವರಿಗೆ ಇಲ್ಲ ಎನ್ನದೆ ಕೊಡುವರು. ಆದರೆ ತಮ್ಮ ಸಮಯವನ್ನು ಮಾತ್ರ ಧರ್ಮಕ್ಕಾಗಿ ಕೊಡುವುದಿಲ್ಲ. ಕೇಳಿದಾಗ "ನಾವು ಬಹಳ ಬ್ಯುಸಿ. ಪುರುಷೊತ್ತೇ ಇರದು" ಎಂದು ಉತ್ತರಿಸುವರು.

ಸಾವು ಕರೆಯುವಾಗಲೂ ಇದೇ ಉತ್ತರ ನೀಡಬಹುದೇನೋ ! ಆದರೆ ಅದು ಇವರ ಮಾತು ಕೇಳುವುದಿಲ್ಲ ತಾನೆ ?

ಬೀಚಗಾನಹಳ್ಳಿ ಚನ್ನಬಸಪ್ಪ ಎನ್ನುವ ಓರ್ವ ಶರಣರು ಈ ಸಲ ಶರಣ ಮೇಳಕ್ಕೆ ಬಹಳ ಜನರನ್ನು ಕರೆತಂದಿದ್ದರು. ಕೆಲವರು ಬಂಧು ಮಿತ್ರರನ್ನು ಕರೆದಾಗ ಅವರು ನಮಗೆ ಸಮಯವಿಲ್ಲ ಎಂದು ಉತ್ತರಿಸಿದಾಗ ಹೇಳಿದರಂತೆ. "ಯಾರಾದರೂ ಸತ್ತರು ಎಂದು ಕೊಳ್ಳಿ. ಆಗ ಎಲ್ಲ ಕೆಲಸ ಬಿಟ್ಟು ಹೋಗೋದಿಲ್ಲವೆ ? ಹಾಗೆ ಅಂತ ತಿಳಿದುಕೊಳ್ಳಿ. ಇನ್ನು ನಿಮಗೆ ಏನು ಹೇಳಬೇಕು ? ಬಂದು ನೋಡಿದರೆ ಅದರ ಮಹತ್ವ ನಿಮಗೆ ತಿಳಿಯೋದು." ಎಂದರಂತೆ. ನಿಜ, ಮನುಷ್ಯನು ಜೀವನವನ್ನು ಊಟಕ್ಕೆ, ನಿದ್ರೆಗೆ, ಶೌಚಕ್ಕೆ ಮೀಸಲಿಟ್ಟಂತೆ ನಿತ್ಯದ ಪ್ರಾರ್ಥನೆ, ವಾರದ ಪ್ರಾರ್ಥನೆ, ಅಧ್ಯಯನ, ಅನುಭವ ಗೋಷ್ಠಿ-ಹೀಗೆಲ್ಲ ಮೀಸಲಿಡಬೇಕು. ಹೀಗೆ ಧರ್ಮಕ್ಕಾಗಿ ಸಮಯದಾನವು ಮುಖ್ಯ.

ಪ್ರಾಣ ದಾನ : ಪ್ರಾಣದಾನ ಎಂದರೆ ಧರ್ಮಕ್ಕೆ ಪ್ರಾಣ ತೆತ್ತರೆ ಅದು ಉಳಿಯುವುದು ಎಂದಲ್ಲ. ಸತ್ಯ-ಧರ್ಮ-ಮೌಲ್ಯ ಸ್ಥಾಪನೆಗಾಗಿ ಪ್ರಾಣವನ್ನು ಮೀಸಲಾಗಿಡಬೇಕು. ಸಂದರ್ಭ ಬಂದಾಗ ಪ್ರಾಣ ತ್ಯಾಗಕ್ಕೂ ಸಿದ್ಧನಾಗಬೇಕು. ಅದನ್ನೇ ಧರ್ಮಪಿತರು ಹೀಗೆ ಹೇಳುವುದು !

* ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯ
ಇದಾವಂಗಳವಡುವುದಯ್ಯ

* ಜಾಣನು ಜಾಣನು ಆತ ಜಾಣನು
ಜವನ ಬಾಯಲು ಬಾಲವ ಕೊಯ್ದು ಹೋದಾತ ಜಾಣನು

ಸ್ವಾತಂತ್ರ್ಯ ಹೋರಾಟವನ್ನೇ ತೆಗೆದುಕೊಳ್ಳೋಣ. ಆ ತ್ಯಾಗಿಗಳು ತನು-ಮನ-ಧನ-ಪ್ರಾಣ ಎಲ್ಲವನ್ನು ಪಣಕ್ಕಿಟ್ಟು ಹೋರಾಡಿದರೆಂದೇ ಗೆದ್ದರು. ವಚನ ಸಾಹಿತ್ಯವನ್ನು ಉಳಿಸಲು ಹೋರಾಡಿದ ಶರಣರು ಪ್ರಾಣವನ್ನು ಪಣಕ್ಕಿಟ್ಟೇ ಗೆದ್ದರು. ಆ ರೀತಿ ಧೈರ್ಯ-ಸ್ಥೈರ್ಯ-ಸಮರ್ಪಣೆ ಇದ್ದಾಗ ಮಾತ್ರ ಯಾವ ಕಾರ್ಯದಲ್ಲಾದರೂ ಯಶಸ್ಸನ್ನು ಸಾಧಿಸಬಹುದು.

ಆದ್ದರಿಂದ ದಾಸೋಹವು ಷಡ್ವಿಧವಾಗಿರುವ ಕಾರಣ ಇದನ್ನು ಷಡಂಗ ದಾಸೋಹವೆಂದು ಕರೆಯಲು ಅಡ್ಡಿಯಿಲ್ಲ. ★

ಪ್ರಥಮಂತು ಬಸವಣ್ಣ । ದ್ವಿತಿಯಂತು ಲಿಂಗವು ।
ತೃತಿಯಂತು ತತ್ತ್ವ ಬ್ರಹ್ಮಾಂಡವೆಲ್ಲ ॥
ಅಕಳಂಕ ಗುಣನಿಧಿ ಚಿದಾನಂದ ಬಸವಂಗೆ ।
ಬಕುತನಾದೆನು ಗುರುವೆ ಯೋಗಿನಾಥ. —ಸಿದ್ಧರಾಮೇಶ್ವರ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಅಖಿಲ ಭಾರತ ಪ್ರಥಮ ಬಸವ ಧರ್ಮ ಸಮ್ಮೇಳನ

1993 ರ ಮೇ 8 ಮತ್ತು 9 ರಂದು

ಸ್ಥಳ : ಕಾಟೇರಿ ಡ್ಯಾಂ ಸೈಟು, ನೀಲಗಿರಿ.



ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
[ಬಸವ ಧರ್ಮ ಪೀಠ, ಕೂಡಲ ಸಂಗಮ.]
ಸಮ್ಮೇಳನಾಧ್ಯಕ್ಷರು
ಅವರಿಂದ

— ಸಂದೇಶ —

ವಿಶ್ವಗುರು ಬಸವಣ್ಣನವರನ್ನು ಹೃನ್ಮಂದಿರದಲ್ಲಿ ಸ್ಮರಿಸಿ, ಸಮ್ಮೇಳನವನ್ನು ಉದ್ಘಾಟಿಸಿರುವ ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿರುವ ಬಸವ ಧರ್ಮದ ಮಹಾಜಗದ್ಗುರು ಪೀಠದ ಪೀಠಾಧೀಶರಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾ ಸ್ವಾಮೀಜಿಯವರ ಚರಣಕಮಲಗಳಲ್ಲಿ ವಂದಿಸಿ,

ಇಲ್ಲಿ ಸಮಾವೇಶವಾಗಿರುವ ವಿವಿಧ ರಾಜ್ಯಗಳ ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಇಂದು ಬಸವ ಧರ್ಮದ ಇತಿಹಾಸದಲ್ಲಿ ಚಿರಸ್ಮರಣೀಯವಾದ ದಿನ. ಮುಖ್ಯ ಕಾರಣ ಒಂದು ಬೃಹತ್ ಕುಟುಂಬವೊಂದರ ಸದಸ್ಯರು 800 ವರ್ಷಗಳ ಕಾಲ ಚದುರಿ ಹೋದವರು ಇದೀಗ ಒಂದಾಗುತ್ತಿರುವ ಸುದಿನ. ಇಂಥ ಸಂಸ್ಮರಣೀಯ ಸಮ್ಮೇಳನ

ವೊಂದನ್ನು ಸಂಘಟಿಸಿ, ಶರಣ ಬಂಧುಗಳನ್ನು ವಿವಿಧ ರಾಜ್ಯಗಳಿಂದ ಬರಮಾಡಿಕೊಂಡು, ಆತಿಥೇಯರಾಗಿ ಆದರಾತಿಥ್ಯ ನೀಡಿರುವ ಸಮ್ಮೇಳನ ಸಂಘಟಕರಿಗೆ ಮೊಟ್ಟಮೊದಲನೆಯದಾಗಿ ಅಭಿನಂದನೆ ಸಲ್ಲಿಸಿ, ಶುಭವನ್ನು ಹಾರೈಸುವೆ.

1. ಬಸವ ಧರ್ಮ ಸಮ್ಮೇಳನ :

ಅಂಗದ ಮೇಲೆ ಗೋಳಾಕಾರದ ಇಷ್ಟಲಿಂಗವನ್ನು, ವಿಶ್ವದಾಕಾರದಲ್ಲಿ ಚುಳುಕಾಗಿಸಿ ಧರಿಸಿಕೊಂಡು ಪೂಜಿಸುವವರೆಲ್ಲರು ಲಿಂಗವಂತರು. ಈ ಧರ್ಮವನ್ನು ಸಂಸ್ಥಾಪಿಸಿಕೊಟ್ಟವರು ವಿಶ್ವಗುರು ಬಸವಣ್ಣನವರು ಮತ್ತು ಗೋಳಾಕಾರದಲ್ಲಿ ಇಷ್ಟಲಿಂಗವನ್ನು ರೂಪಿಸಿ, ಅಂಗದ ಮೇಲೆ ಧರಿಸಿಕೊಂಡು ಪೂಜಿಸುವ ಸತ್‌ಪರಂಪರೆಯನ್ನು ಆರಂಭಿಸಿದವರು ಅವರೇ. ಧರ್ಮಪಿತ ಬಸವಣ್ಣನವರಿಗೂ ಪೂರ್ವದಲ್ಲಿ ಶಿವನ ಪ್ರತೀಕವಾಗಿ ಪೂಜಿಸುತ್ತಿದ್ದ ಸ್ಥಾವರಲಿಂಗೋಪಾಸನೆ ಇದ್ದಿತೇ ವಿನಾ ವಿಶ್ವಾತ್ಮನ ಕುರುಹಾದ ಇಷ್ಟಲಿಂಗೋಪಾಸನೆ ಇರಲಿಲ್ಲ. ವೀರ ಶರಣ ಮಡಿವಾಳ ಮಾಚಿದೇವರು ಹೇಳುತ್ತಾರೆ :

ಎತ್ತೆತ್ತ ನೋಡಿದೊಡತ್ತತ್ತ ಬಸವನೆಂಬ ಬಳ್ಳಿ
ಎತ್ತಿ ನೋಡಿದಡೆ ಲಿಂಗವೆಂಬ ಗೊಂಚಲು.

ಎಲ್ಲೆಲ್ಲಿ 'ಬಸವಾ' ಎಂಬ ಹೆಸರಿನ ಬಳ್ಳಿ ಹರಿಯಿತೋ, ಬಸವಣ್ಣನ ಹೆಸರಿನ ಕೀರ್ತಿ ವಿಸ್ತರಿಸಿತೋ ಅಲ್ಲೆಲ್ಲ ಲಿಂಗವಂತ ಧರ್ಮವೂ ಹಬ್ಬಿತು ; ಇಷ್ಟಲಿಂಗದ ಮಹಿಮೆ ಬೆಳೆಯಿತು.

ಹೀಗಾಗಿ ನಾವು-ನೀವು ಅನುಸರಿಸುತ್ತಿರುವ ಧರ್ಮವು ಬಸವಣ್ಣನವರು ಸಂಸ್ಥಾಪಿಸಿ ಕೊಟ್ಟಿರುವ ಕಾರಣ ಬಸವ ಧರ್ಮ ; ಇದರ ಜೀವಾಳವೇ ಇಷ್ಟಲಿಂಗ ಧಾರಣೆಯಾದ್ದರಿಂದ ಇದು ಲಿಂಗಾಯತ ಧರ್ಮ.

2. ಲಿಂಗಾಯತ ಧರ್ಮವು ಸ್ವತಂತ್ರ ಧರ್ಮ :

ಇಷ್ಟಲಿಂಗ ಧಾರಣೆಯನ್ನು ಮುಖ್ಯವಾಗಿ ಒಳಗೊಂಡ ಈ ಧರ್ಮವು ಒಂದು ಸ್ವತಂತ್ರವಾದ ಧರ್ಮ. ವ್ಯಕ್ತಿ ಮತ್ತು ಸಮಾಜಗಳನ್ನು ಸುವ್ಯವಸ್ಥಿತವಾಗಿ ಸುಂದರವಾಗಿ ಎತ್ತಿ ಹಿಡಿಯುವ ತತ್ತ್ವವಿಶೇಷವೇ ಧರ್ಮ ಎಂದು ವ್ಯಾಖ್ಯಾನಿಸಲ್ಪಡುತ್ತಿದೆ. ಬಸವರೇ ಆದಿ ಪ್ರಮಥರಾಗಿ ಕೊಡಲ್ಪಟ್ಟ ಈ ಧರ್ಮವು ತನ್ನದೇ ಆದ ತತ್ತ್ವಗಳನ್ನು ಒಳಗೊಂಡಿದೆ. 1. ಧರ್ಮಗುರು. 2. ಧರ್ಮ ಸಾಹಿತ್ಯ, 3. ಸಿದ್ಧಾಂತ 4. ಸಾಧನೆ 5. ದರ್ಶನ 6. ಸಂಸ್ಕಾರ 7. ಸಮಾಜ ಶಾಸ್ತ್ರ 8. ಅರ್ಥ ಶಾಸ್ತ್ರ 9. ನೀತಿಶಾಸ್ತ್ರ 10. ಸಂಸ್ಕೃತಿ. 11. ಪರಂಪರೆ—ಎಂಬ 11 ಲಕ್ಷಣಗಳನ್ನು ಒಳಗೊಂಡಿರುವ ಕಾರಣ ಇದೊಂದು ಸ್ವತಂತ್ರ ಧರ್ಮ.

ಅನೇಕರು ತಪ್ಪಾಗಿ ಭಾವಿಸಿರುವಂತೆ ಹಿಂದೂ ಒಂದು ಧರ್ಮವಾಗಿ, ಲಿಂಗಾಯತವು ಅದರಲ್ಲಿ ಬರುವ ಒಂದು ಜಾತಿಯಲ್ಲ. ಹಿಂದು ಎನ್ನುವುದು ಧರ್ಮ ವಾಚಕ ಪದವಲ್ಲ. ಸಂಸ್ಕೃತಿ ಸೂಚಕ ಪದ, ಜನಾಂಗ ವಾಚಕ ಪದ. ಹಿಂದು ಸಂಸ್ಕೃತಿಯಲ್ಲಿ ಹಲವಾರು ಸ್ವತಂತ್ರ ಧರ್ಮಗಳಿವೆ. ವೇದಗಳನ್ನು ಪತ್ಯವಾಗುಳ್ಳ ವೈದಿಕ ಧರ್ಮ, ಆಗಮಗಳ ಮೇಲೆ ನಿಂತ ಶೈವ ಧರ್ಮ, ತ್ರಿಪೀಟಕಗಳ ಮೇಲೆ ಇರುವ ಬೌದ್ಧ ಧರ್ಮ ಇತ್ಯಾದಿ. ಹಿಂದೂ ಕಕ್ಷೆಯಲ್ಲಿ ಬರುವ ಸ್ವತಂತ್ರ ಧರ್ಮಗಳಾದ ವೈದಿಕ, ಶೈವ, ಬೌದ್ಧ, ಜೈನ, ಸಿಖ್ ಧರ್ಮದಂತೆ ಲಿಂಗವಂತಧರ್ಮವೂ ಸ್ವತಂತ್ರ ಧರ್ಮ. ಇದಕ್ಕೆ ಆಧಾರ ವಚನ ಸಾಹಿತ್ಯ. ಆದ್ದರಿಂದ ನಾವು ಎಲ್ಲಿಯೇ ವಾಸವಾಗಿದ್ದರೂ ವಿಶ್ವಗುರು ಬಸವಣ್ಣನವರೇ ನಮ್ಮ ಧರ್ಮಗುರು—ವಚನ ಸಾಹಿತ್ಯವೇ ನಮ್ಮ ಧರ್ಮಸಂಹಿತೆ ಎನ್ನುವುದನ್ನು ಮರೆಯಬಾರದು.

3. ಷಟ್ ಸೂತ್ರಗಳು :

ಬಿಡಿಯಾದ ಹೂವುಗಳನ್ನು ಪೋಣಿಸಲು ದಾರ ಬೇಕು; ಬಿಡಿಬಿಡಿಯಾದ ಕಟ್ಟಿಗೆ ಹೊರೆಯನ್ನು ಕಟ್ಟಲು ಹಗ್ಗದ ತುಂಡು ಬೇಕು. ಹಾಗೆಯೇ ಸಮಾಜವನ್ನು ಕಟ್ಟಲು ಕೆಲವು ಸೂತ್ರಗಳು ಬೇಕು. ಅಂಥ ಆರು ಸೂತ್ರಗಳನ್ನು ಗುರುತಿಸಲಾಗಿದೆ. ಧರ್ಮಗುರು—ವಿಶ್ವಗುರು ಬಸವಣ್ಣ, ಧರ್ಮ ಸಂಹಿತೆ—ಸಮಾನತೆ ಸಾರುವ ವಚನ ಸಾಹಿತ್ಯ, ಧರ್ಮ ಲಾಂಛನ—ವಿಶ್ವಾತ್ಮನ ಕುರುಹಾದ ಇಷ್ಟಲಿಂಗ, ಧರ್ಮ ಕ್ಷೇತ್ರ—ಬಸವಣ್ಣನವರ ಐಕ್ಯಕ್ಷೇತ್ರ ಕೂಡಲ ಸಂಗಮ, ಧರ್ಮಧ್ವಜ—ಷಟ್ಕೋನ ಸಹಿತ ಬಸವ ಧ್ವಜ, ಧರ್ಮದ ಧ್ಯೇಯ-ಜಾತಿ ವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯ ನಿರ್ಮಾಣ. ಇವನ್ನು ನೀವು ಪ್ರತಿಯೊಬ್ಬರೂ ಮನದಟ್ಟು ಮಾಡಿಕೊಳ್ಳಬೇಕು.

ಧರ್ಮಗುರು ಬಸವಣ್ಣ : ಶ್ರೇಷ್ಠ ಸಮಾಜ ಸುಧಾರಕರು, ಸಮತಾವಾದಿಗಳು, ಮಂತ್ರಪುರುಷರೂ ಆದ ಬಸವಣ್ಣನವರು ಲಿಂಗಾಯತ ಧರ್ಮದ ಆದಿಗುರು. ಆದಕ್ಕಾಗಿಯೇ ಅವರನ್ನು ಪೂರ್ವಾಚಾರ್ಯ, ಪ್ರಮಥಾಚಾರ್ಯ ಎಂದು ಬಣ್ಣಿಸಲಾಗಿದೆ. ಜಗತ್ತಿನ ದೊಡ್ಡ ಧರ್ಮಗಳಾದ ಕ್ರೈಸ್ತ, ಮುಸ್ಲೀಮ್, ಬೌದ್ಧ ಧರ್ಮಗಳನ್ನು ಗಮನಿಸಿದರೆ ಅವರಲ್ಲಿ ಅನನ್ಯವಾದ ಧರ್ಮಗುರು ನಿಷ್ಠೆಯನ್ನು ಕಾಣುತ್ತೇವೆ. ಅವರುಗಳು ಒಂದು ಕಡೆ ಏಕೇಶ್ವರವಾದವನ್ನು ಆಶ್ರಯಿಸಿದ್ದರೆ, ಇನ್ನೊಂದು ಕಡೆ ಏಕ ಗುರು ನಿಷ್ಠೆಯನ್ನು ಬೆಳೆಸಿಕೊಂಡು ತಮ್ಮ ಧರ್ಮಗುರು ಹಾಕಿಕೊಟ್ಟ ದಾರಿಯಲ್ಲಿ ಶಿಸ್ತಿನಿಂದ ಸಾಗಿದ್ದಾರೆ. ಆದಿ ಶರಣರಲ್ಲಿದ್ದ ಏಕದೇವ ನಿಷ್ಠೆ-ಧರ್ಮಗುರು ನಿಷ್ಠೆಯನ್ನು ಬಿಟ್ಟು ಇಂದಿನ ಲಿಂಗವಂತ ಸಮಾಜವು ವಿವಿಧ ವ್ಯಕ್ತಿಗಳನ್ನು ಸ್ಥಾನಿಕ ಪಂಥಗಳನ್ನು ಆಶ್ರಯಿಸಿ, ಶರಣ ಪಥದಿಂದ ದೂರವೇ ಸಾಗುತ್ತಿದೆ. ಆದ್ದರಿಂದ ಮೊಟ್ಟ ಮೊದಲು ಅನುಯಾಯಿಗಳು ಬೆಳೆಸಿಕೊಳ್ಳಬೇಕಾದುದು ಧರ್ಮಗುರು ನಿಷ್ಠೆಯನ್ನು.

ಪ್ರತಿಯೊಬ್ಬರ ಮನೆಯಲ್ಲಿ ಕಡ್ಡಾಯವಾಗಿ ಧರ್ಮಗುರು ಬಸವಣ್ಣನವರ ಭಾವಚಿತ್ರ ಇರಬೇಕು. ತಲೆಬಾಗಿಲಲ್ಲಿ, ಪ್ರವೇಶವಾದ ತಕ್ಷಣ ಕಾಣುವಂತೆ ಬಸವ ಭಾವಚಿತ್ರವಿರಬೇಕು. ಪೂಜಾ ಕೋಣೆಯಲ್ಲಿ ತಪ್ಪದೆ ಇರಬೇಕು. ನಿಮ್ಮ ಸಹಧರ್ಮಿಗಳ ಮನೆಯಲ್ಲಿ ಇಲ್ಲದಿದ್ದರೆ ನೀವು ಉಚಿತಕೊಡುಗೆಯನ್ನಾಗಿ ನೀಡಿಯಾದರೂ ಹಾಕಿಸಬೇಕು.

ಲಿಂಗವಂತ ಧರ್ಮೀಯರಿಗೆ ಗುರು-ಲಿಂಗ-ಜಂಗಮ ಎಂಬ ತ್ರಿತತ್ವ (Trinity) ದಲ್ಲಿ ನಂಬಿಕೆ ಇದೆ. ಈ ಮೂರನ್ನು ಹೊರತು ಪಡಿಸಿ ಉಳಿದ ಪೂಜೆಗಳು ನಿಷಿದ್ಧ. ಅದ್ದರಿಂದ ವಿಶೇಷ ಸಂದರ್ಭಗಳಲ್ಲಿ ಶರಣ ಸಮ್ಮತವಲ್ಲದ ವ್ರತಗಳನ್ನು ಕೈಗೊಂಡು ಮಾಡಬಾರದು. ಶ್ರೀ ಬಸವೇಶ್ವರ ಪೂಜಾವ್ರತವನ್ನು ಮಾತ್ರ ಆಚರಿಸಬೇಕು. ವಿಶೇಷ ವಾದ ಹಬ್ಬ-ಹುಣ್ಣಿಮೆ-ಉತ್ಸವಗಳಂದು ಈ ಪೂಜಾವ್ರತವನ್ನು ಮಾಡುವುದು ಮಾತ್ರವಲ್ಲದೆ ವಾರಕ್ಕೊಮ್ಮೆ ಸೋಮವಾರ ಅಥವಾ ಭಾನುವಾರದಂದು ಮನೆಯಲ್ಲಿ ಬಸವೇಶ್ವರ ಪೂಜಾವ್ರತ ಮಾಡುವ ಪರಿಪಾಠ ಇಟ್ಟುಕೊಳ್ಳಬೇಕು. ಹೊಸದಾಗಿ ಕಣ್ಣಿಗೆ ಬಿದ್ದ ಮತಪಂಥಗಳನ್ನು ಸೇರುವುದು, ಯಾವ ಯಾವ ದೇವತೆಗಳ ಹೆಸರಿನಲ್ಲಿಯೋ ವ್ರತ ಸ್ವೀಕರಿಸುವುದು ಏಕದೇವೋಪಾಸನೆಗೆ ಚ್ಯುತಿ ತರುತ್ತದೆಂಬುದನ್ನು ಲಕ್ಷಿಸಬೇಕು.

ವಚನ ಸಾಹಿತ್ಯ ಧರ್ಮಸಂಹಿತೆ : ಕ್ರೈಸ್ತರಿಗೆ ಬೈಬಲ್, ಮುಸಲ್ಮಾನರಿಗೆ ಕುರಾನ್, ವೈದಿಕರಿಗೆ ವೇದಗಳು, ಶೈವರಿಗೆ ಆಗಮಗಳು ಬೌದ್ಧರಿಗೆ ತ್ರಿಪೀಟಕಗಳು, ಸಿಖ್ಖರಿಗೆ ಗುರುಗ್ರಂಥ-ಆಧಾರ ಶಾಸ್ತ್ರಗಳಾದಂತೆ ಲಿಂಗವಂತ ಧರ್ಮೀಯರಿಗೆ ವಚನ ಸಾಹಿತ್ಯವೇ ಧರ್ಮ ಸಂಹಿತೆ. ಇದರ ಅಧ್ಯಯನ ಪಾರಾಯಣ, ಪಠಣ ಪ್ರತಿಮನೆಯಲ್ಲಿಯೂ ಆಗಬೇಕು.

ವಚನ ವಾಙ್ಮಯವು ಮೂಲತಃ ರಚನೆಯಾದುದು ಕನ್ನಡದಲ್ಲಿ. ಕನ್ನಡವು ಲಿಂಗವಂತರ ಧರ್ಮಭಾಷೆ. ಆದ್ದರಿಂದ ನಾವುಗಳು ಯಾವುದೇ ದೇಶದಲ್ಲಿದ್ದರೂ ಮೂಲಧರ್ಮವನ್ನು ತಿಳಿದುಕೊಳ್ಳಲಿಕ್ಕೆ ಕನ್ನಡವನ್ನು ಅರಿತಿರಬೇಕು, ಅಲಕ್ಷ್ಯ ಮಾಡಬಾರದು. ಮನೆಯಲ್ಲಿ ಹಿರಿಯರು ವಚನ ಸಾಹಿತ್ಯವನ್ನು ಪಠಣ ಮಾಡುತ್ತಲೇ ಕನ್ನಡಭಾಷೆಯನ್ನು ಜೀವಂತವಾಗಿಟ್ಟುಕೊಳ್ಳಬೇಕು.

ಜೊತೆಗೆ ಇಂದು ಕನ್ನಡದಲ್ಲಿರುವ ಮುಖ್ಯವಾದ ವಚನ ಸಾಹಿತ್ಯ ಗ್ರಂಥಗಳನ್ನು ವಿವಿಧ ಪ್ರಾಂತೀಯ ಭಾಷೆಗಳಿಗೆ ಮತ್ತು ಹಿಂದಿ-ಇಂಗ್ಲೀಷಿಗೂ ಭಾಷಾಂತರಿಸಬೇಕಾದುದು ಅತ್ಯಗತ್ಯವಾಗಿದೆ. ಸಾಮಾನ್ಯವಾಗಿ ಕರ್ನಾಟಕದ ಗಡಿನಾಡುಗಳಲ್ಲಿರುವವರು ಅಷ್ಟಿಷ್ಟು ಕನ್ನಡ ಮಾತನಾಡಿದರೂ, ಸಾಹಿತ್ಯವನ್ನು ಓದುವಷ್ಟು ಸಮರ್ಥರಿರುವುದಿಲ್ಲ ಮತ್ತು ವಿವಿಧ ಪ್ರಾಂತ್ಯಗಳ ಒಳನಾಡುಗಳಲ್ಲಿಯಂತೂ ಕನ್ನಡ ಎಷ್ಟೂ ಬರದು. ಆದ್ದರಿಂದ ಲಿಂಗವಂತ ಧರ್ಮದ ಸಾಹಿತ್ಯವನ್ನು ಕನ್ನಡೇತರ ಭಾಷೆಯಲ್ಲಿ ಮುದ್ರಿಸುವುದು ಬಲು ಅಗತ್ಯ ಎಂಬುದನ್ನು ಮನಗಾಣಬೇಕು. ಧರ್ಮವೆಂಬ ಶಿವನಿಗೆ ಸಾಹಿತ್ಯವೇ ವೃಷಭವಾಹನ ಎಂಬುದನ್ನು ಮರೆಯಲಾಗದು.

ಇಷ್ಟಲಿಂಗವೇ ಗಣಲಾಂಛನ :

ನಿರಾಕಾರನೂ ನಿರ್ಗುಣನೂ ಆದ ಪರಮಾತ್ಮನನ್ನು ಮಾನುಷ್ಯರ, ಪಶುಪಕ್ಷಿಗಳ ಆಕಾರದಲ್ಲಿ ಪೂಜಿಸದೆ ವಿಶ್ವದಾಕಾರದಲ್ಲಿ ಪೂಜಿಸಬೇಕೆಂದು ಸಾರಿ ಗೋಳಾಕಾರದ ರೂಪದಲ್ಲಿ ಚುಳುಕಾಗಿಸಿ ಬಸವಣ್ಣನವರು ಕೊಟ್ಟ ಇಷ್ಟಲಿಂಗವೇ ಗಣಲಾಂಛನ, ಅನೇಕರು ತಿಳಿದಿರುವಂತೆ ಇದು ಜಾತಿ ಲಾಂಛನವಲ್ಲ, ಜ್ಯೋತಿ ಸ್ವರೂಪನಾದ ಪರಮಾತ್ಮನ ಪ್ರತೀಕ. ಇದನ್ನರಿಯದ ಕೆಲವು ಲಿಂಗವಂತರು ಉದಾಸೀನ ಮನೋಭಾವ ಹೊಂದಿ, ಇಷ್ಟಲಿಂಗಧಾರಣೆಯನ್ನೇ ಬಿಟ್ಟಿರುತ್ತಾರೆ. ಇನ್ನು ಕೆಲವರು ತಾವು ಪ್ರವಾಸದಲ್ಲಿರುವ ಉದ್ಯೋಗಿಗಳೆಂದು, ಪ್ರವಾಸಕಾಲದಲ್ಲಿ ಪೂಜಿಸಲು ಆಗುವುದಿಲ್ಲವೆಂದು ಇಷ್ಟಲಿಂಗವನ್ನು ಧರಿಸಿರುವುದಿಲ್ಲ ಎಂದು ಹೇಳುವರು. ವ್ಯಕ್ತಿಯಲ್ಲಿ ಧರ್ಮನಿಷ್ಠೆ ಇದ್ದರೆ ಅವನು ಎಂಥ ಕಠಿಣ ಪ್ರಸಂಗದಲ್ಲೂ, ಧರಿಸಿ, ಪೂಜಿಸುವನು. ಮುಸ್ಲಿಂ ಬಂಧುಗಳು ಎಲ್ಲಿಯೇ ಇರಲಿ, ಎಲ್ಲಿಗೇ ಹೋಗುತ್ತಿರಲಿ ಸಮಯಕ್ಕೆ ಸರಿಯಾಗಿ ನಮಾಜ್ ಮಾಡುವುದಿಲ್ಲವೆ? ಅನಿವಾರ್ಯ ಪ್ರಸಂಗವಿದ್ದು ಪೂಜಿಸಲು ಆಗದಿದ್ದರಷ್ಟೆ; ಸುಮ್ಮನೇ ಅಂಗದ ಮೇಲೆ ಲಿಂಗವನ್ನು ಧರಿಸಿದ್ದರೂ ಸಾಕು ಎನ್ನುತ್ತಾರೆ ಶರಣರು.

ಒಂದು ಊರಿನಲ್ಲಿ ಒಬ್ಬ ವ್ಯಕ್ತಿಯು ಬಡವನಿದ್ದು ಅವನಿಗೆ ಹಾಕಿಕೊಳ್ಳಲು ಚಪ್ಪಲಿ ಇರಲಿಲ್ಲವಂತೆ. ಅವನಿಗೆ ತನ್ನ ಬಡತನಕ್ಕಾಗಿ ಬಹಳ ವ್ಯಥೆಯಾಗುತ್ತಿತ್ತು. ದೇವರು ತನಗೆ ಚಪ್ಪಲಿ ತೊಡುವ ಭಾಗ್ಯವನ್ನು ಕರುಣಿಸಲಿಲ್ಲವಲ್ಲ ಎಂದು ನೊಂದುಕೊಳ್ಳುತ್ತಿದ್ದ. ಒಂದು ದಿವಸ ಎರಡೂ ಕಾಲು ದುರ್ಬಲಗೊಂಡು ತೆವಳುತ್ತಲಿದ್ದ ಒಬ್ಬ ವ್ಯಕ್ತಿಯನ್ನು ನೋಡಿದ. ಆಗ ಅವನಿಗೆ ಅನ್ನಿಸಿತು "ನಾನು ಎಷ್ಟು ಭಾಗ್ಯವಂತ. ದೇವರು ನನಗೆ ಸ್ವತಂತ್ರವಾಗಿ ನಡೆದಾಡಲು ಕಾಲುಗಳನ್ನು ಕೊಟ್ಟಿದ್ದಾನೆ." ಎಂಬುದಾಗಿ. ಎಷ್ಟೋ ಜನ ಪೂಜೆಯ ಹಕ್ಕಿಲ್ಲದೆ, ದೀಕ್ಷೆಯ ಸೌಲಭ್ಯವಿಲ್ಲದೆ, ಧರ್ಮ ಸಂಸ್ಕಾರ ವಂಚಿತರಾಗಿ ಬಾಳುತ್ತಿರುವಾಗ ನನಗೆ ಇಂಥ ಸೌಲಭ್ಯ ದೊರೆತಿದೆಯಲ್ಲ ಎಂದು ಸಂತೋಷವಾಗುತ್ತದೆ. ಪೂಜೆಯು ಒಂದು ಕಾಟಾಚಾರದ ವಿಧಿಯಾಗದೆ, ಹರ್ಷೋಲ್ಲಾಸ ಆತ್ಮಶಾಂತಿಗೆ ಸಾಧನ ಎಂಬ ಭಾವವು ಬೆಳೆಯುತ್ತದೆ.

ಲಿಂಗವಂತ ಧರ್ಮೀಯರು ಉದಾರ ಮನಸ್ಕರಾಗಬೇಕು. ಧರ್ಮಗುರು ಬಸವಣ್ಣನವರು ಇಡೀ ಮಾನವ ಕುಲಕೋಟಿಗೆ ಧರ್ಮ-ದೇವರು-ಪೂಜೆ ಲಭ್ಯವಾಗಬೇಕು ಎಂದು ಕೊಟ್ಟ ಧರ್ಮಲಾಂಛನವನ್ನು ಇನ್ನಿತರ ಆಸಕ್ತರಿಗೂ ಕೊಡಬೇಕು; ಎಂಬ ಉದಾರ ಮನೋಭಾವ ಹೊಂದಬೇಕು. ವಿಶ್ವಗುರು ಬಸವಣ್ಣನವರೆಂಬ ಆಧ್ಯಾತ್ಮಿಕ ವಿಜ್ಞಾನಿಯು ಇಷ್ಟಲಿಂಗವೆಂಬ ರೇಲ್ವೆ ಇಂಜಿನನ್ನು ಕಂಡು ಹಿಡಿದರು. ತಾವೇ ಚಾಲಕರಾಗಿ, ಶರಣ ಸಮಾಜ ಎನ್ನುವ ಬೋಗಿಗಳನ್ನು ಜೋಡಿಸಿಕೊಂಡು,

ಜನತೆಯನ್ನು ಭವದಿಂದ ಶಿವದೆಡೆಗೆ ಕರೆದೊಯ್ಯುತ್ತ ಹೊರಟರು. 8 ಶತಮಾನ ಗಳ ಕಾಲ ಈ ಟ್ರೇನು ಸಾಗುವಾಗ ಬೇರೆ ಬೇರೆ ಜಾತಿ ಮತಪಂಥಗಳಿಂದೆಲ್ಲ ಬೇರೆ ಬೇರೆ ಶತಮಾನಗಳಲ್ಲಿ ಅಸಂಖ್ಯಾತರು ಹತ್ತಿಕುಳಿತರು. ಆದರೆ ದುರ್ದೈವ ವೆಂಬಂತೆ ಒಳಗೆ ಕುಳಿತವರು ಹೊಸಬರು ಹೊರಗಿನಿಂದ ಹತ್ತದಂತೆ ಸಂಕುಚಿತ ಮನೋಭಾವ ಹೊಂದಿಬಿಟ್ಟಿದ್ದಾರೆ. ಹೀಗೆ ಮಾಡಬಾರದು. ಒಂದು ಹಣ್ಣು ಇದ್ದರೆ ಹೇಗೆ ಹಂಚಿಕೊಂಡು ತಿನ್ನುತ್ತೇವೋ ಹಾಗೆಯೇ ಧರ್ಮವನ್ನೂ ಹಂಚಿಕೊಳ್ಳುವ ಮನೋಭಾವ ಬೆಳಸಿಕೊಳ್ಳಬೇಕು. ಅದರಲ್ಲಿಯೂ ಹಿಂದೂ ಸಂಸ್ಕೃತಿಯ ಕಕ್ಷೆಯಲ್ಲಿ ಬರುವ ಬಸವ ಧರ್ಮದಂತಹುದು ಭಾರತ ದೇಶಕ್ಕೆ ಇಂದು ಅತ್ಯಗತ್ಯವಾಗಿ ಬೇಕಾ ಗಿದೆ ಎಂಬುದನ್ನು ಮನಗಾಣಬೇಕು.

ಕೂಡಲ ಸಂಗಮವೇ ಧರ್ಮಕ್ಷೇತ್ರ :

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವೇ ಲಿಂಗವಂತ ಧರ್ಮೀಯರ ಧರ್ಮಕ್ಷೇತ್ರ. ಲೌಕಿಕ ಜೀವನದಲ್ಲಿ ಹೇಗೆ ಒಂದು ತವರು ಬೇಕೆಂದು ಹೆಣ್ಣುಮಕ್ಕಳು ಹಂಬಲಿಸುವರೋ ಹಾಗೆ ಧಾರ್ಮಿಕ ಅನುಯಾಯಿಗಳಿಗೂ ಒಂದು ತವರು ಬೇಕು. ಮುಸ್ಲೀಮರಿಗೆ ಮೆಕ್ಕಾ ಇರು ವಂತೆ, ಬೌದ್ಧರಿಗೆ ಬುದ್ಧಗಯೆಯಂತೆ, ಸಿಖ್ಖರಿಗೆ ಅಮೃತ ಸರದಂತೆ ಲಿಂಗವಂತ ಧರ್ಮೀಯರಿಗೆ ಕೂಡಲ ಸಂಗಮವೆ ಧರ್ಮಕ್ಷೇತ್ರ.

ಇಂತಹ ಧರ್ಮ ಕ್ಷೇತ್ರಕ್ಕೆ ಆಗಾಗ ಬರುತ್ತಿರಬೇಕು, ಜೀವಮಾನದಲ್ಲಿ ಒಮ್ಮೆ ಯಾದರೂ ಬರಲೇಬೇಕು ಎಂಬ ಶ್ರದ್ಧೆಯನ್ನು ಬೆಳೆಸಿಕೊಳ್ಳಬೇಕು. ಧರ್ಮಪಿತ ಬಸವಣ್ಣನವರು ಸಾಕ್ಷಾತ್ಕಾರದ ಅನುಭವ ಪಡೆದು ಇಷ್ಟಲಿಂಗವೆಂಬ ಧರ್ಮಲಾಂಛನ ಕಂಡು ಹಿಡಿದು ಕೊಟ್ಟ ದಿನವೇ ಬಸವಕ್ರಾಂತಿ ದಿನ. ಪ್ರತಿವರ್ಷದ ಸಂಕ್ರಾಂತಿಯಂದು ಬಸವ ಕ್ರಾಂತಿ ದಿನದ ನಿಮಿತ್ತವಾಗಿ ಶರಣಮೇಳ ಎಂಬ ಬೃಹತ್ ಗಣಸಮಾವೇಶವನ್ನು ಸಂಘಟಿಸಲಾಗುತ್ತಿದ್ದು ಲಿಂಗವಂತ ಧರ್ಮೀಯರು ಬಂದು ಸಮುದಾಯ ಪ್ರಾರ್ಥನೆ ಯಲ್ಲಿ ಭಾಗಿಯಾಗಿ **ಬಸವ ಜ್ಯೋತಿ ದರ್ಶನ**ವನ್ನು ಪಡೆಯಬೇಕು.

ತಮಗೆ ಸಾಧ್ಯವಾದಷ್ಟು ಕಾಲದ ಅಂದರೆ 40 ದಿವಸ, 30 ದಿವಸ, 15 ದಿವಸ ಗಳ ಶರಣ ವ್ರತವನ್ನು ಸ್ವೀಕರಿಸಿ, ಸದಾಚಾರ ಸಂಪನ್ನರಾಗಿ ನಡೆದು, ಕೂಡಲ ಸಂಗಮಕ್ಕೆ ಬಂದು ಬಸವ ಜ್ಯೋತಿ ದರ್ಶನದೊಡನೆ ವ್ರತವನ್ನು ಪೂರ್ಣಗೊಳಿಸ ಬೇಕು. ಜಗತ್ತಿನ ಯಾವುದೇ ರಾಷ್ಟ್ರ, ಪ್ರಾಂತ್ಯಗಳಲ್ಲಿ ಯಾವುದೇ ಉದ್ಯೋಗದಲ್ಲಿರಲಿ ಕೂಡಲ ಸಂಗಮದ ಶರಣ ಮೇಳಕ್ಕೆ ಬರುವ ಪರಿಪಾಠ ಬೆಳೆಸಿಕೊಳ್ಳಬೇಕು.

ಬಸವ ಮಂತ್ರ ಸಹಿತ ಷಟ್ಕೋನ ಧ್ವಜ :

ಷಟ್ಕೋನಗಳಿಂದ ಕೂಡಿರುವ ಓಂ ಶ್ರೀಗುರುಬಸವ ಎಂಬ ಮಂತ್ರಾಕ್ಷರಗಳ ನ್ನೊಳಗೊಂಡಿರುವ ಬಸವ ಧ್ವಜವೇ ಧರ್ಮ ಧ್ವಜ. ಇದನ್ನು ನಾವು ವಿಶೇಷ ದಿನ ಗಳಂದು, ಹಬ್ಬ-ಹುಣ್ಣಿಮೆ-ಉತ್ಸವ-ಶರಣರ ಜಯಂತಿಗಳಂದು ಹಾರಿಸಬೇಕು.

ಧರ್ಮದ ಧ್ಯೇಯ ಕಲ್ಯಾಣರಾಜ್ಯ ನಿರ್ಮಾಣ : ಧರ್ಮಪಿತರು ಹೇಳುವಂತೆ ಮರ್ತ್ಯಲೋಕವಿದುವು ಕರ್ತಾರನ ಕಮ್ಮಟ. ಇಂಥ ಅದ್ಭುತವಾದ ಮರ್ತ್ಯಲೋಕದಲ್ಲಿ ನಾವು ಆದರ್ಶಪೂರ್ಣವಾದ ಶರಣ ಸಮಾಜವನ್ನು ಕಟ್ಟಬೇಕು.

ಹೀಗೆ ನೀವು ಆರು ಸೂತ್ರಗಳನ್ನು ಅರಿತುದಾಯಿತು ಮತ್ತು ಇದರ ನೆರವಿನಿಂದ ಹೇಗೆ ಆದರ್ಶ ಸಮಾಜವನ್ನು ಕಟ್ಟಬಹುದೆಂದು ತಿಳಿದುದಾಯಿತು. ಈಗ ಸಮಾಜಕ್ಕೆ ಅಗತ್ಯ ವಾದ ಸಂಸ್ಕಾರ ಮತ್ತು ಸಂಘಟನೆ ಬಗ್ಗೆ ಏನು ಮಾಡಬೇಕೆಂದು ಆಲೋಚಿಸುವಾ.

ವ್ಯಕ್ತಿಯು ತನು-ಮನ-ಆತ್ಮಗಳೆಂಬ ಮೂರು ಘಟಕಗಳಿಂದ ಆಗಿದ್ದಾನೆ. ಆದ್ದರಿಂದ ತನುವಿಗೆ ಬೇಕು ಅನ್ನ, ಮನಸ್ಸಿಗೆ ಬೇಕು ಜ್ಞಾನ, ಆತ್ಮನಿಗೆ ಬೇಕು ಧರ್ಮ. ಅನ್ನ ಸಂಪಾದನೆಗೆ ಕಾಯಕವನ್ನು ಮಾಡಿ, ಭೌತಿಕ ಸಮೃದ್ಧಿಯನ್ನು ಸಾಧಿಸ ಬೇಕು. ಜ್ಞಾನ ಸಂಪಾದನೆಗೆ ಶರಣರ ಸಂಗ, ಆತ್ಮತೃಪ್ತಿ ನೀಡುವ ದಿವ್ಯಾನಂದ ಪ್ರಾಪ್ತಿಗೆ ಪೂಜೆ-ಪ್ರಾರ್ಥನೆ-ಧ್ಯಾನಗಳು ಬೇಕು. ದಿನ ನಿತ್ಯ ಹೇಗೆ ವ್ಯಕ್ತಿಯು ಊಟ ವನ್ನು ನಿದ್ರೆಯನ್ನು ಮಾಡುವನೋ ಹಾಗೆ ನಿತ್ಯವೂ ಪೂಜೆಯನ್ನು ಮಾಡಬೇಕು. ಇದರ ಜೊತೆಗೆ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳಬೇಕು. ಸಾಮೂಹಿಕ ಪ್ರಾರ್ಥನೆಯು ವೈಯಕ್ತಿಕ, ಕೌಟುಂಬಿಕ, ಸಾಮೂಹಿಕ ಎಂದು ಮೂರು ಪ್ರಕಾರ. ನಿತ್ಯವೂ ಮಾಡುವ ಇಷ್ಟಲಿಂಗಾರ್ಚನೆ ವೈಯಕ್ತಿಕ; ಮನೆಯ ಜನರೆಲ್ಲ ಒಂದು ಕಡೆ ಕುಳಿತು ಮಾಡುವುದು ಕೌಟುಂಬಿಕ. ಸಮಾಜ ಬಾಂಧವರೆಲ್ಲ ಸೇರಿ ಮಾಡುವುದು ಸಾಮೂಹಿಕ. ಸಮುದಾಯ ಪ್ರಾರ್ಥನೆ ಎಂದರೆ ಗಣ ಸಮಾವೇಶ. ಊರುಗಳ ಮಧ್ಯದಲ್ಲಿ ಒಂದು ವಿಶಾಲವಾದ ಮೈದಾನದಲ್ಲಿ ಎಲ್ಲರೂ ಸೇರಿ ಪ್ರಾರ್ಥನೆ ಮಾಡುವುದು ಅಥವಾ ಈ ಪ್ರದೇಶದಲ್ಲಿ ಬೇರೆ ಬೇರೆ ಗ್ರಾಮಗಳಲ್ಲಿ ಗುಂಪಾಗಿ ನೆಲೆಸಿರುವುದರಿಂದ ಎಲ್ಲರಿಗೂ ಮಧ್ಯವರ್ತಿ ಯಾದ ಸ್ಥಳದಲ್ಲಿ ಸೇರಿ ಕಾರ್ಯಕ್ರಮ ನಡೆಸಬೇಕು. ಇದಕ್ಕೆ ಶಿವರಾತ್ರಿಯ ದಿನ ಸೂಕ್ತ ಎಂದು ನಿಗದಿಪಡಿಸಲಾಗಿದೆ. ಇನ್ನು ಬಸವ ಕ್ರಾಂತಿ ದಿನ (ಸಂಕ್ರಾಂತಿ) ದಂದು ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ಬೃಹತ್ ಸಮಾವೇಶದಲ್ಲಿ ಸಮುದಾಯ ಪ್ರಾರ್ಥನೆ-ಪ್ರತಿಜ್ಞಾ ಸ್ವೀಕಾರವು ನಡೆಯುತ್ತದೆ. ಅದಕ್ಕೆ ತಪ್ಪದೆ ಬರಬೇಕೆಂಬ ನಿಯಮವನ್ನು ಇರಿಸಿಕೊಳ್ಳಬೇಕು. ಅನಿವಾರ್ಯವಾಗಿ ಆಗದಿದ್ದಾಗ ಅಂದು ತಾವಿರುವಲ್ಲೇ ಮನೆಯಲ್ಲೇ ಪ್ರಾರ್ಥನೆ ಮಾಡಿಕೊಳ್ಳಬೇಕು.

ಧರ್ಮದ ಸರಿಯಾದ ತಿಳುವಳಿಕೆಯಿಲ್ಲದೆ ಬಹುಪಾಲು ಜನರು ಬಹುದೇವತೋ ಪಾಸನೆ, ಮೂಢನಂಬಿಕೆ, ಜಾತೀಯತೆಯ ಅನುಸರಣೆ ಮಾಡುತ್ತಿದ್ದು, ಧರ್ಮ ಗುರು ಬಸವಣ್ಣನವರ ಆದೇಶಕ್ಕೆ ವಿರುದ್ಧವಾಗಿ ನಡೆಯುತ್ತಿದ್ದಾರೆ. ವಚನ ಸಾಹಿತ್ಯದ ಸಂಪರ್ಕವನ್ನು ಕಳೆದುಕೊಂಡುದಕ್ಕಾಗಿ ಇಂತಹ ಶಿಥಿಲತೆ ಉಂಟಾಗಿದೆ. ರೋಗದ ಕಾರಣವನ್ನು ಕಂಡುಕೊಂಡ ಬಳಿಕ, ಅದರ ನಿಯಂತ್ರಣ ಮತ್ತು ನಿವಾರಣೆ ಎರಡೂ ಸಾಧ್ಯವಷ್ಟೆ. ಹಾಗೆಯೇ ನಮ್ಮ ಸಮಾಜದ ಧಾರ್ಮಿಕ ಮತ್ತು ತಾತ್ವಿಕ ಶಿಥಿಲತೆ ಎಂಬ ರೋಗಕ್ಕೆ ಕಾರಣ ವಚನ ಸಾಹಿತ್ಯದ ಅಧ್ಯಯನ ಇಲ್ಲದುದು ಎಂದು ಮನ-

ವರಿಕೆಯಾದ ಬಳಿಕ; ಈಗ ನಾವು ಇದರ ನಿವಾರಣೆಗೆ ತೀವ್ರವಾಗಿ ಯತ್ನಿಸಬೇಕು. ದಿನನಿತ್ಯ ಮನೆಯಲ್ಲಿ ಎಲ್ಲರೂ ವಚನ ಚಿಂತನೆ ಮಾಡಬೇಕು; ವಾರಕ್ಕೊಮ್ಮೆ ಸಾಮೂಹಿಕವಾಗಿ ಮಾಡಬೇಕು.

ಧರ್ಮ ಮತ್ತು ಸಮಾಜಗಳ ಮಧ್ಯೆ ಸಂಪರ್ಕ ಕಲ್ಪಿಸಿ, ಧರ್ಮದ ಆದ್ಯರು, ಸ್ಥಾಪಕರು ಹಾಕಿಕೊಟ್ಟ ಮಾರ್ಗದಲ್ಲಿ ಜನರನ್ನು ಮುಂದೆ ನಡೆಸಲೆಂದು ಮಠಗಳನ್ನು ಪ್ರಾರಂಭಿಸಲಾಯಿತು. ನೆರೆ ರಾಜ್ಯಗಳಲ್ಲಿ ಅಲ್ಪ ಸಂಖ್ಯಾತರಾಗಿರುವ ಇಲ್ಲಿ ಅಷ್ಟೊಂದು ಮಠಗಳು ಇಲ್ಲವೆಂಬುದು ನಮಗೂ ಗೊತ್ತು. ಬಹು ಸಂಖ್ಯೆಯಲ್ಲಿ ಮಠಗಳು ಇರುವ ಕರ್ನಾಟಕದಲ್ಲಿ ಇಲ್ಲಿಗಿಂತಲೂ ಹೆಚ್ಚು ಲಿಂಗವಂತರಲ್ಲಿ ಧಾರ್ಮಿಕ ಶಿಥಿಲತೆ ಬಂದಿದೆ ಎಂದರೆ ಉತ್ಪ್ರೇಕ್ಷೆಯೇನಲ್ಲ. ಬೆರಳ ಮೇಲೆ ಎಣಿಸುವಷ್ಟು ಮಠಗಳನ್ನು ಬಿಟ್ಟರೆ ಬಾಕಿಯವು ಧರ್ಮಗುರು ಬಸವಣ್ಣನವರ ತತ್ತ್ವಕ್ಕೆ ವಿರುದ್ಧವಾಗಿಯೇ ನಡೆಯುತ್ತಿವೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ವಚನ ಸಾಹಿತ್ಯವನ್ನು ಸರಿಯಾಗಿ ತಿಳಿದು, ಬಸವ ಪಥದಲ್ಲಿ ನಡೆಯುವ ಅನೇಕ ಗೃಹಸ್ಥರು ಬಹುದೇವತೋಪಾಸನೆ, ಪಂಚಾಂಗ ಶ್ರವಣ, ಗಣಪತಿ ಪೂಜೆ, ನವಗ್ರಹಪೂಜೆ ಬಿಟ್ಟಿದ್ದಾರೆ. ವಿರಕ್ತ ಮಠಾಧಿಪತಿಗಳೇ ಅನೇಕರು, ಅಂದರೆ ಧರ್ಮಾನುಯಾಯಿಗಳಿಗೆ ಬಸವ ತತ್ತ್ವವನ್ನು ಬೋಧೆ ಮಾಡಬೇಕಾದವರು ಅಂಥವನ್ನೆಲ್ಲ ಬಿಡುವ ಆತ್ಮವಿಶ್ವಾಸ ಹೊಂದಿಲ್ಲ. ಇಂಥ ಪರಿಸ್ಥಿತಿಯಲ್ಲಿ ವಚನ ಸಾಹಿತ್ಯವೇ ನಮ್ಮ ನೇರವಾದ ಗುರು ಆಗಬೇಕಾಗಿದೆ. ಅದಕ್ಕಾಗಿ ರಾಷ್ಟ್ರೀಯ ಬಸವ ದಳಗಳನ್ನು ಪ್ರತಿ ಗ್ರಾಮ, ಊರುಗಳಲ್ಲಿಯೂ ಕಟ್ಟಿರಿ. ಸಮಾಜ ಸಂಘಟನೆ ಮಾಡಿ, ಜನರಿಗೆ ಸಂಸ್ಕಾರ ನೀಡಿರಿ. ಮನೆಗಳಲ್ಲಿ ಅನೇಕ ನೇಮ-ವಿಧಿ-ವಿಧಾನಗಳ ಅನುಸರಣೆ ಅಗತ್ಯವಾಗುತ್ತದೆ. ಹುಟ್ಟು-ಸಾವು-ವಿವಾಹ-ಗೃಹಪ್ರವೇಶ ಮುಂತಾದುವನ್ನು ಮಾಡಲು ಕ್ರಿಯಾ ಮೂರ್ತಿಗಳು, ವಚನ ಪ್ರವಚನ ಮಾಡಲು ಜ್ಞಾನ ಮೂರ್ತಿಗಳು, ನಿಮ್ಮಲ್ಲಿ ತಯಾರಾಗಬೇಕು. ಅಂದಾಗ ಮಾತ್ರ ನಿರಂತರವಾಗಿ ಧಾರ್ಮಿಕ ಸಂಸ್ಕಾರವನ್ನು ನೀಡಲು ಸಾಧ್ಯವಾಗುತ್ತದೆ.

ಪರಸ್ಪರ ಸಾಮರಸ್ಯ : ಜೀವನದಲ್ಲಿ ಏರಿಳಿತಗಳಾಗಿ ಸಮಾಜದ ಸದಸ್ಯರಿಗೆ ಯಾರಿಗಾದರೂ ಕಷ್ಟ-ಬಡತನ ಬಂದಾಗ ಪರಸ್ಪರರು ಸಹಾಯ ಮಾಡಬೇಕು. ಅದನ್ನೇ ಧರ್ಮಪಿತರು ಹೀಗೆ ಹೇಳಿದರು :

ಕಾಗೆಯೊಂದಗುಳ ಕಂಡರೆ
ಕರೆಯದೇ ತನ್ನ ಬಳಗವೆಲ್ಲವನು ?
ಕೋಳಿ ಒಂದು ಕುಟುಕ ಕಂಡರೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವ ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಯಿಂದ ಕರಕಷ್ಟ ನೋಡಾ,
ಕೂಡಲ ಸಂಗಮದೇವ.

ಕಾಗೆಯಂತಹ ಪಕ್ಷಿ ಅನ್ನದ ಅಗುಳನ್ನು ಕಾಣುತ್ತಲೇ ತನ್ನ ಬಳಗವನ್ನೆಲ್ಲ ಕಾ ಕಾ ಎಂದು ಕರೆದು ಹಂಚಿಕೊಂಡು ಉಣ್ಣುತ್ತದೆ. ಕೋಳಿಯು ಕಾಳನ್ನು ನೋಡುತ್ತಲೇ ಕೊಕ್ಕೊ ಎಂದು ಕರೆದು ಹಂಚಿಕೊಂಡು ತಿನ್ನುತ್ತದೆ. ದೇವರ ಭಕ್ತನಾಗಿ ಇಂತಹ ಹಂಚಿಕೊಂಡು ಉಣ್ಣುವ ಸದ್ಭಾವ ಬೆಳೆಸಿಕೊಳ್ಳದಿದ್ದರೆ ಅಂಥ ಪಕ್ಷಿಗಳಿಗಿಂತಲೂ ಮನುಷ್ಯ ಕೀಳಾಗುವನು ಎಂದು ಎಚ್ಚರಿಸುವರು.

ಪ್ರತಿಯೊಬ್ಬ ಮನುಷ್ಯನು ಬರುವಾಗ ಕೈ ಬರಿದಾಗಿ, ಬೆತ್ತಲೆಯಾಗಿ ಬರುತ್ತಾನೆ. ಸಾಯುವಾಗಲೂ ಬರಿಗೈಯಿಂದಲೇ ಹೋಗುತ್ತಾನೆ. ನಿಮ್ಮೂರಲ್ಲಿ ಯಾರಾದರೂ ಟೀ ತೋಟ, ಹಣ-ಒಡವೆ, ಫ್ರಿಜ್ ಮುಂತಾದುವನ್ನು ಸತ್ತಾಗ ಒಯ್ದಿರುವರೋ ನಮಗೆ ಗೊತ್ತಿಲ್ಲ. ನಮ್ಮ ಕಡೆಯವರಂತೂ ಒಯ್ಯುವುದಿಲ್ಲ. ಅಂದಾಗ ಮನುಷ್ಯ ಬಡವ-ಬಲ್ಲಿದ ಎಂಬ ಅಂತಸ್ತು ಭೇದ ಏಕೆ ಬೇಕು ? ಎಲ್ಲರೊಡನೆ ಪ್ರೀತಿ-ವಿಶ್ವಾಸಗಳಿಂದ ಬಾಳುವುದೇ ಗುರಿಯಾಗಬೇಕು.

ಕೆಲವರು ಶ್ರೀಮಂತರಾಗುತ್ತಾ ಹೋದಂತೆ ಸಮಾಜದ ಜನರ ಜೊತೆ ಬೆರೆಯುವುದೇ ಇಲ್ಲ. ಎಲ್ಲದಕ್ಕೂ ಸಮಯವಿಲ್ಲ ಎನ್ನುತ್ತಾರೆ. ಹಣ ಗಳಿಸಲು ಅಷ್ಟೇ ಸಮಯ ಎಂದುಕೊಂಡಿರುತ್ತಾರೆ. ಇದು ತಪ್ಪು. ಎಷ್ಟೇ ಕೆಲಸದ ಒತ್ತಡವಿರಲಿ ಊಟಕ್ಕೆ-ನಿದ್ರೆಗೆ ಸಮಯವನ್ನು ನಿಗದಿ ಪಡಿಸಿದಂತೆ ಇಷ್ಟಲಿಂಗಪೂಜೆಗೆ, ಶರಣರ ಸಂಗಕ್ಕೆ, ಶರಣ ಮೇಳಕ್ಕೆ ಸಮಯವನ್ನು ಕೊಡಲೇಬೇಕು. ದೇವರ ಕೃಪೆ ಇದ್ದರೆ ಇನ್ನೂ ಹೆಚ್ಚಿನ ಸಂಪಾದನೆ ಆಗುತ್ತದೆ.

ಲಿಂಗಾಯತ ಧರ್ಮಾನುಯಾಯಿಗಳು ಸ್ವಭಾವತಃ ಸಾತ್ವಿಕರು; ಎಲ್ಲಿಯೇ ಇದ್ದರೂ ಹೊಂದಿಕೊಂಡು ಬಾಳುತ್ತಾರೆ, ಬಾಳಬೇಕು. ನಮ್ಮಲ್ಲಿ ಧರ್ಮಶ್ರದ್ಧೆಯೊಡನೆ ರಾಷ್ಟ್ರನಿಷ್ಠೆಯೂ ಅತ್ಯಗತ್ಯ. ಹೇಗೆ ಭೂಮಿ ತನ್ನ ಅಕ್ಷದ ಮೇಲೆ ತಿರುಗುತ್ತ ಸೂರ್ಯನ ಸುತ್ತಲೂ ತಿರುಗುವುದೋ ಹಾಗೆ ನಮ್ಮಲ್ಲಿ ಧರ್ಮಶ್ರದ್ಧೆಯೊಡನೆ ರಾಷ್ಟ್ರದ ಹಿತಚಿಂತನೆ ಮಾಡುವ ಸ್ವಭಾವವೂ ಬೆಳೆಯಬೇಕು.

ನಾವು ಎಲ್ಲಿಯೇ ಇದ್ದರೂ ಧರ್ಮಗುರುವಿಗೆ ಕೀರ್ತಿತರುವಂಥ ಸದಾಚಾರ ಸಂಪನ್ನರು, ಸುವಿಚಾರಿಗಳೂ ಆಗಬೇಕು. ಇಂದು ಎಲ್ಲಿ ನೋಡಿದರೂ ಸ್ವಾರ್ಥ-ಅನಾಚಾರ-ಕುಡಿತ ಹೆಚ್ಚಾಗಿ ಮನುಷ್ಯ ಪ್ರಾಣಿಗಳಿಗಿಂತಲೂ ಕೀಳಾಗಿ ವರ್ತಿಸುತ್ತಿದ್ದಾನೆ. ದುಶ್ಚಟ-ದುರ್ಗುಣಗಳ ತವರಾಗುತ್ತಿದ್ದಾನೆ, ಕುಡಿತದ ಚಟಕ್ಕೆ ಬಲಿಯಾಗಿ ತಾನು ಹಾಳಾಗುವುದಲ್ಲದೆ ಹೆಂಡತಿ-ಮಕ್ಕಳ ಬದುಕಿಗೂ ದುಃಖವನ್ನು ತರುತ್ತಾನೆ. ಅದಕ್ಕೇ ಬಸವಣ್ಣನವರು ಹೇಳುವುದು :

ದುರ್ವ್ಯಸನಿ ದುರಾಚಾರಿ ಎಂದೆನಿಸದಿರಯ್ಯ
ಎನ್ನ ಲಿಂಗ ವ್ಯಸನಿ ಜಂಗಮ ಪ್ರೇಮಿ ಎಂದೆನಿಸಯ್ಯ

ದೇವರು-ಧರ್ಮ ಕುರಿತು ವ್ಯಸನ ಬೆಳೆಸಿಕೊಳ್ಳಬೇಕು. ತನ್ನನ್ನು ತಾನು ನಿಗ್ರಹಿಸಿಕೊಳ್ಳಲು ಶರಣ ಸಂಗದ ಪ್ರೇಮಿಯಾಗಬೇಕು. ಈ ರೀತಿ ನಡೆದಾಗ ತಾವೆಲ್ಲರೂ ಗುರು ಬಸವಣ್ಣನವರು ಮೆಚ್ಚುವಂತೆ ಬಾಳಿದಂತೆ ಆಗುತ್ತದೆ.

ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ
ಇವನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯ
ಕೂಡಲ ಸಂಗಮ ದೇವ, ನಿಮ್ಮ ಮನೆಯ ಮಗನೆನಿಸಯ್ಯ

ಇವನು ಯಾರು ? ಎಂದು ನಾವು ಜಾತಿ, ಮತ, ಅಂತಸ್ತು ಹಿಡಿದು ಭೇದ ಮಾಡ-ಬಾರದು; ಇನ್ನೊಬ್ಬರೂ ನಮ್ಮನ್ನು ಭೇದ ಬುದ್ಧಿಯಿಂದ ಕಾಣುವಂತಾಗಬಾರದು. ನಾವು ಎಲ್ಲರನ್ನೂ ಇವರು ನಮ್ಮವರು ಎಂದು ಭಾವಿಸಬೇಕು. ಇತರರೂ ಹಾಗೆಯೇ ನಮ್ಮನ್ನು ಆತ್ಮೀಯತೆಯಿಂದ ಕಾಣುವಂತಾಗಬೇಕು. ಆಗ ಮಾತ್ರ ನಾವು ಬಸವ ಮಹಾಮನೆಯ ಮಕ್ಕಳಾಗಲು ಸಾಧ್ಯ. ಈ ರೀತಿ ಬದುಕುವ ಸಂಕಲ್ಪವನ್ನು ನೀವೆಲ್ಲರೂ ಮಾಡಬೇಕೆಂದು ಹಾರೈಸಿ ನನ್ನ ಅಧ್ಯಕ್ಷೀಯ ಭಾಷಣ ಮುಗಿಸುತ್ತೇನೆ.

ಜಯಗುರು ಬಸವೇಶ ಹರಹರ ಮಹಾದೇವ ★

ಕೇವಲ ಸಮ್ಮೇಳನವಲ್ಲ ಹಾರ್ದಿಕ ಸಮ್ಮಿಳನವಾಗಬೇಕು

ಶರಣ ಬಂಧುಗಳೇ,

ಪ್ರಕೃತಿ ಮಾತೆಯು ಹಸಿರುಡಿಗೆಯನ್ನು ಹೊತ್ತು ಕಂಗೊಳಿಸುವ ಸುಪ್ರಸಿದ್ಧ ಗಿರಿಧಾಮ ಊಟಿ (ಉದಕ ಮಂಡಲ)ಯ ಪರಿಸರದಲ್ಲಿರುವ ಕಾಟೇರಿ ಡ್ಯಾಂ ಸೈಟಿನಲ್ಲಿ ಅಖಿಲ ಭಾರತ ಪ್ರಥಮ ಬಸವ ಧರ್ಮ ಸಮ್ಮೇಳನವು ಇದೇ 1993 ರ ಮೇ 8-9 ರಂದು ನಡೆಯುತ್ತಿದೆಯಷ್ಟೆ. ಇದರಲ್ಲಿ ತಾವೆಲ್ಲರೂ ಅಧಿಕಧಿಕ ಸಂಖ್ಯೆಯಲ್ಲಿ ಭಾಗವಹಿಸಬೇಕು. ಈ ಸಮ್ಮೇಳನ ಚಾರಿತ್ರಿಕ ದೃಷ್ಟಿಯಿಂದ ಬಹಳ ಮಹತ್ವಪೂರ್ಣ.

ತಮಿಳುನಾಡಿನ ನೀಲಗಿರಿ ಜಿಲ್ಲೆಯ ಗುಡ್ಡಗಳ ಮಧ್ಯೆ ನೆಲೆಸಿರುವ ಕೆಲವು ಊರುಗಳ ಶರಣ ಬಂಧುಗಳು ಈ ಸಮ್ಮೇಳನದ ಪ್ರಾಯೋಜಕರಾಗಿದ್ದಾರೆ. ಇವರು ಆ ರಾಜ್ಯದಲ್ಲಿ, ಜಿಲ್ಲೆಯಲ್ಲಿ ಅಲ್ಪ ಸಂಖ್ಯಾತರಾಗಿದ್ದರೂ ಭಕ್ತಿ-ಶ್ರದ್ಧೆ-ಉತ್ಸಾಹದಲ್ಲಿ ಬಹಳ ಮುಂದಿದ್ದಾರೆ. ಹೊರ ರಾಜ್ಯಗಳಲ್ಲಿ ನೆಲೆಸಿರುವ ಲಿಂಗವಂತ ಧರ್ಮೀಯರಲ್ಲಿ

ಇತ್ತೀಚಿನವರೆಗೂ ಈಗಲೂ ವ್ಯಾಪಾರ ವ್ಯವಹಾರಗಳಿಗಾಗಿ ಹೋಗಿ ನೆಲೆಸಿರುವ ಲಿಂಗವಂತರು ಒಂದು ಬಗೆಯಾಗಿದ್ದರೆ, ಅಂದು ಕಲ್ಯಾಣ ಕ್ರಾಂತಿಯಾದಾಗ ಕಲ್ಯಾಣದಿಂದ ಚದುರಿ ದೂರದೂರದ ನಾಡುಗಳಲ್ಲಿ ನೆಲೆಸಿದವರು ಇನ್ನೊಂದು ಬಗೆ.

ದೂರದೂರವೆ ಸಾಗಿ ಸೇರಿದರು ಹಳ್ಳಿಗಳ
ಯಾರು ಯಾರೆಂಬ ಗುರುತಳಿದು । ಮರೆಯಾಗಿ
ಅರಿ ಕೆಂಡಡಗಿ ಬೂದಿಯೊಳು ॥೮೨॥

ಜನಪದ ಕವಿಗಳು ಬಣ್ಣಿಸಿದಂತೆ, ಈ ನಮ್ಮ ಶರಣ ಬಂಧುಗಳು ಈ ವರ್ಗಕ್ಕೆ ಸೇರಿದವರು. ಇಂದಿಗೂ ಅವರು ಭಜನೆ ಮಾಡುತ್ತ ಹಾಡುವ ಕೆಲವು ಬಸವ ಸ್ತೋತ್ರಗಳು ಅನುಭವ ಮಂಟಪದಲ್ಲೇ ಹಾಡಲ್ಪಡುತ್ತಿದ್ದವೇನೋ ಎನ್ನಿಸುತ್ತದೆ. ವಚನ ವಾಙ್ಮಯದ ಹಳೆಗನ್ನಡವನ್ನು ಅವರ ಹಾಡುಗಳಲ್ಲಿ ಗುರುತಿಸಬಹುದು.

ಇಂಥ ಶರಣ ಬಂಧುಗಳು ಸಂಯೋಜಿಸಿರುವ ಸಮ್ಮೇಳನವು ಕೇವಲ ಕೆಲವಾರು ಜನ ಸೇರಿ ಪುನಃ ಹೊರಟು ಹೋಗುವಂತಹ ಯಾಂತ್ರಿಕ ಸಮ್ಮೇಳನವಾಗದೆ ಪರಸ್ಪರರ ಹೃದಯಗಳನ್ನು ಬೆಸೆಯುವ ಸಮ್ಮಿಳನವಾಗಬೇಕು. ಒಂದು ಬೃಹತ್ ಕುಟುಂಬದ ಮಕ್ಕಳೆಲ್ಲ ಚದುರಿ ಚೆಲ್ಲಾಪಿಲ್ಲಿಯಾಗಿ ಹೋಗಿ, ಅನಂತ ಸಂಕಷ್ಟಗಳನ್ನು ಎದುರಿಸಿ ತಂದೆ-ತಾಯಿಯರ ಆಶ್ರಯ ಕಳೆದುಕೊಂಡು, ಏನೂ ಇಲ್ಲದ ನಿರ್ಗತಿಕರಂತೆ ಅಲೆದಾಡಿದ್ದಾಯಿತು. ಈಗ ಆದಿ ಶರಣರು ಸೂಚಿಸಿದ್ದ ಸುವರ್ಣಕಾಲ ಬಂದಿದೆ. ಅಪ್ಪ-ಬಸವಣ್ಣ, ಅವ್ವ-ವಚನ ವಾಙ್ಮಯ, ತೌರು-ಕೂಡಲ ಸಂಗಮ, ಅಪಾರ ಆಸ್ತಿ-ಶರಣ ಸಂಸ್ಕೃತಿ ಲಭ್ಯವಾಗಿವೆ. ಈಗ ಈ ಶರಣ ಕುಟುಂಬ ಒಂದುಗೂಡಲು ಕಾಲ ಬಹಳ ಮಾಗಿದೆ. ಈ ಸಮ್ಮೇಳನ ಶರಣ ಬಂಧುಗಳನ್ನೆಲ್ಲ-ಬೆಸೆಯುವ ಸುಂದರ ಸಮ್ಮಿಳನವಾಗಬೇಕು.

ರಾಷ್ಟ್ರೀಯ ಬಸವ ದಳಗಳವರದ್ದು ನೇರ ಹೊಣೆಗಾರಿಕೆ ಇದೆ. ಒಂದು ಮನೆತನದವರಲ್ಲಿ ಏನಾದರೂ ವಿಶೇಷ ಕಾರ್ಯಕ್ರಮ ನಡೆದಾಗ ಹೇಗೆ ಅಣ್ಣ ತಮ್ಮಂದಿರೆಲ್ಲರು ಒಟ್ಟುಗೂಡಿ ಅದರಲ್ಲಿ ಭಾಗಿಗಳಾಗುವರೋ ಹಾಗೆ ಇಂಥ ಧಾರ್ಮಿಕ ಸಮ್ಮಿಳನದಲ್ಲಿ ಎಲ್ಲರೂ ಒಟ್ಟಾಗಿ ದುಡಿಯಬೇಕು. ತನುವಿನಿಂದ,ಮನದಿಂದ, ಧನದಿಂದ ದುಡಿಯಬೇಕು. ಶರಣ ಮೇಳದಲ್ಲಿ ಹೇಗೆ ಸ್ವಯಂ ಸ್ಫೂರ್ತಿಯಿಂದ ಅನೇಕರು ದುಡಿಯುವರೋ ಹಾಗೆ ಇಲ್ಲಿಯೂ ತನುಸೇವೆ ಮಾಡಬೇಕು. ಹಾಗೆಯೇ ಸಮ್ಮೇಳನದ ಪ್ರಚಾರ ಕಾರ್ಯಮಾಡಬೇಕು. ರಾಷ್ಟ್ರೀಯ ಬಸವ ದಳಗಳ ಶರಣರಿಗೆ ಧನವನ್ನು ದೇಣಿಗೆಯ ರೂಪದಲ್ಲಿ ಸಂಗ್ರಹಿಸಿರಿ ಎಂದು ಕರೆ ಕೊಡಲು, ರಸೀತಿ ಪುಸ್ತಕ ಕಳಿಸಲು ಸಂಕೋಚವಾಗುತ್ತಿದೆ. ಏಕೆಂದರೆ ತಾವೆಲ್ಲರೂ ಶರಣ ಮೇಳಕ್ಕೆ ಡಿಸೆಂಬರ ತಿಂಗಳವರೆಗೂ ಸಂಗ್ರ-

ಹಿಸಿದ್ದೀರು. ಮತು ಬಸವ ತತ್ತ್ವಕ್ಕಾಗಿ ದುಡಿಯುವವರು ದೇಣಿಗೆ ಸಂಗ್ರಹಿಸುವವರು ಸಾಮಾನ್ಯವಾಗಿ ಮಧ್ಯಮ ವರ್ಗದವರೇ ಆಗಿರುವುದರಿಂದ ಪುನಃ ಸಂಗ್ರಹಿಸುವುದು ನಿಮಗೆ ಕಷ್ಟಸಾಧ್ಯ. ಆದರೆ ಬೇರೊಂದು ರೀತಿಯಲ್ಲಿ ನೀವು ನೆರವಾಗಲು ಸಾಧ್ಯವಿದೆ. ರಾಷ್ಟ್ರೀಯ ಬಸವ ದಳದ ಪದಾಧಿಕಾರಿಗಳು, ಶರಣ ಬಂಧುಗಳು ತಮ್ಮ ಧರ್ಮ ಬಂಧುಗಳ ಸಂಕಲ್ಪವನ್ನು ಯಶಸ್ವಿಗೊಳಿಸಲೋಸುಗ ತಮ್ಮ ಕೈಲಾದ ದೇಣಿಗೆ ನೀಡ ಬಹುದು. ಎರಡನೆಯದಾಗಿ ಪ್ರತಿನಿಧಿ ಶುಲ್ಕ 100 ರೂ ಅಥವಾ ಅದಕ್ಕೂ ಹೆಚ್ಚಿನ ದೇಣಿಗೆಯನ್ನು ಬೇಗನೇ (ಏಪ್ರಿಲ್ 15ರೊಳಗಾಗಿ) ಕಳಿಸಿಕೊಡುವುದು. ಪ್ರತಿಯೊಂದು ಸಕ್ರಿಯ ರಾಷ್ಟ್ರೀಯ ಬಸವ ದಳದಿಂದ ಕನಿಷ್ಟಪಕ್ಷ ಇಬ್ಬರು-ಮೂವರು ಪ್ರತಿನಿಧಿಗಳನ್ನು ಕಳುಹಿಸಿಕೊಡುವುದು. ಈ ಪ್ರತಿನಿಧಿಗಳು ತಮಗೆ ಆರ್ಥಿಕ ಅನುಕೂಲತೆ ಇದ್ದರೆ ತಮ್ಮ ಖರ್ಚು-ವೆಚ್ಚ ತಾವೇ ಭರಿಸಬಹುದು. ಆರ್ಥಿಕ ಅನುಕೂಲತೆ ಇಲ್ಲದಿದ್ದರೆ ರಾಷ್ಟ್ರೀಯ ಬಸವ ದಳದ ವತಿಯಿಂದಲೇ ಖರ್ಚು-ವೆಚ್ಚ ಭರಿಸಿ ಪ್ರತಿನಿಧಿಗಳನ್ನು ಕಳಿಸಿಕೊಡುವುದು.

ಬಸವ ಧರ್ಮ ಸಂಸತ್‌ಸದಸ್ಯರು : ಇವರೂ ಸಹ ಇಂತಹ ಸಮ್ಮೇಳನ ನಡೆದಾಗ ಎಷ್ಟೇ ಗುರುತರವಾದ ಮನೆಕೆಲಸ, ತಾಪತ್ರಯಗಳಿದ್ದರೂ ಬಿಡುವು ಮಾಡಿಕೊಂಡು ಬರಬೇಕು. ಕೆಲವರು ಸದಾ ಒಂದಿಲ್ಲೊಂದು ತಾಪತ್ರಯದಿಂದ ನರಳುತ್ತ ನೆಪ ಹೇಳು-ವುದು ಅವರ ಜಾಡ್ಯವಾಗಿರುತ್ತದೆ. ಕೆಲವು ವೃತ್ತಿಗಳವರಂತೂ (ಉದಾ : ವೈದ್ಯರು ಮತ್ತು ವ್ಯಾಪಾರಿಗಳು) ಒಂದು ದಿನ ಸಹಿತ ಅಂಗಡಿ ಬಾಗಿಲು ಮುಚ್ಚಲು ಸಿದ್ಧರಿರು-ವುದಿಲ್ಲ. ಇವರ ಮೇಲೆ ಇಡೀ ಜಗತ್ತಿನ ರೋಗಿಗಳು ಬದುಕಿರುವರು ಎಂದು ನಂಬಿ ರುವಂತೆ ತೋರುತ್ತದೆ. ವ್ಯಾಪಾರಿಗಳು ಒಂದು ದಿನದ ತಮ್ಮ ಲಾಭವನ್ನೂ ಕಳೆದು ಕೊಳ್ಳಲಾರದೆ ಕರ್ತವ್ಯದ ಸೋಗು ಹಾಕುತ್ತಾರೇನೋ ಅನ್ನಿಸುತ್ತದೆ.

ಅನೇಕರು ಚಿಂತನ ಶೀಲರು, ಸಮಾಜದ ಬಗ್ಗೆ ಕಳಕಳಿಯುಳ್ಳವರು ಇರುತ್ತಾರೆ. ಇವರು ತಮ್ಮ ಪಾಡಿಗೆ ತಾವೇ ಸಾಕಷ್ಟು [*Individual thinkers*) ಚಿಂತನೆ ಮಾಡಿರುತ್ತಾರೆ. ಇಂಥ ಚಿಂತನ ಶೀಲರು ಒಟ್ಟಾಗಿ ಸೇರಿ ಆಗಾಗ ಸಾಮೂಹಿಕವಾಗಿ ಚಿಂತನೆ ಮಾಡಿದರೆ ಹಲವಾರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂದು ಬಸವ ಧರ್ಮ ಸಂಸತ್ ಎಂಬ ಪ್ರಾತಿನಿಧಿಕ ಸಂಸ್ಥೆ ರೂಪಿಸಿದ್ದೇವೆ. ಕೆಲವರು ಸಂತೋಷದಿಂದಲೇ ಆಯ್ಕೆಯನ್ನು ಒಪ್ಪಿಕೊಂಡರೂ ಸಮಯವನ್ನು ಮಾತ್ರ ಕೊಡಲು ಸಿದ್ಧರಿಲ್ಲ. ಧರ್ಮದ ಅಥವಾ ಸತ್‌ಮೌಲ್ಯಗಳ ಉಳುವಿಗಾಗಿ ತನು-ಮನ-ಧನದೊಡನೆ ಸಮಯ ಪ್ರಾಣವನ್ನೂ ಮೀಸಲಿಡಬೇಕಾಗುತ್ತದೆ. ದೊಡ್ಡ ದೊಡ್ಡ ಆದರ್ಶದ ಮಾತನ್ನಾಡಿ ಸಾಮೂಹಿಕ ಚಿಂತನೆಗಾಗಿ ಕೆಲವು ನಿಮಿಷಗಳನ್ನೂ ಮೀಸಲಿಡದ ಬಸವ ಧರ್ಮ ಸಂಸತ್ ಸದಸ್ಯರಿಂದ ಧರ್ಮ ಸಮಾಜಗಳ ಸಂಘಟನೆಗೆ ಏನೂ ಪ್ರಯೋಜನವಾಗದು. ಆದ್ದರಿಂದ ವರ್ಷದಲ್ಲಿ 3 ಬಾರಿ ನಡೆಯುವ (ಶರಣ ಮೇಳ-ಜನವರಿ 12 ರಂದು,

ಅಕ್ಟೋಬರ್ ಶಿಬಿರ, ಮಧ್ಯೆ ಒಮ್ಮೆ ಈಗ ಮೇ ತಿಂಗಳ ಸಮ್ಮೇಳನ) ಸಮಾವೇಶ ಗಳಲ್ಲಿ ಕನಿಷ್ಟ 2 ಸಲವಾದರೂ ಭಾಗಿಯಾಗದಿದ್ದರೆ ಪ್ರಯೋಜನವೇನು? ಇದನ್ನರಿತು ಈ ಸಮಾವೇಶದಲ್ಲಿ ಭಾಗಿಗಳಾಗಬೇಕು. ಭಾಗವಹಿಸುವವರು ತಮ್ಮ ತಮ್ಮ ಪ್ರತಿ ನಿಧಿ ಶುಲ್ಕವನ್ನು ಬೇಗನೇ ಕಳಿಸಿಕೊಡಬೇಕು.

ಬೆಂಗಳೂರು-ಮೈಸೂರು ಮೂಲಕ ಊಟಿಯನ್ನು ತಲುಪಬೇಕು. ಸಮ್ಮೇಳನ ನಡೆಯುವ ಸ್ಥಳ ಕಾಟೇರಿ ಡ್ಯಾಂ ಸೈಟು, ರೇಲ್ವೆಯಲ್ಲಿ ಬರುವವರಿಗೆ ಕೊಯಂ-ಮತ್ತೂರು ಬಹಳ ಅನುಕೂಲಕರ. ಅಲ್ಲಿಂದ ಟ್ರೇನೂ ಊಟಿಗೆ ಇದೆ ಮತ್ತು ಬಸ್ಸಿನ ಅನುಕೂಲ ಸಾಕಷ್ಟಿದೆ. ಊಟಿಯ ಬಸ್ ನಿಲ್ದಾಣದಲ್ಲಿ ಒಂದು ಶಾಮಿಯಾನಾ ಟೆಂಟ್ ಹಾಕಿಸಿ, ಬ್ಯಾನರ್ ಕಟ್ಟಿಸಿ ಸೂಚನೆ ನೀಡುವದಕ್ಕಾಗಿ ಕಾರ್ಯಕರ್ತರನ್ನು ನಿಲ್ಲಿಸ ಲಾಗಿರುವುದು.

ವಿಶೇಷ ಸೂಚನೆ: (1) ಬೆಂಗಳೂರಿನ ಬಸವ ಮಂಟಪದಲ್ಲಿಯೂ ಮಾಹಿತಿ ದೊರೆ ಯುತ್ತಿದ್ದು, ಪ್ರತಿನಿಧಿ ಶುಲ್ಕ ಕಳಿಸುವವರು ಇಲ್ಲಿಗೆ ಕಳಿಸಿ, ರಸೀತಿ ಪಡೆಯಬಹುದು.

(2) ಬೆಂಗಳೂರಿನವರೆಗೆ ಬಂದು ಇಲ್ಲಿಂದ ಕರ್ನಾಟಕ ಸರ್ಕಾರ ಮತ್ತು ತಮಿಳು ನಾಡಿನ ಸರ್ಕಾರದ ಬಸ್ಸುಗಳ ಮೂಲಕ ಊಟಿ ತಲುಪಬೇಕು ಎನ್ನುವವರು ಬಸವ ಮಂಟಪದಲ್ಲಿ ಹಣ ಕಟ್ಟಿ ರಿಸರ್ವೇಷನ್ ಮಾಡಿಸಿಕೊಳ್ಳಬಹುದು.

(3) ರಾಷ್ಟ್ರೀಯ ಬಸವ ದಳಗಳವರು, ಹೆಚ್ಚಿನ ಪ್ರಮಾಣದಲ್ಲಿ ತಮ್ಮೂರಿಂದ ಜನ ಹೊರಡುತ್ತಿದ್ದರೆ, ರಸೀತಿ ಪುಸ್ತಕಗಳನ್ನೂ ಕರಪತ್ರ-ವಾಲ್‌ಪೋಸ್ಟರ್ ತರಿಸಿಕೊಂಡು ತಾವೇ ರಸೀತಿ ಹಾಕಬಹುದು. ಏಪ್ರಿಲ್ 20 ರೊಳಗೆ ಪ್ರತಿನಿಧಿಗಳ ಯಾದಿ ಮತ್ತು ಹಣವು ಬಸವ ಮಂಟಪಕ್ಕೆ ತಲ್ಪಬೇಕು.

(4) ಬಸವ ಧರ್ಮ ಸಂಸತ್ ಸದಸ್ಯರು ದೇಣಿಗೆ ಸಂಗ್ರಹ ಮಾಡಲು ಇಷ್ಟವಿದ್ದರೆ ಪತ್ರ ಬರೆದು ರಸೀತಿ ಪುಸ್ತಕ-ಕರಪತ್ರ ಪೋಸ್ಟರ್ ತರಿಸಿಕೊಳ್ಳಬಹುದು.

ಹೆಚ್ಚು ಹೆಚ್ಚು ಜನ ಶರಣ ಬಂಧುಗಳು ಈ ಕಾರ್ಯಕ್ರಮದಲ್ಲಿ ಭಾಗಿಗಳಾಗುವಿರೆಂದು ಹೃತ್ಪೂರ್ವಕವಾಗಿ ನಿರೀಕ್ಷಿಸುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮಪೀಠ,
ಕೂಡಲ ಸಂಗಮ.

ರಾಷ್ಟ್ರೀಯ ಬಸವ ದಳಗಳವರಿಂದ ಬೇಸಿಗೆಯಲ್ಲಿ ಸಮ್ಮೇಳನ

1993 ನೇ ಜನವರಿ 12 ರಂದು ಬಸವ ಧರ್ಮ ಸಂಸತ್ ಅಧಿವೇಶನದಲ್ಲಿ ಜನವರಿಯಿಂದ ಸೆಪ್ಟಂಬರವರೆಗಿನ ಮಧ್ಯಂತರದ ಅವಧಿಯಲ್ಲಿ ರಾಷ್ಟ್ರೀಯ ಬಸವ ದಳಗಳವರು ಒಂದು ಸಮ್ಮೇಳನ ಹಮ್ಮಿಕೊಂಡು ಇನ್ನಿತರ ದಳಗಳ ಸದಸ್ಯರನ್ನು, ಬಸವ ಧರ್ಮ ಸಂಸತ್ ಸದಸ್ಯರನ್ನು ಮತ್ತು ಇನ್ನಿತರ ಶರಣ ಬಂಧುಗಳನ್ನು ಆಹ್ವಾನಿಸ ಬೇಕೆಂದು ನಿರ್ಣಯಿಸಲಾಯಿತು. ಈ ನಿರ್ಣಯದ ಸಾಕಾರವೆಂಬಂತೆ ತಮಿಳುನಾಡಿನ ನೀಲಗಿರಿ ಜಿಲ್ಲೆಯ ಬಂಧುಗಳು ಸಮ್ಮೇಳನ ನಡೆಸಲು ಮುಂದೆ ಬಂದರು. ಭಾಗವಹಿಸುವವರು ಪ್ರತಿನಿಧಿ ಶುಲ್ಕವನ್ನು ಕಟ್ಟುವುದರಿಂದ ಸಮ್ಮೇಳನ ನಡೆಸುವವರಿಗೆ ಸ್ವಲ್ಪ ಶ್ರಮ ಕಡಿಮೆಯಾಗುತ್ತದೆ. ಸಮ್ಮೇಳನ ಎಂದರೆ ಬೃಹತ್ತಾಗೇ ಇದ್ದು ಭಯಂಕರವಾಗಿ ಹಣವನ್ನು ಸಂಗ್ರಹಿಸಿ ವೆಚ್ಚಮಾಡಬೇಕೆಂದೇನೂ ಇಲ್ಲ. ಒಬ್ಬ ವ್ಯಕ್ತಿ ಬಹಳ ಶ್ರೀಮಂತ; ಬೆಳ್ಳಿಯ ಪೈಪು ಹಾಕಿಸಿ, ಬಂಗಾರದ ನಲ್ಲಿ ಹಾಕಿಸಿ ಅದ್ಭುತವಾಗಿ ಮನೆ ಕಟ್ಟಿಸಿದ್ದರೂ, ನೀರಿನ ಸಂಪರ್ಕವನ್ನೇ ಕೊಡಿಸಿರಲಿಲ್ಲವಂತೆ. ನೀರು ಬರದ ಬಂಗಾರದ ನಲ್ಲಿಗಳಿಂದ ಪ್ರಯೋಜನವೇನು ಎಂಬಂತೆ ಭಯಂಕರ ದೊಡ್ಡಮಂದಿ, ದೊಡ್ಡದಾಗಿ ಸೇರಿ, ಗಜಬಿಜಿ ಮಾಡಿ, ಭಾರಿ ದುಡ್ಡು ಎತ್ತಿ, ಭಾರಿ ಖರ್ಚು ಮಾಡಿ, ಮನೆಗೆ ನಡೆದುಬಿಟ್ಟು ಮುಂದೇನೂ ಕೆಲಸವಾಗದಿದ್ದರೆ ಪ್ರಯೋಜನವೇನು ? ಚಿಂತನಶೀಲರಾದ ಕೆಲವರೇ ಆದರೂ ಸೇರಿ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಚರ್ಚಿಸಿ, ವ್ಯವಸ್ಥಿತ ಯೋಜನೆ ಹಾಕಿ, ಕ್ರಿಯಾತ್ಮಕವಾಗಿ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕು. ಪ್ರತಿ ರಾಷ್ಟ್ರೀಯ ಬಸವ ದಳದಿಂದ ಕನಿಷ್ಟ ಇಬ್ಬರು, ಬಸವ ಧರ್ಮ ಸಂಸತ್ ಸದಸ್ಯರು ಸುಮಾರು 150 ಜನ, ಉಳಿದವರೆಲ್ಲ ಸೇರಿ ಒಂದೇ ಸಾವಿರ ಜನರಾದರೂ ಸಾಕು, ಪರಸ್ಪರ ಚಿಂತನೆ ಮಾಡಬೇಕು. ಇಂಥ ಮಧ್ಯಂತರ ಸಮ್ಮೇಳನಕ್ಕೆ ಬೇಸಿಗೆ ರಜವೇ ಸೂಕ್ತ ಸಮಯ. ಶರಣ ಮೇಳದಲ್ಲಿ ಸ್ಥಳ-ಸಮಯ ಬಹಿರಂಗಪಡಿಸಲು ಸಾಧ್ಯವಿರುತ್ತದಾದರೂ, ಬರುವ ವರ್ಷದ ಸಮ್ಮೇಳನದ ವಿವರವನ್ನು ಈಗಿನ ಸಮ್ಮೇಳನದ ಸಮಾರೋಪದ ಸಭೆಯಲ್ಲೇ ಘೋಷಿಸುವುದು ಸೂಕ್ತ. ಆ ದೃಷ್ಟಿಯಿಂದ 1994 ರ ಮೇ ತಿಂಗಳಲ್ಲಿ ಮಾಡ ಬಹುದಾದ ಸಮ್ಮೇಳನದ ಪ್ರಾಯೋಜಕತೆಯ ಬಗ್ಗೆ ತಮ್ಮ ತಮ್ಮ ರಾಷ್ಟ್ರೀಯ ಬಸವ ದಳಗಳ ಸಭೆ ಕರೆದು ಶರಣ ಬಂಧುಗಳು ನಿರ್ಧರಿಸಿಕೊಂಡು ಬಂದರೆ ಬಹಳ ಉತ್ತಮ.

ನೀಲಗಿರಿ ಸಮ್ಮೇಳನದ ಸಮಾರೋಪ ಸಮಾರಂಭ 1993 ರ ಮೇ 9 ರಂದು ಮಧ್ಯಾಹ್ನ 3-30 ರಿಂದ ಸಂಜೆ 7 ರ ತನಕ ನಡೆಯುತ್ತದೆ. ಆನಂತರ ರಾಷ್ಟ್ರೀಯ ಬಸವ ದಳದ ಪದಾಧಿಕಾರಿಗಳ ಮತ್ತು ಬಸವ ಧರ್ಮ ಸಂಸತ್ ಸದಸ್ಯರ ಸಭೆ ಕರೆಯಲಾಗುತ್ತದೆ. ಚರ್ಚಿಸುವ ವಿಷಯಗಳ ಬಗ್ಗೆ ಸೂಚನೆಗಳನ್ನೂ ಮೊದಲೇ ಕಳಿಸಬಹುದು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಗುರು – ಲಿಂಗ – ಜಂಗಮ

–ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಈ ತ್ರಿತತ್ತ್ವಗಳ *(Trinity)* ಕಲ್ಪನೆ ನಿಜಕ್ಕೂ ಬಹಳ ಸುಂದರ. ಇದನ್ನು ಸರಳ ಭಾಷೆಯಲ್ಲಿ ಸಮೀಕರಿಸಿ ಹೇಳುವುದಾದರೆ ಪ್ರವಾದಿಗಳು–ದೇವರು (ಅಥವಾ ಧರ್ಮ)–ಸಮಾಜ ಎಂದು ವಿವರಿಸಬಹುದು. ಒಬ್ಬ ವ್ಯಕ್ತಿಯು ಧರ್ಮಾನುಯಾಯಿಯಾಗಬೇಕಾದರೆ, ಅಥವಾ ಅದರಲ್ಲಿ ಹುಟ್ಟಿದರೂ ಅದರಲ್ಲಿಯೇ ಉಳಿಯಬೇಕಾದರೆ ಈ ಮೂರು ತತ್ತ್ವಗಳು ವಹಿಸುವ ಪಾತ್ರ ದೊಡ್ಡದು.

ಬುದ್ಧ – ಧರ್ಮ – ಸಂಘ.
ಏಸು – ದೇವರು – ಪವಿತ್ರಾತ್ಮರ ಸಂಘ.
ಬಸವಣ್ಣ – ಲಿಂಗ – ಜಂಗಮ.

ಮಡಿವಾಳ ಮಾಚಿದೇವರು ವಿವರಿಸುವಂತೆ ಮೊದಲು ಬಸವನೆಂಬ ಬಳ್ಳಿಯ ಆಕರ್ಷಣೆ, ನಂತರ ಲಿಂಗದ ದ್ರಾಕ್ಷಿಗೊಂಚಲು, ಕಲ್ಯಾಣಕ್ಕೆ ಬಸವಣ್ಣನವರ ಬಳಿ ಹೋಗೋಣ ಎನ್ನುತ್ತಲೇ ಸಿದ್ಧರಾಮೇಶ್ವರರು ಅತ್ಯಂತ ಹರ್ಷಿತರಾಗಿ, "ಉಳಿದುದು ಏನೇ ಇರಲಿ. ಬಸವಣ್ಣನವರ ಬಳಿ ಕರೆದೊಯ್ಯುತ್ತೇನೆ ಎನ್ನುವಿರಲ್ಲ ಮೊದಲು ಬರುವೆ" ಎನ್ನುವರು. ಬೌದ್ಧ ಧರ್ಮಕ್ಕೆ ಆಕರ್ಷಿತರಾಗುವವರು ಮೊದಲು ಬುದ್ಧನ ವ್ಯಕ್ತಿತ್ವಕ್ಕೆ ಮಾರು ಹೋಗುವರು. ಹಾಗೆಯೇ ಕ್ರೈಸ್ತ ಧರ್ಮ-ಏಸು, ಇಸ್ಲಾಂ-ಮೊಹಮ್ಮದ್ ಅವರ ಸಂಬಂಧ.

ಇಂದು ಲಿಂಗಾಯತ ಧರ್ಮವನ್ನೇ ತೆಗೆದುಕೊಂಡರೂ ಇದಕ್ಕೆ ಆಕರ್ಷಿತರಾಗುವವರು ಮೊದಲು ಗುರು ಬಸವಣ್ಣನವರ ವ್ಯಕ್ತಿತ್ವ ಮತ್ತು ತತ್ತ್ವಕ್ಕೆ ಮಾರುಹೋಗುವವರೆ ಮತ್ತು ಲಿಂಗಾಯತ ಸಮಾಜವು ಎಂಥ ದುಃಸ್ಥಿತಿಯಲ್ಲಿ ಇದೆ ಎಂದು ಮರ ಮರ ಮರುಗಿದರೂ, ಇದು ಜೀವಂತವಾಗಿದ್ದು ಉಸಿರಾಡಲು ಬಸವಣ್ಣನವರ ವ್ಯಕ್ತಿತ್ವ ಮತ್ತು ಸಂದೇಶಗಳೇ ಕಾರಣ.

ಗುರು ಬಸವಣ್ಣನವರ ನಿಲುವಿಗೆ ಮಾರು ಹೋಗಿ ಈ ಧರ್ಮವನ್ನು ಪ್ರವೇಶಿಸಿದವರಿಗೆ ಎರಡನೆಯ ಆಕರ್ಷಣೆ ಇಷ್ಟಲಿಂಗ. ನಿರಾಕಾರನೂ ನಿರವಯವನೂ ಆದ ಪರಮಾತ್ಮನನ್ನು ಪಶು ಪಕ್ಷಿ ಪ್ರಾಣಿ ಮನುಷ್ಯರ ಆಕಾರದಲ್ಲಿ ಪೂಜಿಸಬಾರದು ಎಂದು ವಿಶ್ವದಾಕಾರದಲ್ಲಿ ಪೂಜಿಸಲು ಹೇಳಿ, ಫಳಫಳನೆ ಹೊಳೆಯುವ ಕಪ್ಪು ಕಂಥೆಯ ಹೊದ್ದಿಕೆ ಹೊಂದಿದ, ಗುರು ಬಸವಣ್ಣನವರ ಶ್ರೇಷ್ಠ ಕೊಡುಗೆಯಾದ ಇಷ್ಟಲಿಂಗ ಪ್ರಾಂಜಲ ಮನಸ್ಸಿನ ಮುಮುಕ್ಷುಗಳನ್ನು ತೀವ್ರವಾಗಿ ಆಕರ್ಷಿಸುವುದು.

ಧರ್ಮದ ಬೇರು ಇರುವುದು ಸಮಾಜದಲ್ಲಿ. ಸಮಾಜದ ಪಾಲಕ-ಪೋಷಕ ಜಂಗಮ. ಜಂಗಮ ಪದಕ್ಕೆ ಒಂಭತ್ತು ಅರ್ಥಗಳು ಇರುವುವಾದರೂ ಇಲ್ಲಿ ಎರಡು ಅರ್ಥಗಳ ಹಿನ್ನೆಲೆಯಲ್ಲಿ ಪದವನ್ನು ಬಳಸುವೆ. ಧರ್ಮದ 3 ನೆಯ ಆಕರ್ಷಣೆ ಜಂಗಮ ಅಂದರೆ ಗಣ ಸಂಕುಲ-ಸಮಾಜ. ಧರ್ಮ ಸ್ಥಾಪಕರ ವ್ಯಕ್ತಿತ್ವ ಮತ್ತು ಧರ್ಮದ ತತ್ತ್ವ-ಇವುಗಳಿಗೆ ಮಾರು ಹೋಗಿ ಒಬ್ಬ ವ್ಯಕ್ತಿಯು ಬಂದರೂ ಜಂಗಮವು-ಅಂದರೆ ಸಮಾಜವು ವ್ಯಕ್ತಿಯನ್ನು ಆದರಿಸಿ ಇಂಬಿಟ್ಟುಕೊಳ್ಳದಿದ್ದರೆ ವ್ಯಕ್ತಿಗೆ ಅಪಾರ ದುಃಖವಾಗುವುದು; ಅಭದ್ರತೆಯ ಭಾವನೆ ಮೂಡುವುದು, ಅನಾಥ ಭಾವನೆ ಉಂಟಾಗುವುದು.

ಜಂಗಮ ಎಂದರೆ ತ್ಯಾಗಿಗಳು-ಧರ್ಮಪ್ರಚಾರಕರು. ಧರ್ಮ ರಕ್ಷಣೆಯಲ್ಲಿ ಇವರ ಪಾತ್ರ ಬಲು ದೊಡ್ಡದು. "ದೇವರು ವರ ಕೊಟ್ಟರೂ ಪೂಜಾರಿ ವರ ಕೊಡ" ಎಂಬಂತೆ ಧರ್ಮಗುರು ಬಸವಣ್ಣನವರು ಎಲ್ಲರಿಗೂ ಸಮಾನ ಹಕ್ಕು ಕೊಟ್ಟು, ದೀಕ್ಷೆಯ ಹೆಬ್ಬಾಗಿಲನ್ನು ಎಲ್ಲರಿಗೂ ತೆರೆದಿದ್ದರೂ, ಇವರು ಆತಂಕಕಾರಿಗಳಾಗಿ ಬಿಟ್ಟರೆ ಧರ್ಮದತ್ತ ಜನ ಆಕರ್ಷಿತರಾಗರು. ಇವರ ತ್ಯಾಗ, ನಡೆ-ನುಡಿ, ಜನರನ್ನು ಆದರಿಸುವ ಬಗೆ, ತತ್ತ್ವವನ್ನು ಬೋಧಿಸುವ ಕಳಕಳಿ ಬಹಳ ಮುಖ್ಯ. ಜಂಗಮನು ಧರ್ಮಗುರು ಬಸವಣ್ಣನ ಪ್ರತಿನಿಧಿಯೂ ಅಹುದು, ದೈವೀಕಾರ್ಯ ನಿರ್ವಾಹಕನೂ ಅಹುದು. ಅದಕ್ಕಾಗಿಯೇ ಇವನನ್ನು ನಡೆಲಿಂಗ ಭವರೋಗ ವೈದ್ಯ ಮುಂತಾಗಿ ಕೊಂಡಾಡಲಾಗಿದೆ.

ದೇವರಲ್ಲಿ ಶ್ರದ್ಧೆ, ಧರ್ಮಗುರುವಿನಲ್ಲಿ ನಿಷ್ಠೆ, ಸಮಾಜದ ಬಗ್ಗೆ ಕಳಕಳಿ ಇರುವ 'ಜಂಗಮ' ರಿಂದ ಬಹಳ ಅಪರೂಪದ ಕಾರ್ಯ ನಡೆಯುತ್ತವೆ. ವಚನ ಶಾಸ್ತ್ರದಲ್ಲಿ ಬರುವ ಜಂಗಮ ಸಮಾಜದ ಅಂತಃ ಸಾಕ್ಷಿ, ನ್ಯಾಯಾಧೀಶ, ಅನಾಥರಕ್ಷಕ, ತ್ಯಾಗಿ, ನಿಷ್ಪಕ್ಷಪಾತಿ. ಕ್ರೈಸ್ತ ಪಾದ್ರಿಗಳು ಕಳಕಳಿಯಿಂದ (Missionary Zeal) ದುಡಿದು, ಏಸುವಿನ ಸಂದೇಶವನ್ನು ಪ್ರಚಾರ ಮಾಡಿದ ಬಗೆ ನೋಡಿ ಆಶ್ಚರ್ಯವಾಗುತ್ತದೆ. ನರ ಭಕ್ಷಕರು ಇದ್ದಂತಹ ದೇಶಗಳಿಗೆ ಹೋದರು; ಆಫ್ರಿಕಾದಲ್ಲಿ ಭಯಂಕರವಾದ ರಾಕ್ಷಸಿ ನೊಣಗಳಿಂದ ಕಡಿಸಿಕೊಂಡು ಅಸು ನೀಗಿದರು. ಆದರೂ ಅವರ ಶ್ರದ್ಧೆ ಕುಂದಲಿಲ್ಲ. ಇಂದು ಲಿಂಗವಂತ ಸಮಾಜದಲ್ಲಿ ಜಂಗಮರೆಂದು ಜಾತಿ ಆಧಾರದ ಮೇಲೆ ಶ್ರೇಷ್ಠರೆಂದು ಬೀಗುವವರನ್ನು ಕಂಡಾಗ ವಿಪರೀತ ದುಃಖವಾಗುತ್ತದೆ. ದೇವರಲ್ಲಿ ಶ್ರದ್ಧೆ ಇಲ್ಲ; ಹಲವಾರು ದೇವತೆಗಳನ್ನು ಪೂಜಿಸುವರು; ಧರ್ಮಗುರುವಿನಲ್ಲಿ ನಿಷ್ಠೆಯಿಲ್ಲ, ತಮ್ಮ ಸ್ಥಾನಿಕ ಪಂಥಗಳನ್ನು ಬೆಳೆಸುತ್ತಿರುವರು. ಸಮಾಜದ ಬಗ್ಗೆ ಚಿಂತನೆ ಮಾಡಲು ಪುರುಷೊತ್ತೇ ಇರದು, ಮಂಡಿ-ಹುಂಡಿ ಮಾಡುತ್ತ ಕಾಲ ಕಳೆಯುವರು ಅವರಿಗಷ್ಟು ವೇದಿಕೆ-ಮನ್ನಣೆ ಸಿಕ್ಕರೆ ಸಾಕು; ಯಾವ ವೇದಿಕೆಗೆ ಬೇಕಾದರೂ ಹೋಗಿ ಅವರಂತೆ ಡೋಲು ಬಾರಿಸುವರು. ಬಾಡಿಗೆ ಬಾಯಿಗಳಾಗಿ, ಎಲ್ಲಿ ಹೋದರೂ ಅವರಂತೆ ಪ್ರಿಯವಾಗಿ ನುಡಿದು

ಕೊಟ್ಟ ಕಾಣಿಕೆ ಜೋಳಿಗೆಗೆ ಇಳಿಸಿಕೊಂಡು ಬರುವರು. ಸುತ್ತಲೂ ಸಿರಿವಂತರ ಒಂದು ವಲಯವನ್ನು ಭದ್ರಕೋಟೆಯಾಗಿ ನಿರ್ಮಾಣ ಮಾಡಿಕೊಂಡು, ಮಡಿವಂತಿಕೆ ಪ್ರದರ್ಶಿಸುವ ಇವರ ಮುಂದೆ ಬಡಭಕ್ತರೂ ಕಾಣರು. ಮುಮುಕ್ಷುಗಳು ಕಾಣರು, ಧರ್ಮಕ್ಕಾಗಿ ಹಸಿದು ತಮ್ಮ ಧರ್ಮವು ಬಹಳ ಶ್ರೇಷ್ಠವೂ ಪರಿಪೂರ್ಣವೂ ಆಗಿದ್ದರೂ, ಕುರಿಗಳಂತೆ ದುಡು ದುಡು ಎಂದು ಅನ್ಯ ಧರ್ಮ ಮತ ಪಂಥಗಳಿಗೆ ನುಗ್ಗುವ ಸ್ವಧರ್ಮಾನುಯಾಯಿಗಳೂ ಕಾಣರು. ಈಗಲಾದರೂ ಆತ್ಮ ನಿರೀಕ್ಷಣೆ ಮಾಡಿಕೊಂಡು ತಮ್ಮ ಕರ್ತವ್ಯದ ಬಗ್ಗೆ "ಜಂಗಮ"ರು ಅರ್ಥಾತ್ ಮಠಾಧಿಪತಿಗಳು, ಸ್ವಾಮಿಗಳು ಚಿಂತನೆ ಮಾಡುವುದು ಅಗತ್ಯವಿದೆ. ★

ಗುರುವಾಣಿ :

ಅರಸೀಕೆರೆ ಪ್ರವಚನ ಕಾಲದಲ್ಲಿ

ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರು ಅಪೂರ್ವ ವಾಗ್ಮಿಗಳಷ್ಟೆ ಅಲ್ಲ ಅಪ್ರತಿಮ ಚಿಂತನಕಾರರು. ನಿರರ್ಗಳವಾಗಿ ಮತ್ತು ಪೂರ್ವಸಿದ್ಧತೆಯಿಲ್ಲದೆ ಹೇಳುವ ಕೆಲವು ಮಾತುಗಳು, ಹೋಲಿಕೆಗಳು ಬಹಳ ಅದ್ಭುತವಾಗಿರುತ್ತವೆ.

ಒಂದು ದಿವಸ ಪ್ರವಚನದಲ್ಲಿ ಗುರು ಬಸವಣ್ಣನವರ ಅದ್ಭುತವಾದ ಬಹುಮುಖಿಯಾದ, ಮತ್ತು ಸರ್ವಾಂಗ ಸುಂದರವಾದ ವ್ಯಕ್ತಿತ್ವವನ್ನು ವಿವರಿಸಿ, ಪೂಜ್ಯ ಮಾತಾಜಿಯವರು ಬರೆದ ವಿಶ್ವವಿಭೂತಿ ಬಸವಣ್ಣ ಓದಲು ಹೇಳಿ, ಇಂತಹ ವ್ಯಕ್ತಿತ್ವವಿರುವ ಮತ್ತೊಬ್ಬ ಮಹಾಪುರುಷರನ್ನು ತೋರಿಸಿರಿ, ಪಟ್ಟಿ ಮಾಡಿಕೊಂಡು ಅಂಕಗಳನ್ನು ಹಾಕಿರಿ ಎಂದು ಹೇಳಿದರು.

ಒಬ್ಬರು ಸಾತ್ವಿಕ ಭಕ್ತರು, ಶ್ರೋತೃಗಳು ಬಂದು ಭೇಟಿಯಾಗಿ ಒಂದು ಸಂದೇಹ (ಆಕ್ಷೇಪ) ವ್ಯಕ್ತಪಡಿಸಿದರು: " ಪ್ರವಚನವು ಚೆನ್ನಾಗಿತ್ತು. ಆದರೆ ಹಾಗೆ ಮಹಾತ್ಮರನ್ನು ಪರಸ್ಪರ ಹೋಲಿಸಬಾರದು. ಎಲ್ಲ ಮಹಾತ್ಮರೂ ಸಮಾನರೆ ಎಲ್ಲರನ್ನೂ ಗೌರವಿಸಬೇಕು" ಎಂದರು. ಆಗ ಪೂಜ್ಯ ಗುರೂಜಿ ಹೇಳಿದರು, "ಅಹುದು, ಎಲ್ಲ ಮಹಾತ್ಮರೂ ಗೌರವಾರ್ಹರೆ. ಆದರೆ ಅವರವರ ವೈಶಿಷ್ಟ್ಯ ಪೂರ್ಣ ಸಾಧನೆಯನ್ನು ನಾವು ಗುರುತಿಸಬೇಕು. ಎಲ್ಲ ವಿದ್ಯಾರ್ಥಿಗಳು ಸಮಾನರೇ ಎಂದು ಪಾಸಾದವರನ್ನೆಲ್ಲ ಸಮಾನವಾಗಿ ಕಂಡರೂ ಮೊದಲ ರ್‍ಯಾಂಕ್ ಬಂದವರಿಗೆ ಚಿನ್ನದ ಪದಕ ಕೊಡುವುದಿಲ್ಲವೇ ? ಜಗತ್ತಿನಲ್ಲಿ ಅನೇಕ ಮಹಿಳೆಯರು ಸುಂದರಿಯರಿದ್ದರೂ ವಿಶ್ವಸುಂದರಿ ಎಂದು ಆಯ್ಕೆ ಮಾಡಿ ಯಾರೋ ಒಬ್ಬಳಿಗೆ ಕಿರೀಟ ಧರಿಸುವುದಿಲ್ಲವೆ ? ಪೈಲ್ವಾನರು ಎಲ್ಲರನ್ನೂ ಜಟ್ಟಿ ಎಂದರೂ ಜಗಜಟ್ಟಿ ಎಂದು ಯಾರನ್ನೋ ಗುರುತಿಸುವುದಿಲ್ಲವೆ? ಮಲ್ಲಿಗೆ, ತಂಗಟಿ,

ಸುಗಂಧರಾಜ, ಬೋಗನ್‌ವಿಲ್ಲಾ, ಗುಲಾಬಿ ಎಲ್ಲ ಹೂವುಗಳೇ ಇದ್ದರೂ ಕೆಲವು ಹೂವುಗಳಿಗೆ ಅವುಗಳ ವಿಶೇಷತೆಗಾಗಿ ವಿಶೇಷ ಮಹತ್ವ ನೀಡುವುದಿಲ್ಲವೆ ? ಹಾಗೆಯೇ ಇದೂ ಕೂಡ, ಎಲ್ಲ ಮಹಾತ್ಮರೂ ಸಮಾನ ಗೌರವಾರ್ಹರು ಎಂದುಕೊಂಡರೂ ಅವರ ಜೀವನ-ಸಾಧನೆ-ಸಂದೇಶ-ವ್ಯಕ್ತಿತ್ವಗಳಿಂದ ವಿಶೇಷ ಮನ್ನಣೆಗೆ ಪಾತ್ರರಾಗುತ್ತಾರೆ.

ಕನಿಷ್ಟ ಅರ್ಹತೆ :

ಒಬ್ಬ ವ್ಯಕ್ತಿಯನ್ನು ಸಭೆಗೆ ಪರಿಚಯ ಮಾಡುತ್ತೀರಿ. "ಇವರು ಈ ಕಾಲೇಜಿನ ಪ್ರಿನ್ಸಿಪಾಲರು." ಎನ್ನುತ್ತೀರಿ. ಇಷ್ಟು ಅನ್ನುತ್ತಲೇ ಜನರಲ್ಲಿ ಅವರು ಕನಿಷ್ಟ ಎಂ. ಎ. ಎಂ. ಎಸ್‌ಸಿ ಆಗಿರುತ್ತಾರೆ ಎಂಬ ಭಾವ ಮೂಡುತ್ತದೆ. ಮುಂದೆ ನೀವು 'ಇವರು ಎಸ್. ಎಸ್. ಎಲ್. ಸಿ ನಪಾಸ್ ಆಗಿದ್ದಾರೆ' ಎಂದು ಬಿಟ್ಟರೆ ಆಗ ಜನ ಖೊಳ್ಳನೆ ನಕ್ಕು, ನಿಮಗೆ ಸಾಮಾನ್ಯ ಜ್ಞಾನವೂ ಇಲ್ಲ ಎಂದುಕೊಳ್ಳುತ್ತಾರೆ ಅಲ್ಲವೆ?, ಹಾಗೆಯೇ ಯಾರನ್ನಾದರೂ ಒಂದು ಧರ್ಮ ಸಂಸ್ಥಾಪಕ ಎಂದು ಕರೆಯಬೇಕಾದರೆ ಕನಿಷ್ಟ ಅರ್ಹತೆಯಾದರೂ ಇರಬೇಕು. ಮೊಟ್ಟಮೊದಲನೆಯದಾಗಿ ಆತ ಐತಿಹಾಸಿಕ ವ್ಯಕ್ತಿ ಇರಬೇಕು. ಅವನಿಗೆ ಇತಿಹಾಸ-ಜೀವನ-ವ್ಯಕ್ತಿತ್ವ ಇರಬೇಕು. ಅವನು ಏನಾದರೂ ಸಾಧನೆ ಮಾಡಿರಬೇಕು. ಸಂದೇಶ ಕೊಟ್ಟಿರಬೇಕು. ಸಾಹಿತ್ಯ ರಚಿಸಿರಬೇಕು. ಕೃತಯುಗದ ರೇಣುಕಾಚಾರ್ಯರು ಯಾವ ಕಾಲದಲ್ಲಿ ಇದ್ದರು ? ಯಾವ ಭಾಷೆಯಲ್ಲಿ ಸಾಹಿತ್ಯ ರಚಿಸಿದರು? 8 ನೇ ಶತಮಾನದ ಶಂಕರಾಚಾರ್ಯರಿಗೆ ಹೇಗೆ ಲಿಂಗಕೊಟ್ಟರು ? ಹಾಗಿದ್ದರೆ 12 ಶತಮಾನದಲ್ಲಿ ಇದ್ದ ರೇವಣಸಿದ್ಧರು ಯಾರು ? ಪ್ರವಾದಿಗಳಲ್ಲಿ ಇರಬೇಕಾದ ಕನಿಷ್ಟ ಅರ್ಹತೆ—ಐತಿಹಾಸಿಕ ವ್ಯಕ್ತಿತ್ವ-ಸಾಧನೆ ಏನಿದೆ ? ಹೀಗೆ ಪ್ರಚಾರ ಮಾಡದೆ ಅವರು ಧರ್ಮ ಸ್ಥಾಪಕರು ಎನ್ನುವುದು ಹಾಸ್ಯಾಸ್ಪದವಾಗುತ್ತದೆ.

3. ಅಭಿಮಾನ—

ಮನುಷ್ಯರಲ್ಲಿ ಹಲವು ಬಗೆಯ ಅಭಿಮಾನಗಳಿರುತ್ತವೆ. ಅದರಲ್ಲಿ ತತ್ವಾಭಿಮಾನ ಮೌಲ್ಯಾಧಾರಿತವಾಗಿರುತ್ತದೆ. ಜಾತಿಯ ಅಭಿಮಾನ ಸಂಕುಚಿತವಾಗಿರುತ್ತದೆ. ಇಂಥವನ್ನು ಹೊಂದಿರುವವರನ್ನು ಹೀಗೆ ವರ್ಗೀಕರಿಸಬಹುದು.

ತತ್ವಾಭಿಮಾನಿ—ಜಾತ್ಯಭಿಮಾನ ರಹಿತನು ಉತ್ತಮೋತ್ತಮ.

ತತ್ವಾಭಿಮಾನಿ—ಜಾತ್ಯಭಿಮಾನಿ—ಉತ್ತಮ.

ತತ್ವಾಭಿಮಾನ ವಿಲ್ಲದವನು—ಜಾತ್ಯಭಿಮಾನವಿರುವವನು—ಮಧ್ಯಮ
ತತ್ವಾಭಿಮಾನವೂ ಇಲ್ಲದವನು, ಜಾತ್ಯಭಿಮಾನವೂ ಇಲ್ಲದವನು ಅಧಮ.

ಸಂಗ್ರಹ — **ಡಿ. ಎಸ್. ವಿಜಯಕುಮಾರ್.**

ಲಿಂಗಾಯತರು ಹಿಂದುಗಳೇ ?

–ಕೂಡಲಸಂಗಮ ಉಮರಾಣಿ, ಶಿಕ್ಷಕರು, ಐಗಳಿ.

ಹಿಂದು ಎಂಬ ಶಬ್ದವನ್ನು ಅರ್ಥೈಸುವಲ್ಲಿ ಪಂಡಿತರಲ್ಲಿ ಭಿನ್ನಾಭಿಪ್ರಾಯಗಳುಂಟು. 1) ಸ್ಥಾನವಾಚಕ 2) ಸಂಸ್ಕೃತಿವಾಚಕ 3) ಜಾತಿವಾಚಕ 4) ಧರ್ಮವಾಚಕ ಎಂಬ ಈ ನಾಲ್ಕು ತೆರನಾದ ವ್ಯಾಖ್ಯೆಗಳನ್ನು ಕೊಡುತ್ತಾರೆ. ಆದರೆ ಈ ಶಬ್ದವು ನಿಜವಾಗಿಯೂ ಸ್ಥಾನವಾಚಕವಾಗಿರುವದು. ಸಿಂಧು ನದಿ ಮುಖ್ಯವಾಗಿರುವ ಭೂಪ್ರದೇಶ ಅಂತಾ ಇದರ ಸತ್ಯಾರ್ಥ. ಅಂದಾಗ ಇಲ್ಲಿ ವಾಸಿಸುವ ಇತರ ಯಾವತ್ತೂ ಜನರೊಂದಿಗೆ ಜೈನ ಬೌದ್ಧ ಸಿಖ್ಖ ಇಸಾಯಿ ಮತ್ತು ಮುಸಲ್ಮಾನರೆಲ್ಲರೂ ಹಿಂದುಗಳೇ ಆಗುತ್ತಾರೆ.

ಸಂಸ್ಕೃತಿ ಆಧಾರದ ಮೇಲೆ ವಿಚಾರಿಸಿದರೆ – ಈ ದೇಶದಲ್ಲಿ ಮೊಟ್ಟ ಮೊದಲು ನಾಗರೀಕತೆ ಪ್ರಾರಂಭವಾದದ್ದು ಸಿಂಧು ನದಿಯ ದಡದಲ್ಲಿ. ಯಾಕೆಂದರೆ ಇದು ಫಲವತ್ತಾದ ಭೂಮಿ, ವಿಪುಲವಾದ ನೀರು, ಅನುಕೂಲಕರವಾದ ಹವೆಯಿಂದಾಗಿ ಸಸ್ಯ ಸಮೃದ್ಧಿಯನ್ನು ಹೊಂದಿದ ಸಂಪದ್ಭರಿತ ನಾಡಾಗಿತ್ತು. ಕಾರಣ ಜನರು ಉಂಡುಟ್ಟು ಸುಖವಾಗಿದ್ದರು ? ಆಗ ಜನರಲ್ಲಿ ಸುಂದರ ಭಾವನೆಗಳು ಮೂಡುತ್ತ ನಾಗರೀಕತೆ ನಿರ್ಮಾಣವಾಯಿತು. ಇದುವೇ ಶೈವ ಸಂಸ್ಕೃತಿ. ಇವರು ಈ ದೇಶದ ಮೂಲ ನಾಗರೀಕರು. ಆದ್ದರಿಂದ ಕೇವಲ ಶೈವ ಹಾಗೂ ಶೈವ ಪ್ರಭೇದಗಳ ಜನರಷ್ಟೇ ಹಿಂದುಗಳು. ಉಳಿದವರೆಲ್ಲ ಹಿಂದುಗಳಲ್ಲ. ಅಲ್ಲದೆ ವೇದಗಳನ್ನು ಒಪ್ಪುವ ಆರ್ಯರೂ (ವೈಷ್ಣವರೂ) ಸಹ ನಂತರ ನಮ್ಮ ದೇಶಕ್ಕೆ ಬಂದಿರುವದರಿಂದ ಅವರೂ ಸಹ ಹಿಂದುಗಳಲ್ಲ.

ಜಾತಿವಾಚಕವೆಂದು ವಿಚಾರಿಸಿದರೆ – ಅರ್ಥವಿಲ್ಲದ ವ್ಯರ್ಥ ಆಚರಣೆಯಿಂದ ಕೂಡಿದ, ಮತ್ತು ಮಾನವ ತನ್ನ ಸ್ವಾರ್ಥಕ್ಕಾಗಿ ಒಂದೇ ಜನಾಂಗವನ್ನು ಒಡೆದು ನುಚ್ಚುನೂರು ಮಾಡಿದ ಅಸಂಖ್ಯಾತ ಗುಂಪುಗಳು ಕಂಡು ಬರುತ್ತವೆ. ಇವುಗಳಿಗೆ ಜನ ಜಾತಿ ಎಂದು ಕರೆಯುತ್ತಾರೆ. ಈ ಜಾತಿಗಳಲ್ಲಿ ಶೈವರೂ ಇದ್ದಾರೆ ವೈಷ್ಣವರೂ ಇದ್ದಾರೆ. ಇವರಲ್ಲಿ ಸತ್ತ ಬಳಿಕ ಸೇರುವ ಸ್ವರ್ಗದ ಕಲ್ಪನೆ ಇದೆ. ಅರ್ಥಂಬರ್ಥ ಸತ್ಯವಾದ ವೇದ, ಶಾಸ್ತ್ರ, ಆಗಮ, ಪುರಾಣ ಮುಂತಾದ ಕಾಲ್ಪನಿಕ ಕಾದಂಬರಿಗಳನ್ನು ಒಪ್ಪುತ್ತಾರೆ. ಪೌರಾಣಿಕ ದೇವತೆಗಳನ್ನೂ, ಅಸಹ್ಯವಾದ ವಿಗ್ರಹಗಳನ್ನೂ, ಮನಬಂದ ಪ್ರಾಣಿಗಳನ್ನೂ, ಪೂಜಿಸುತ್ತಾರೆ. ಕೆಲವರು ಸಸ್ಯಾಹಾರಿಗಳಾದರೆ, ಕೆಲವರು ಮಾಂಸಾಹಾರಿಗಳು. ಕೆಲವರು ಹಿಂಸಾವಾದಿಗಳಾದರೆ ಕೆಲವರು ಅಹಿಂಸಾವಾದಿಗಳು. ಅಂತ್ಯ-

ಕ್ರಿಯೆಯಲ್ಲಿ ಕೆಲವರು ದಹನ ಮಾಡಿದರೆ ಕೆಲವರು ದಫನ ಮಾಡುತ್ತಾರೆ. ದಾಂಪತ್ಯ ಜೀವನ ಲೈಂಗಿಕ ವಿಚಾರದಲ್ಲಿಯೂ ಸಹ ಅಷ್ಟೇ ವಿಪರ್ಯಾಸ ಇರುತ್ತದೆ. ಮಾನವ ಕುಲಕ್ಕೆ ಕಲಂಕ ತರುವ ಅಸ್ಪೃಶ್ಯತೆ ಎದ್ದು ತೋರುತ್ತದೆ. ಕಂದಾಚಾರ, ಮೂಢಾಚಾರ, ಅನಾಚಾರ, ಢಂಬಾಚಾರ ಹೀಗೆ ಅನೇಕ ಅರ್ಥವಿಲ್ಲದ ಆಚಾರಗಳು ಮನೆ ಮಾಡಿದ್ದು, ಸತ್ತ ಸಂಪ್ರದಾಯ ಮತ್ತು ವಿಕೃತ ಸಂಪ್ರದಾಯಗಳ ತಿರುಗಣೆಯ ಮಡುವಿನಲ್ಲಿ ಬಿದ್ದು ಒದ್ದಾಡುವ ಇವರಲ್ಲಿ ವೈಚಾರಿಕತೆ ಮತ್ತು ವೈಜ್ಞಾನಿಕತೆ ಹಾಗೂ ವಿಶಾಲತೆಯ ಅಭಾವವುಂಟು. ಇಷ್ಟೆಲ್ಲ ವೈಷಮ್ಯ ಮತ್ತು ವೈಚಿತ್ರ್ಯಗಳಿಂದ ಕೂಡಿದ್ದರೂ ಕೇವಲ ಓಂಕಾರ ಮಂತ್ರದಿಂದ ಬಂಧಿಸಿದ ಮಾತ್ರಕ್ಕೆ ಲಿಂಗಾಯತರು ಈ ಹಿಂದು ಸಾಮ್ರಾಜ್ಯವನ್ನು ಸೇರಿದರೆ ಇವರಿಗೆ ಕವಡೆಯ ಕಿಮ್ಮತ್ತು ಇಲ್ಲ. ಧಾರ್ಮಿಕವಾಗಿಯೂ, ಸಾಮಾಜಿಕವಾಗಿಯೂ, ಆಧ್ಯಾತ್ಮಿಕವಾಗಿಯೂ ಯಾವ ಬೆಲೆಯೂ ಇಲ್ಲ, ಲಾಭವೂ ಇಲ್ಲ. ಕಾಲಿಗೆ ಪೆಟ್ಟಾದಾಗ ತಲೆಗೆ ಪಟ್ಟಿ ಕಟ್ಟಿದರಂತೆ ಅನ್ನುವ ಹಾಗೆ ಒಬ್ಬರು ಮಾಡಿದ ತಪ್ಪಿಗೆ ಎಲ್ಲರೂ ಹೊಣೆಗಾರರಾಗಬೇಕಾಗುತ್ತದೆ. ಬಸವ ಧರ್ಮ ಈ ಮೇಲ್ಕಾಣಿಸಿದ ಎಲ್ಲ ವಿಷಯಗಳಲ್ಲಿ ಬಹಳ ಭಿನ್ನವಿದೆ. ತ್ರಿಕಾಲಕ್ಕೂ ಸತ್ಯವಾದ ನಿತ್ಯ ನೂತನ ತತ್ತ್ವಗಳಿಂದ ಕೂಡಿದ ಲಿಂಗಾಯತ ಧರ್ಮವು—ಇಡೀ ವಿಶ್ವದಲ್ಲಿಯೇ ಶ್ರೇಷ್ಠ ಸಿದ್ಧಾಂತಗಳನ್ನು ಹೊಂದಿ, ಸಕಲ ಜೀವಾತ್ಮರಿಗೆ ಲೇಸನೆ ಬಯಸಿ ಇದು ವಿಶ್ವಧರ್ಮವಾಗಿದೆ. ಬಸವ ಧರ್ಮಕ್ಕೂ ಹಿಂದು ಸಾಮ್ರಾಜ್ಯಕ್ಕೂ ಯಾವ ಸಂಬಂಧವಿಲ್ಲ. ಆದಕ್ಕಾಗಿ ಲಿಂಗಾಯತರು ಹಿಂದುಗಳಲ್ಲ.

ಕೊನೆಯದಾಗಿ ಧರ್ಮದ ಮೇಲಿಂದ ವಿಚಾರಿಸಿದರೆ – ಹಿಂದು ಎಂಬುದು ಧರ್ಮವಲ್ಲ; ಅದೊಂದು ಜಾತಿ-ಜಾತಿಗಳ ಸಂತೆ. ಆದರೆ ಲಿಂಗಾಯತವು ಜಗತ್ತಿನಲ್ಲಿಯೇ ಶ್ರೇಷ್ಠವಾದ ವಿಶ್ವಮಾನ್ಯ ಧರ್ಮ. ಜಾತಿಗೂ ಧರ್ಮಕ್ಕೂ ಅಜಗಜಾಂತರವಿದೆ. ಮಣ್ಣಿನಿಂದ ಮಾಡಿದ ಮಡಿಕೆ ಮರಳಿ ಮಣ್ಣಾಗುವದಿಲ್ಲ. ಆದಕ್ಕಾಗಿ ಜಾತಿಯ ಭೀತಿಯನ್ನು ಹೊಡೆದೋಡಿಸಿ ನೀತಿಯ (ಧರ್ಮದ) ಜ್ಯೋತಿಯನ್ನು ಹಿಡಿದ ಲಿಂಗಾಯತರು ಹಿಂದುಗಳಲ್ಲ. ವಿಶ್ವ ಬಂಧುಗಳು ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ.

॥ ಶಿವಂ ॥

ಶ್ರೀ ಕೂಡಲಸಂಗಮ. ಉಮರಾಣಿ, ಮಾಸ್ತರ
ಬಸವ ಧರ್ಮ ಸಂಸತ್ ಸದಸ್ಯರು
ಐಗಳಿ. [ತಾ. ಅಥಣಿ, ಜಿ. ಬೆಳಗಾಂವ]

ಪ್ರಧಾನ ಕಾರ್ಯದರ್ಶಿ
ರಾಷ್ಟ್ರೀಯ ಬಸವ ದಳ, ಐಗಳಿ
ತಾ. ಅಥಣಿ, ಜಿ. ಬೆಳಗಾವಿ

(16 ನೇ ಪುಟದಿಂದ ಮುಂದುವರಿದಿದೆ)

ವಿರಿರುವರು. ಆದರೂ ಜಾತಿ ಪ್ರಜ್ಞೆಯಲ್ಲಿ ನಿಸ್ಸೀಮತೆ ಪ್ರದರ್ಶಿಸುತ್ತಾರೆ.

2. ಇನ್ನು ಕೆಲವರು ಧರ್ಮವಂತರು, ಸದಾಚಾರ ಸಂಪನ್ನರು ಇದ್ದರೂ ಮೂಢ ನಂಬಿಕೆ, ಜಾತೀಯತೆ, ಬಹುದೇವತೋಪಾಸನೆಗೆ ಅಂಟಿಕೊಂಡವರು. ಇವರಿಗೆ ಧರ್ಮನಿಷ್ಠೆ ಎಂಬುದಿಲ್ಲ.
3. ಮತ್ತೆ ಕೆಲವರು ಧರ್ಮವಂತರಿದ್ದರೂ, ತಾವು ಶ್ರೇಷ್ಠರೆಂದು ಇನ್ನಿತರ ಕೆಲವು ಉಪಪಂಗಡದಿಂದ ಬಂದವರನ್ನು ಕನಿಷ್ಟರೆಂದು ಭಾವಿಸಿ ವಿಂಗಡಿಸುತ್ತಾರೆ. ಮತ್ತು ಬೇರೆ ಯಾರಾದರೂ ಹೊಸದಾಗಿ ಈ ಧರ್ಮವನ್ನು ಸ್ವೀಕರಿಸುತ್ತೇವೆ ಎಂದರೆ ಅದನ್ನು ಇಷ್ಟಪಡುವುದಿಲ್ಲ.
4. ಕೇವಲ ಕೆಲವರು ಮಾತ್ರ ಬಸವ ಧರ್ಮವನ್ನು ಸರಿಯಾಗಿ ತಿಳಿದು, ಧರ್ಮ-ಗುರುವಿನ ಕಳಕಳಿಯನ್ನು ಅರಿತು ಎಲ್ಲರನ್ನು ಸ್ವಾಗತಿಸುತ್ತಾರೆ. ತಾವು ಧರ್ಮವಂತರು, ತತ್ತ್ವನಿಷ್ಠರೂ ಆಗಿ ಇತರರನ್ನು ಸಮಭಾವದಿಂದ ಕಾಣುತ್ತಾರೆ.

ಈ ಮನೋಭಾವ ಬಂದವರನ್ನು ಸ್ವಾಗತಿಸುವ, ಪ್ರೀತಿಸುವ, ಸಂಸ್ಕಾರ ನೀಡುವ ಔದಾರ್ಯ ನಮಗೆ ಬರಬೇಕು.

ಯಾವುದೋ ಪುಣ್ಯದಿಂದ ನಾವು ಒಂದು ಧರ್ಮಾನುಯಾಯಿಗಳಾಗಿದ್ದೇವೆ. ಈ ಧರ್ಮಾನುಯಾಯಿಯಾಗಲು ಇಲ್ಲಿಯೇ ಹುಟ್ಟಬೇಕೆಂದೇನು ಇಲ್ಲ;ಅದನ್ನು ಆಯಾತ ಮಾಡಿಕೋಬಹುದು. ನಾವು ನಿನ್ನೆ ಶರಣ ರಾಜು ಅವರ ಮನೆಯಲ್ಲಿದ್ದಾಗ ಜನರ ಒಂದು ಗುಂಪು ದರ್ಶನಕ್ಕೆ ಬಂದಿತು. ಯಾರೋ ಭಕ್ತರು ಇಟ್ಟುಹೋಗಿದ್ದ ಹಣ್ಣಿನಲ್ಲಿ ಒಂದು ಬಾಳೇಹಣ್ಣು ಉಳಿದಿತ್ತು. ಅದನ್ನು ಒಬ್ಬರಿಗೆ ಕೊಟ್ಟೆ. ಉಳಿದವರಿಗೆಲ್ಲ ಕಲ್ಲು ಸಕ್ಕರೆ ಹರಳು ಕೊಟ್ಟೆ. ಆದರೆ ಆ ಬಾಳೇಹಣ್ಣು ಪಡೆದವರು ಆ ಹಣ್ಣನ್ನು ಚೂರು ಮಾಡಿ ಅಲ್ಲಿದ್ದ ಎಲ್ಲರಿಗೂ ಹಂಚಿ,ತಿಂದರು. ಹಾಗೆಯೇ ಬಸವ ಪ್ರಸಾದವಾಗಿ ನಮಗೆ ಲಿಂಗಾಯತ ಧರ್ಮ ಪ್ರಾಪ್ತಿಯಾಗಿದೆ. ಈ ಪ್ರಸಾದಫಲವನ್ನು ಇನ್ನಿತರರೊಡನೆ ಏಕೆ ಹಂಚಿಕೊಂಡು ತಿನ್ನಬಾರದು ? ವಿಶ್ವಗುರು ಬಸವಣ್ಣನವರು ಹೊಸಧರ್ಮವನ್ನು ಕೊಟ್ಟ ಉದ್ದೇಶವಾದರೂ ಅದೇ ಆಗಿತ್ತು. ಧರ್ಮವನ್ನು ಎಲ್ಲರಿಗೂ ಕೊಡಬೇಕು; ಅದೂ ಮಾನವನ ಒಂದು ಹಕ್ಕು.

ನಮ್ಮದು ವಿಶ್ವಧರ್ಮ ಎಂದು ವೇದಿಕೆಯ ಮೇಲೆ ಕೇವಲ ಭಾಷಣ ಮಾಡಲಿಕ್ಕಲ್ಲ ಇದು ಇರುವುದು. ಕೃತಿಯಲ್ಲೂ ವೈಶಾಲ್ಯತೆ ಬರಬೇಕು. ಬಸವ ಧರ್ಮ ವಿಶ್ವಧರ್ಮ ಅಹುದು.

1. ಯಾವ ತತ್ತ್ವವು ಅಂದು ಇಂದು ಮುಂದು ಎಲ್ಲ ಕಾಲದಲ್ಲೂ, ಅಲ್ಲಿ ಇಲ್ಲಿ ಎಲ್ಲ ಕಡೆಗೆ, ಅವರಿಗೆ ಇವರಿಗೆ ಎಲ್ಲರಿಗೆ ಅನ್ವಯವಾಗುವದೋ ಅದು ವಿಶ್ವಧರ್ಮ. ಬಸವ ಧರ್ಮವು ಇಂಥ ಸಾರ್ವಕಾಲಿಕ ಸತ್ಯವನ್ನು ಬೋಧೆ ಮಾಡುತ್ತದೆ.

2. ಎಲ್ಲರನ್ನೂ ಇಂಬಿಟ್ಟುಕೊಳ್ಳುವುದು ವಿಶ್ವಧರ್ಮ. ಬಸವ ಧರ್ಮವು ಎಲ್ಲರನ್ನೂ ಇಂಬಿಟ್ಟುಕೊಳ್ಳುವ ಹೃದಯ ವೈಶಾಲ್ಯ ಹೊಂದಿದೆ.

3. ಬಸವ ಧರ್ಮ ನಿಜವಾದ ವಿಶ್ವಧರ್ಮ. ಏಕೆಂದರೆ ವಿಶ್ವದಾಕಾರದಲ್ಲಿ ವಿಶ್ವಾತ್ಮನನ್ನು ಪೂಜಿಸಲು, ಹೇಳುತ್ತದೆ.

4. ವಿಶ್ವಕುಟುಂಬತ್ವವನ್ನು ಹೇಳುವ ಕಾರಣ, ಬಸವ ಧರ್ಮವು ವಿಶ್ವಧರ್ಮ. ಹೆತ್ತ ತಾಯಿತಂದೆಯರನ್ನು ಗೌರವಿಸಿ, ಅಣ್ಣ ತಮ್ಮಂದಿರನ್ನು ಪ್ರೀತಿಸುವವನು ಗೃಹ ಕುಟುಂಬಿ, ರಾಷ್ಟ್ರವನ್ನು ತನ್ನ ತಾಯಿ ಎಂದು ಗೌರವಿಸಿ, ರಾಷ್ಟ್ರದ ಎಲ್ಲ ಪ್ರಜೆಗಳನ್ನು ತನ್ನ ಸಹೋದರರೆಂದು ಪ್ರೀತಿಸುವವನು ರಾಷ್ಟ್ರಕುಟುಂಬಿ. ದೇವರನ್ನೇ ತನ್ನ ತಾಯಿತಂದೆ ಎಂದು ಗೌರವಿಸಿ, ಎಲ್ಲ ಮಾನವರನ್ನು ಸೋದರ ಭಾವನೆಯಿಂದ ಕಂಡು,ಸಕಲ ಜೀವರ ಲೇಸು ಬಯಸುವವನೇ ವಿಶ್ವಕುಟುಂಬಿ.

ಇಂಥ ವಿಶ್ವಕುಟುಂಬತ್ವವನ್ನು ಬೋಧಿಸುವ ಬಸವ ಧರ್ಮವನ್ನು ಸಂಕುಚಿತಗೊಳಿಸುವ ಅಪರಾಧ ಮಾಡುವುದು ಬೇಡ." ಎಂದು ಪೂಜ್ಯ ಮಾತಾಜಿಯವರು ಕರೆ ನೀಡಿದರು. ಶರಣು ಸಮರ್ಪಣೆ–ಮಂಗಲದೊಡನೆ ಉದ್ಘಾಟನಾ ಸಮಾವೇಶ ಮುಕ್ತಾಯವಾಯಿತು. (ಮುಂದುವರಿಯುವುದು.)

ಜುಲೈ ಸಂಚಿಕೆ ಬೇಗನೆ ಸಿದ್ಧಪಡಿಸಲಾಗುವುದು.

ನೀಲಗಿರಿ ಸಮ್ಮೇಳನದ ವಿಶೇಷತೆ

★ ಇಂಥ ಒಂದು ಸಾಮೂಹಿಕ ಬೃಹತ್ ಕಾರ್ಯಕ್ರಮ ನೀಲಗಿರಿ ಜಿಲ್ಲೆಗೇ ಹೊಸ ಸುದ್ದಿಯಾಗಿತ್ತು. ಬೃಹತ್ತಾದ ಪೆಂಡಾಲ್ ಹಾಕುತ್ತಿದ್ದರೆ ಲಿಂಗವಂತರು, ಇನ್ನಿತರರು ಇಷ್ಟು ಜನ ಸೇರುವುದುಂಟೆ ? ಈ ಹುಡುಗರು ಸುಮ್ಮನೇ ಕಷ್ಟಪಡುತ್ತಾರೆ ಎನ್ನುತ್ತಿದ್ದವರು. ಭಾನುವಾರ ದಿ 9 ರಂದು ಪೆಂಡಾಲ್ ತುಂಬಿ, ಜಾಗ ಸಾಕಾಗದೆ ಜನರು ಹೊರಗೂ ನಿಂತಾಗ ಮೂಗಿನ ಮೇಲೆ ಬೆರಳಿಟ್ಟರು. ಹೊರಗಿನಿಂದ ಹೋದವರಿಗೆ ಮತ್ತು ಅಲ್ಲಿಯವರಿಗೆ ಉಭಯತರಿಗೂ ಆಶ್ಚರ್ಯವಾಗಿತ್ತು.

★ ಕರ್ನಾಟಕದ ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರನ್ನು (ಭೃತ್ಯಾಚಾರ ದಳದವರನ್ನು) ಕಳಿಸೋಣವೇ ಎಂದಾಗ ಅಲ್ಲಿಯವರು ಅಗತ್ಯವಿಲ್ಲ ಎಂದರು. ಹೇಗೆ ನಿಭಾಯಿಸುವರೋ ಎಂದು ಎಲ್ಲರೂ ಆಶ್ಚರ್ಯದಿಂದ ನೋಡುತ್ತಿದ್ದರು. ಒಂದು ಹಟ್ಟಿ (Camp)ಯಿಂದ ಕಡ್ಡಾಯವಾಗಿ 10 ಶರಣರು ಬರಬೇಕೆಂದು ಘೋಷಿಸಿದಾಗ 15 ಹಳ್ಳಿಗಳಿಂದ 150 ಜನ ಹತ್ತಾರು ದಿನ ಮೊದಲೇ ಬಂದು ಕಾರ್ಯಪ್ರವೃತ್ತರಾಗಿದ್ದರು.

★ ಬಸವ ಧರ್ಮಪೀಠದ ಆದೇಶ ಮನ್ನಿಸಿ ಕೆಲವು ಶರಣರು ಕರ್ನಾಟಕದಿಂದ ಸ್ವಯಂ ಪ್ರೀತಿಯಿಂದ ಅಲ್ಲಿಗೆ ಹೋಗಿ ಮೊದಲೇ ಸೇವಾನಿರತರಾಗಿದ್ದರು. ಬೀದರಿನ ಅಡಿವೆಪ್ಪ ತಂಬಾಕೆ, ತುಮಕೂರಿನ ಕಲಾ ಶಿಕ್ಷಕ ಶಿವಣ್ಣ, ಬೆಂಗಳೂರಿನ ಶ್ರೀಕಂಠ ಕುಮಾರ್ ದಂಪತಿಗಳು, ಭದ್ರಾವತಿಯ ಹೆಚ್. ಎಸ್. ಬಸವರಾಜು, ಶಿವಮೊಗ್ಗಾದ ವಿಜಯಕುಮಾರ್ ಮುಂತಾದವರು ಶರಣ ಬಂಧುಗಳಿಗೆ ಹೆಗಲುಕೊಟ್ಟಿದ್ದರು. ನಿಜಗುಣಾನಂದ ಸ್ವಾಮಿಯವರು ಹಗಲಿರುಳು ವ್ಯಾನ್ ತೆಗೆದುಕೊಂಡು ಸುತ್ತಲೂ ಸಂಚರಿಸಿ, ಜನರನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರವಹಿಸಿ, ಎಲ್ಲರ ಪ್ರಶಂಸೆಗೆ ಪಾತ್ರರಾದರು.

★ ಟೀ ತೋಟಗಳಲ್ಲಿ ಕಾಯಕ ಮಾಡುವ ಮಹಿಳೆಯರು ತಮ್ಮ ಗುಡ್ಡಗಾಡು ವೇಷದಲ್ಲಿಯೇ ಬಂದುದು, ಮೆರವಣಿಗೆಯಲ್ಲೂ ಸಾಗಿದುದು ವಿಶೇಷ ಕುತೂಹಲಕ್ಕೆ ಕಾರಣವಾಗಿತ್ತು.

★ ತಮಿಳು ನಾಡಿನ ವಿಶೇಷ ಅಡಿಗೆ ಪೊಂಗಲ್, ರಸಂ, ಶಾವಿಗೆ ಉಪ್ಪಿಟ್ಟು ಎಲ್ಲದರಲ್ಲೂ ಏಲಕ್ಕಿ ಸುವಾಸನೆ ಹೊತ್ತು ಗಮಗಮಿಸುತ್ತಿದ್ದವು.

★ ಆ ಶರಣ ಬಂಧುಗಳ ನಿಷ್ಠೆ ಎಷ್ಟೆಂದರೆ ಗುಡ್ಡಗಾಡು ಪ್ರದೇಶದಲ್ಲಿ ಹೊರಗಿನಿಂದ ಬರುವ ವಾಹನಗಳು ತಪ್ಪಿಸಿಕೊಳ್ಳಬಾರದೆಂದು ಊಟಿಯ ಮುಖ್ಯ ರಸ್ತೆಗಳಲ್ಲಿ ರಾತ್ರಿ ಇಡೀ ವ್ಯಾನಿನಲ್ಲಿ ಸಂಚರಿಸಿ ಮಾರ್ಗದರ್ಶನ ಮಾಡುತ್ತಿದ್ದರು.

★ ಭಿತ್ತಿ ಪತ್ರಗಳು ದಾರಿಯುದ್ದಕ್ಕೂ, ಕೂನೂರಿನಲ್ಲಿ ವಿಶ್ವಗುರು ಬಸವಣ್ಣನವರ ಮತ್ತು ಪೂಜ್ಯ ಮಾತಾಜಿಯವರ ಭಾವಚಿತ್ರ ಹೊತ್ತ ಕಟೌಟ್ ಮುಖ್ಯ ವೃತ್ತದಲ್ಲಿ ರಾರಾಜಿಸುತ್ತಿತ್ತು.

★ ನಮ್ಮಗಳ ವಾಹನಗಳ ಮೇಲಿನ ಷಟ್ಕೋನ ಬಸವ ಧ್ವಜ ನೋಡಿದೊಡನೆ ತಮಿಳುನಾಡಿನ ಗಡಿಯ ಚೆಕ್ ಪೋಸ್ಟಲ್ಲಿ ಕಾಟೇರಿಗಾ ? ಎಂದು ಪೋಲೀಸರು ಕೇಳಿ ಮುಂದೆ ಬಿಡುತ್ತಿದ್ದರು. ಅಂತೂ ಮರೆಯಲಾರದ ಒಂದು ಸಮ್ಮೇಳನವದು.*

ಬಸವ ಧರ್ಮೀಯರ ಹಬ್ಬ-ಹುಣ್ಣಿಮೆ-ಉತ್ಸವಗಳು

ನೂತನ ಕೃತಿಯ ಬಿಡುಗಡೆ

ಸ್ವತಂತ್ರ ಧರ್ಮದ ಹನ್ನೊಂದು ಲಕ್ಷಣಗಳಲ್ಲಿ ಸಂಸ್ಕೃತಿಯೂ ಒಂದು. ಸಂಸ್ಕೃತಿಯು ಅಭಿವ್ಯಕ್ತವಾಗುವ ಹಲವಾರು ಸಾಧನಗಳಲ್ಲಿ ಹಬ್ಬ-ಹುಣ್ಣಿಮೆ-ಉತ್ಸವಗಳು ಬಹುಮುಖ್ಯವಾದುವು. ಈ ಕುರಿತು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಹಬ್ಬಗಳ ಪಟ್ಟಿಯೊಡನೆ, ಅವುಗಳ ಹಿಂದಿರುವ ಮಹತ್ವವನ್ನೂ ವಿವರಿಸಿರುವರು. ಕ್ರೌನ್ 1/8 ಅಳತೆಯ 56 ಪುಟಗಳ ಪುಸ್ತಕದ ಬೆಲೆ 6 ರೂ. ಅಂಚೆವೆಚ್ಚ 2 ರೂ.

ಪ್ರತಿಯೊಬ್ಬರೂ ತಪ್ಪದೆ ಓದಬೇಕಾದ ಪುಸ್ತಕ ; ಬಸವ ಧರ್ಮ ಸಂಸತ್ ಸದಸ್ಯರು ಮತ್ತು ರಾಷ್ಟ್ರೀಯ ಬಸವ ದಳಗಳವರು ಕಡ್ಡಾಯವಾಗಿ ಓದಿ ಆಚರಣೆಗೆ ತರಬೇಕು. ಮತ್ತು ಏನಾದರೂ ಸಲಹೆ-ಸೂಚನೆ ಕೊಡುವುದಾದಲ್ಲಿ ಪತ್ರ ಬರೆದು ತಿಳಿಸ ಬೇಕು. ಅಕ್ಟೋಬರದಲ್ಲಿ ಬಸವ ಗಂಗೋತ್ರಿಯಲ್ಲಿ ನಡೆಯುವ ಶಿಬಿರದಲ್ಲಿ ಸಂದೇಹಗ ಳಿದ್ದಲ್ಲಿ ಚರ್ಚಿಸಬೇಕು. ಕೆಲವು ಸ್ಥಳೀಯ ಆಚರಣೆ ಕುರಿತು ಮಾಡಬೇಕೋ ಬಿಡಬೇಕೋ ಎಂಬ ಜಿಜ್ಞಾಸೆ ಇರುತ್ತದೆ. ಅಂಥ ಆಚರಣೆಗಳನ್ನು ಗಮನಕ್ಕೆ ತಂದರೆ ಆ ಬಗ್ಗೆ ಚಿಂತನೆ ಮಾಡಿ ಪೂಜ್ಯ ಮಾತಾಜಿಯವರು ಪರಿಷ್ಕೃತ ಆವೃತ್ತಿಯನ್ನು ಮುದ್ರಿಸುವರು.

ವಿಶ್ವಕಲ್ಯಾಣ ಮಿಶನ್, ಬಸವ ಮಂಟಪ, 2035, 20 ನೇ ಮೇನ್
2 ನೇ ಬ್ಲಾಕು, ರಾಜಾಜಿನಗರ, ಬೆಂಗಳೂರು-560010

ಕೆಲವು ಶರಣರಿಗೆ ಅಭಿನಂದನೆ

ಕೆಲವು ಶರಣ ಬಂಧುಗಳು ಧರ್ಮಪಿತರ ಜಯಂತಿಯ ಶುಭ ಸಂದರ್ಭದಲ್ಲಿ 25-4-93 ರ ನಿಮಿತ್ತ ವಚನಗಳನ್ನು ವಿವಿಧ ಸಂದೇಶಗಳನ್ನು ಮುದ್ರಿಸಿದ ಕಾರ್ಡ ಳನ್ನು ತಮ್ಮ ಬಂಧು-ಬಳಗ-ಮಿತ್ರರಿಗೆಲ್ಲ ಕಳಿಸಿದ್ದಾರೆ. ತಮ್ಮ ಗಳಿಕೆಯ ಒಂದು ಅಂಶವನ್ನು ಹೀಗೆ ಸಾರ್ಥಕಗೊಳಿಸುವ ಇವರನ್ನು ಅಭಿನಂದಿಸುತ್ತೇವೆ.

1. ಶರಣ. ಮುನಿನಾರಾಯಣಪ್ಪ, ವಿಜಯಪುರ, ಬೆಂಗಳೂರು ಜಿಲ್ಲೆ.
2. ಶರಣ. ಎಸ್. ಜಿ. ಬಿರಾದಾರ, ಧವಳಗಿ, ಬಿಜಾಪುರ ಜಿಲ್ಲೆ.
3. ಶರಣ. ಹೆಚ್. ಎಸ್. ಬಸವರಾಜು, ಭದ್ರಾವತಿ, ಶಿವಮೊಗ್ಗ ಜಿಲ್ಲೆ.
4. ಶರಣ. ಶಂಕರ ತಡಸ, ಗದಗ, ಧಾರವಾಡ ಜಿಲ್ಲೆ.

ವಿಶೇಷ ಸೂಚನೆಗಳು

- ಬಸವ ತತ್ತ್ವಾನುಯಾಯಿಗಳು ಅದರಲ್ಲೂ ಬಸವ ಧರ್ಮ ಸಂಸತ್ ಸದಸ್ಯರು ಮತ್ತು ರಾಷ್ಟ್ರೀಯ ಬಸವ ದಳಗಳವರು ವಿವಾಹದ ಆಹ್ವಾನ ಪತ್ರಗಳನ್ನು ಆಯ್ಕೆ ಮಾಡುವಾಗ ಅನ್ಯ ದೇವತೆಗಳ ಚಿತ್ರವಿರುವ ಆಹ್ವಾನ ಪತ್ರ ಆಯ್ಕೆ ಮಾಡಬಾರದು.
- ಷಟ್‌ಸೂತ್ರಗಳನ್ನು ಕಾರ್ಡಿನ ಹಿಂಬದಿಯಲ್ಲಿ ಸ್ಥಳವಿದ್ದರೆ ಮುದ್ರಿಸಬೇಕು; ಕೇವಲ ಒಂದು ಮುಖದ ಪ್ರಿಂಟಿಂಗ್ ಖರ್ಚು ಮಾತ್ರ ಹೆಚ್ಚು ಬರುವುದು; ಅನಾಯಾಸವಾಗಿ ತತ್ತ್ವಪ್ರಚಾರವಾಗುವುದು.

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಬಸವ ತತ್ತ್ವ ಪರೀಕ್ಷೆಗಳು-1992-ಪರಿಣಾಮಗಳು
ಬಸವ ತತ್ತ್ವ ಪ್ರವೀಣ

ಪ್ರಥಮ ವರ್ಗ
ಶರಣೆ ಭಾರತೀ ಎಂ. ಕೆಂಪಯ್ಯ (ಬೆಂಗಳೂರು ಕೇಂದ್ರ)

ಬಸವ ತತ್ತ್ವ ಪರಿಚಯ

ಪ್ರಥಮ ವರ್ಗ
ಶರಣ ನಾರಾಯಣ ತಿಪ್ಪಣ್ಣ ಯಮಕನಮರ್ಡಿ (ವಡೇರ ಹಟ್ಟಿ ಕೇಂದ್ರ)
ದ್ವಿತೀಯ ವರ್ಗ
ಶರಣ ಬಸವರಾಜ ಶಿವಪ್ಪ ಶಲವಡಿ (ಹುಬ್ಬಳ್ಳಿ ಕೇಂದ್ರ)
ತೃತೀಯ ವರ್ಗ
ಶರಣ ಬಸವರಾಜ ಶಿವಲಿಂಗಪ್ಪ ಮೇಗೇರಿ (ಹುಬ್ಬಳ್ಳಿ ಕೇಂದ್ರ)

ಬಸವ ತತ್ತ್ವ ಪ್ರವೇಶ

ದ್ವಿತೀಯ ವರ್ಗ
ಶರಣೆ ವಿಜಯಲಕ್ಷ್ಮಿ ಗುರುಸಿದ್ಧಪ್ಪ ಗುಡ್ಡದಕೇರಿ (ಹುಬ್ಬಳ್ಳಿ ಕೇಂದ್ರ)
ಶರಣೆ ವಿನುತ ಬಿ. ಎಂ. (ಬೆಂಗಳೂರು ಕೇಂದ್ರ)
ಶರಣ ನಾರಾಯಣ ತಿಪ್ಪಣ್ಣ ಯಮಕನಮರ್ಡಿ (ವಡೇರಹಟ್ಟಿ ಕೇಂದ್ರ)

ತೃತೀಯ ವರ್ಗ
ಶರಣೆ ಶ್ರೀದೇವಿ ಚಂದ್ರಶೇಖರ ಮೂಟೂರ (ಬೆಂಗಳೂರು ಕೇಂದ್ರ)
ಶರಣೆ ಜ್ಯೋತಿ ಬಿ. ಎಂ. ವಡೇರಹಟ್ಟಿ, (ಬೆಳಗಾವಿ ಕೇಂದ್ರ)

ಶರಣರಾದ
ಚಂದ್ರಶೇಖರ ಬಸಪ್ಪಾ ಮಾಮಾಗೌಡರ
ಕೇದಾರಿ ಸತ್ಯಪ್ಪಾ ಗೋಟೂರ
ಬಸವರಾಜ ಮಹಾದೇವ ಧರ್ಮಟ್ಟಿ

ನಾಗಪ್ಪ ಲಗಮಪ್ಪ ಚಿಕ್ಕೋಡಿ
ಬಸವರಾಜ ರಾಮಪ್ಪಾ ಹುಚ್ಚಣ್ಣವರ
ಸದಾಶಿವ ಭರಮಪ್ಪಾ ಬಾಗಿ
ಸಿದ್ಧರಾಮ ನಿಂಗಪ್ಪಾ ಜಿವಣೆ
ನಾರಾಯಣ ಮಾಯಪ್ಪಾ ತೋಟಗಿ

ಶೋಭಾದೇವಿ ಪರಮಾದಿ
ನಿರ್ದೇಶಕರು,
ಶ್ರೀ ಬಸವ ಭಾರತಿ ದಿವ್ಯಜ್ಞಾನ ವಿದ್ಯಾಲಯ
ಹುಬ್ಬಳ್ಳಿ.

ವಿ. ಸೂ.: 1993ನೇ ಇಸ್ವಿ ಆಗಸ್ಟ್ ತಿಂಗಳಲ್ಲಿ ಬಸವ ತತ್ತ್ವ ಪ್ರವೇಶ, ಬಸವ ತತ್ತ್ವ ಪರಿಚಯ, ಬಸವ ತತ್ತ್ವ ಪ್ರವೀಣ ಪರೀಕ್ಷೆಗಳನ್ನು ನಡೆಸಲಾಗುವುದು. ಆಸಕ್ತರು 1 ರೂ. ಅಂಚೆ ಚೀಟಿ ಇಟ್ಟು ನಿರ್ದೇಶಕರು, ಶ್ರೀ ಬಸವ ಭಾರತಿ ದಿವ್ಯಜ್ಞಾನ ವಿದ್ಯಾಲಯ, ಬಸವ ಚೈತನ್ಯ, ನಂ. 16 ಶ್ರೀ ಬಸವನಗರ, ಹುಬ್ಬಳ್ಳಿ 580024 ಇವರೊಂದಿಗೆ ವ್ಯವಹರಿಸಬೇಕು.

ಶುಭಹಾರೈಕೆಗಳು—ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಎಲ್ಲರಿಗೂ ಶುಭಹಾರೈಕೆಗಳು; ರಾಷ್ಟ್ರೀಯ ಬಸವ ದಳದವರು ಈ ಬಗ್ಗೆ ವಿಶೇಷ ಆಸ್ಥೆವಹಿಸಿ, ವಯಸ್ಸಿನ ಪರಿಮಿತಿ ಇಲ್ಲದ ಕಾರಣ, ಹೆಚ್ಚು ಜನರನ್ನು ಪರೀಕ್ಷೆಗೆ ಕೂರಿಸಬೇಕೆಂದು ಸೂಚಿಸುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷರು, ಬಸವತತ್ತ್ವಪರಿಷತ್, ಬೆಂಗಳೂರು

ಬಸವ ಪಂಚಮಿ ಆಚರಣೆ

ಧರ್ಮಪಿತ ಬಸವಣ್ಣನವರು ಮರ್ತ್ಯಲೋಕದ ಮಣಿಹ ಪೂರೈಸಿ ಪರಮಾತ್ಮನಲ್ಲಿ ಬಯಲಾದುದು ನಳನಾಮ ಸಂವತ್ಸರದ ಶ್ರಾವಣಶುದ್ಧ ಪಂಚಮಿಯಂದು. ಪ್ರತಿಯೊಬ್ಬ ಬಸವ ತತ್ತ್ವಾನುಯಾಯಿಯೂ ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಈ ಹಬ್ಬವನ್ನು ಆಚರಿಸಬೇಕು. ಅಮವಾಸ್ಯೆಯಿಂದ ದಿನಾಲೂ ಶ್ರೀ ಬಸವೇಶ್ವರ ಪೂಜಾವ್ರತವನ್ನು ಆಚರಿಸಬೇಕು. ದಿ. 23-7-93 ಶುಕ್ರವಾರದಂದು ಬಸವ ಪಂಚಮಿ ಬಂದಿದ್ದು ಅಂದು ಸಾಮೂಹಿಕವಾಗಿ ಸೇರಿ ಪೂಜಾವ್ರತ, ಸಾಮೂಹಿಕ ಪ್ರಾರ್ಥನೆ, ಪ್ರಸಾದದ ಆರೋಗಣೆಯನ್ನು ಏರ್ಪಡಿಸಬಹುದು.

ಉಪನ್ಯಾಸ ಸಭೆಯನ್ನು ಏರ್ಪಡಿಸಬಹುದು. ಬಸವ ಜಯಂತಿಗೆ ಶುಭಾಶಯ ಪತ್ರಗಳನ್ನು ಕಳಿಸಿದಂತೆ ಬಸವ ಜಯಂತಿಗೂ ನೆನಪಿನೋಲೆ-ಶುಭಾಶಯ ಪತ್ರಗಳನ್ನು ಕಳಿಸಬಹುದು.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಬಸವ ಧರ್ಮಪೀಠದ ವಿವಿಧ ಯೋಜನೆಗಳಿಗೆ ಧನ ದಾಸೋಹ ಮಾಡಿದ ಶರಣರು

ಶರಣರುಗಳಾದ :

1.	ಡಿ. ತಂಗಿಯಮ್ಮ, ಶಿರಾಳಕೊಪ್ಪ, ಶಿವಮೊಗ್ಗ ಜಿಲ್ಲೆ	50115-00
2.	ಕೆ. ವೀರಭದ್ರಪ್ಪ ಮತ್ತು ಬಿ. ಕೆ. ರಾಜಶೇಖರಪ್ಪ, ಚಳ್ಳಕೆರೆ, (ಒಂದು ರೂಂ ಗಾಗಿ)	40000-00
3.	ಖವಟಕೊಪ್ಪದ ಗ್ರಾಮಸ್ಥರು, ಬೆಳಗಾಂ ಜಿಲ್ಲೆ	26000-00
4.	ಸಿ. ಎಂ. ಚಂದ್ರಶೇಖರ್, ಹಾಸನ	10000-00
5.	ಕೆ. ಎನ್. ಗುರಪ್ಪ, ರಾಯರ ಕೊಪ್ಪಲು, ಹಾಸನ	10000-00
6.	ಸರ್ವಮಂಗಳಮ್ಮ ಮತ್ತು ಎನ್. ಸಿದ್ಧಣ, ಹಾಸನ	5000-00
7.	ಮಲ್ಲಿಕಾ ಮತ್ತು ಗಂಗರಾಜು, ಹಾಸನ	5000-00
8.	ಬಸವರಾಜ ಕಂಡಕ್ಟರ್, ಅನವಟ್ಟಿ	5000-00
9.	ಕೆ. ಎಂ. ಚಂದ್ರಶೇಖರ, ಚೆನ್ನಾಪುರ, ಹಾಸನ	1000-00
10.	ಎಂ. ಎಸ್. ಜಯಮ್ಮ ಸೋಮಶೇಖರ, ಆಲೂರು	1000-00
11.	ವಿಜಯಕುಮಾರ, ಹೈದರಾಬಾದ.	1000-00
12.	ಜಿ. ಬಿ. ಮೆಂಚ್, ಹುಬ್ಬಳ್ಳಿ	1000-00

ಜನರೇಟರ್ ಕೊಡುಗೆ

ಸುಮಾರು 17000 ರೂ ಬೆಲೆ ಬಾಳುವ ಜನರೇಟರನ್ನು ಪ್ರವಚನ ಕಾಲದಲ್ಲಿ ಉಪಯೋಗಿಸಿಕೊಳ್ಳಲು ಶ್ರೀ ವೀರಶೈವ ಸಂಘ ಆರಳೇಪೇಟೆ, ಹಾಸನ ಸಂಸ್ಥೆಯವರು ಮತ್ತು ನಿರ್ದೇಶಕ ಸದಸ್ಯರೂ ಸೇರಿ ಕೊಡಿಸಿದ್ದಾರೆ.

ಪುಸ್ತಕ ಮುದ್ರಣಕ್ಕೆ (ವಿಶ್ವಕಲ್ಯಾಣ ಮಿಷನ್ ಟ್ರಸ್ಟಿಗೆ)

1.	ಗುಪ್ತ ಕಾಣಿಕೆ	8000-00
2.	ಸಿ. ಎಂ. ಗಂಗಪ್ಪ (ಹಾಸನ)	5000-00

ದಾಸೋಹ ನಿಧಿಗೆ 1111 ರೂಗಳನ್ನು ಸಲ್ಲಿಸಿದವರು

ಕ್ರಮ ಸಂಖ್ಯೆ	ಹೆಸರು-ಊರು :	ಜಿಲ್ಲೆ
	ಶರಣರುಗಳಾದ :	
1322	ಎಸ್. ಗುರುಸ್ವಾಮಿ, ದೇವನೂರು.	ಮೈಸೂರು
1323	ದೇವಪ್ಪ ಮುರಿಗೆಪ್ಪ ಭಾಸಿಂಗಿ, ಅಥಣಿ.	ಬೆಳಗಾಂವಿ
1324	ಡಾ॥ ಬಿ. ರೇಣುಕಾ, ಅರಸೀಕೆರೆ.	ಹಾಸನ
1325	ಪಟೇಲ ಶಂಕರಗೌಡರು, ಅರಸೀಕೆರೆ.	"
1326	ಕೆ. ಸಿ. ವೀರಣ್ಣಾ, ಅರಸೀಕೆರೆ.	ಹಾಸನ
1327	ಶ್ರೀ ಕರಿಸಿದ್ದೇಶ್ವರ ಟ್ರೇಡರ್ಸ್, ಅರಸೀಕೆರೆ.	"
1328	ಇಂದಿರಾ ರೇಣುಕಾನಾಥ, ಅರಸೀಕೆರೆ.	"
1329	ಡಾ. ಎಮ್. ಸಿ. ವಿರುಪಾಕ್ಷಪ್ಪಾ ಯಶೋದಾ, ಅರಸೀಕೆರೆ.	"
1330	ಬಿ. ವಿ. ಲಲಿತಮ್ಮಾ , ಅರಸೀಕೆರೆ.	"
1331	ಎ. ಸಿ. ಸಿದ್ಧಪ್ಪಾ, ಅಗ್ಗುಂದ.	"
1332	ಕೆ. ಟಿ. ಗಂಗಾಧರಪ್ಪ. ಅರಸೀಕೆರೆ.	"
1333	ಮಲ್ಲಿಕಾರ್ಜುನಪ್ಪಾ ಕೆ. ಎನ್. ಅರಸೀಕೆರೆ.	"
1334	ಮರುಳಸಿದ್ದಪ್ಪಾ ದೊಡ್ಡಮನಿ, ಜಾಜೂರು.	"
1335	ಮಹಾಲಿಂಗಪ್ಪ ಎಚ್. ಎಮ್. ಜಾಜೂರು.	"
1336	ಡಿ. ವಿ. ಚಂದ್ರಶೇಖರ ಮತ್ತು ಸಹೋದರರು, ಅರಸೀಕೆರೆ.	"
1337	ಜಿ. ಸಿ. ಅನೀಲಕುಮಾರ ಕೆ. ಎ. ಎಸ್, ಅರಸೀಕೆರೆ.	"
1338	ಬಿ. ಎಮ್. ವಿಜಯಕುಮಾರ, ಅರಸೀಕೆರೆ.	"
1339	ಶಿವಪ್ಪ ಬಸಪ್ಪಾ ಬಣಕಾರ ಮತ್ತು ಮಕ್ಕಳು, ರಾಣೆಬೆನ್ನೂರು.	ಧಾರವಾಡ
1340	ಎಸ್. ಬಸವರಾಜು, ಟೀಚರ, ಶಿರಾಳಕೊಪ್ಪ.	ಶಿವಮೊಗ್ಗ
1341	ಸೂರಣಗಿ ಶಿವಯೋಗಪ್ಪ, ಶಿರಾಳಕೊಪ್ಪ.	"
1342	ವಿಜಯಕುಮಾರ ಸ್ವಾಮಿಗಳು ಮಲಿಮಠ, ಶಿರಾಳಕೊಪ್ಪ.	"
1343	ಬಿ. ಎಮ್. ವೀರಮ್ಮನವರು, ಶಿರಾಳಕೊಪ್ಪ.	"
1344	ರಾಮಕೃಷ್ಣ ಮತ್ತು ಕುಟುಂಬದವರು, ಶಿರಾಳಕೊಪ್ಪ.	"
1345	ಸೂರಣಗಿ, ಶಿವಾನಂದಪ್ಪನವರು, ಶಿರಾಳಕೊಪ್ಪ.	ಶಿವಮೊಗ್ಗ
1346	ಚನ್ನಮ್ಮ ಸಂಗಪ್ಪ ಕುಬುಸದ "	"

1347	ಸಂಗಪ್ಪ ಶಿವಲಿಂಗಪ್ಪಾ ರಾಜಮನಿ, ಹುನಗುಂದ.	ವಿಜಾಪೂರ
1348	ನಾಗಶೆಟ್ಟಿ ಕಾಳಗಿ (ಸುಲೇಪೇಟೆ), ಶಹಾಬಾದ.	ಕಲಬುರ್ಗಿ
1349	ಅಶೋಕ ಸೋಬಾನದ, ಧಾರವಾಡ.	ಧಾರವಾಡ
1350	ಶಾಂತಕ್ಕ ಬಕ್ಕೇಶಪ್ಪ, ದಾವಣಗೆರೆ.	ಚಿತ್ರದುರ್ಗ
1351	ಗವಿಸಿದ್ಧಪ್ಪ, ಕಕ್ಕಬೇವಿನಹಳ್ಳಿ.	ಬಳ್ಳಾರಿ
1352	ವಿ. ಗೌರಮ್ಮ , ಬಳ್ಳಾರಿ.	ಬಳ್ಳಾರಿ
1353	ಗಿರಿಜಾಂಬ ಅರಸ್, ಬ್ರಹ್ಮಸಂದ್ರ.	ತುಮಕೂರು
1354	ಕೆಂಚಮ್ಮ , ಮೈಸೂರು.	ಮೈಸೂರು
1355	ಭೋಗಾನಂಜುಂಡಯ್ಯ ಮತ್ತು ಮಕ್ಕಳು.	ಬೆಂಗಳೂರು
1356	ಶ್ರೀ ಬಸವೇಶ್ವರ ಭಜನಾ ಮಂಡಳಿ.	ಬೆಂಗಳೂರು
1357	ಎಚ್. ಎ. ಗೋವಿಂದರಾಜ,	ಹಾಸನ
1358	ಎಚ್. ಆರ್. ಬಸವರಾಜ	"
1359	ಎನ್. ಎಸ್. ಜೀತೆಂದ್ರ, ಎಲ್.ಎಲ್.ಬಿ.	"
1360	ಕುಮಾರಿ ಸುಪ್ರಿಯಾ ಕೆಂಚಪ್ಪ.	"
1361	ಆರ್. ರಂಗಸ್ವಾಮಿರಾಜ ಅರಸ್.	"
1362	ನಂಜಮ್ಮ ಸಿದ್ಧೇಶ್ವರ ರೈಸಮಿಲ್ಲ.	"
1363	ಬಿ. ಕೆ. ಶಶಿಕಲಾ (ಮಹಾದೇವಪ್ಪ)	"
1364	ಎಸ್. ಶರಣಪ್ಪ ಮತ್ತು ಮಕ್ಕಳು, ಹನಸವಾಡಿ.	ಶಿವಮೊಗ್ಗ
1365	ಎನ್. ಕೆ. ಬಸಪ್ಪ. (ಶಿಕ್ಷಕರು)	ಹಾಸನ
1366	ಶಿವನಂಜಪ್ಪ ಮತ್ತು ಸಹೋದರರು	"
1367	ಎಚ್. ಎನ್. ಚಂದ್ರಶೇಖರ	"
1368	ಎಚ್. ಎಸ್. ಮಂಜುನಾಥ	"
1369	ನಂಜುಂಡಸ್ವಾಮಿ ಕಾಂಟ್ರಾಕ್ಟರ್ಸ್	"
1370	ಎಚ್. ಎಮ್. ಸೋಮಶೇಖರ	"
1371	ವಿ. ಕೆ. ಸಿದ್ಧಪ್ಪಾ	"
1372	ಪ್ರೇಮಸ್ವರೂಪ	"
1373	ಜಿ. ಆರ್. ಸಿದ್ರಾಮಣ್ಣ	"
1374	ಟಿ. ಎಮ್. ರೂಪಾ ಇಂದ್ರಕುಮಾರ ಎಚ್. ಎಸ್.	"
1375	ಡಿ. ಎನ್. ಚಂದ್ರಶೇಖರ,	ಹಾಸನ
1376	ಆರ್. ರಾಜಗೋಪಾಲ ಶೆಟ್ಟಿ.	"

1377 ಹೆಚ್. ಆರ್. ವೆಂಕಟಾಚಲಪತಿ. ಹಾಸನ
1378 ಆರ್. ಜನಾರ್ಧನ. ಎಸ್. ಆರ್. ಎಸ್. ಜ್ಯೂವೆಲ್ಲರ್ಸ್. "
1379 ಹೆಚ್. ವಿ. ಸೋಮಶೇಖರಶೆಟ್ಟಿ, ಕೆ. ಎಸ್. ಆರ್. ಟಿ. ಸಿ. "
1380 ಎಸ್. ಗುರುಮೂರ್ತಿ. "
1381 ಕೆ. ವಿ. ಪುಷ್ಪಲತಾ ಬಿ. ಶಿವಕುಮಾರ್. "
1382 ಚಂದ್ರಾವತಮ್ಮ, ತಲ್ಲೂರ. ಶಿವಮೊಗ್ಗ
1383 ಡಿ. ಶಿವಾನಂದಪ್ಪ. ಗಿರಿಜಮ್ಮ, ಸಮನವಳ್ಳಿ. "
1384 ಇಂದುಮತಿ. ಡಿ. ಲೋಕಪ್ಪ. ಶಿವಮೊಗ್ಗ
1385 ಜಯಮ್ಮ ಜಂಬುಲಿಂಗಪ್ಪಾ, ಅನವಟ್ಟಿ. "
1386 ವೀರಪ್ಪಗೌಡ ಮತ್ತು ಸಹೋದರರು, ತತ್ತೂರ. ಶಿವಮೊಗ್ಗ
1387 ಪುಷ್ಪಲತಾ ಜಿ. ಎಂ.. ಚನ್ನಬಸಪ್ಪ, ಹಾಸನ. ಶಿವಮೊಗ್ಗ

(ಮುಂದುವರಿಯುವುದು)

ಇನ್ನಿತರ ಯಾದಿಗಳನ್ನು (ಧರ್ಮಗ್ರಂಥ ನಿಧಿ – ಧರ್ಮ ಪ್ರಚಾರಕ ನಿಧಿ) ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಈ ಎಲ್ಲ ಶರಣಬಂಧುಗಳಿಗೆ ಜಗತ್ಕರ್ತನಾದ ಪರಮಾತ್ಮನು ಧರ್ಮಕರ್ತರಾದ ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪದ ನೀಡಲೆಂದು ಹಾರೈಸುತ್ತೇವೆ.

–ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕೂಡಲ ಸಂಗಮ.

ಕೆ. ಎಸ್. ಭಗವಾನ್‌ರ ಪತ್ರ

ಮಾನ್ಯರೆ,

ಶಂಕರಾಚಾರ್ಯನ ಬಗ್ಗೆ ನಿಜಲಿಂಗಪ್ಪನವರು ಹೇಳಿದರೆನ್ನಲಾದ ಮಾತುಗಳ ಬಗ್ಗೆ ಪರ ಮತ್ತು ವಿರೋಧದ ಪತ್ರಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಇದು ಶಂಕರನ ಸಮರ್ಥನೆ ಅಥವಾ ನಿಂದನೆ ಎಂಬಂತೆ ಸಾಮಾನ್ಯ ಓದುಗರಿಗೆ ಕಾಣಬಹುದು. ಹಾಗಾಗದಂತೆ ಪತ್ರಿಕೆಗಳು ಸಾಮಾಜಿಕ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸುವುದು ವಿಹಿತವಾಗಿದೆ.

ನಿಜವಾದ ಸಂಗತಿ ಏನು ? ಶಂಕರನ ಕೃತಿಗಳಲ್ಲಿರುವ ಆಂತರಿಕ ಆಧಾರ ವೇನು ? ಚಾರಿತ್ರಿಕ ಅಥವಾ ಪುರಾಶೋಧಶಾಸ್ತ್ರೀಯ ಆಧಾರವೇನು ?

ಶಂಕರನ ಮಹತ್ವದ ಕೃತಿಯೆಂದು ಕೊಂಡಾಡುವ 'ಬ್ರಹ್ಮಸೂತ್ರಭಾಷ್ಯ' ದಲ್ಲಿ ಅವನ ವ್ಯಾಖ್ಯೆ ಹೀಗಿದೆ ; (ಅಧ್ಯಾಯ ೧, ಪಾದ ೩, ಅಧಿಕರಣ ೯, ಸೂತ್ರ ೩೮):

"....ನ ಶೂದ್ರಸ್ಯ ಅಧಿಕಾರ ಃ।....ವೇದ ಶ್ರವಣ ಪ್ರತಿಷೇಧ ಃ ವೇಧಾಧ್ಯಯನ ಪ್ರತಿಷೇಧ : ....'ಅಥಾಸ್ಯ ವೇದ ಮುಪಶೃಣ್ವತಃ । ತ್ರಪುಜತುಭ್ಯಾಂ ಶ್ರೋತ್ರ ಪ್ರತಿಪೂರಣಂ' (ಗೌತಮ ಧರ್ಮ ಸೂತ್ರ ೨, ೩, ೪,) 'ಪದ್ಯು ಹವಾ ಏತತ್ ಸ್ಮಶಾನಂ ಯತ್ ಶೂದ್ರಃ ತಸ್ಮಾತ್ ಶೂದ್ರ ಸಮೀಪೇ ನಾಧ್ಯೇತವ್ಯಂ' (ಆಪಸ್ತಂಬ ಧರ್ಮ ಸೂತ್ರ ೧, ೩, ೯, ೯,).... ವೇದೋಚ್ಚಾರಣೇ ಜಿಹ್ವಾಚ್ಛೇದೋ ಧಾರಣೇ ಶರೀರ-ಭೇದಃ' (ಗೌ. ಧ. ೨,೩,೪,).... 'ನ ಶೂದ್ರಾಯ ಮತಿಂ ದದ್ಯಾತ್' (ಮನುಸ್ಮೃತಿ ೪,೮೦.) ಇದರ ಕನ್ನಡ ಅನುವಾದ ಹೀಗಿದೆ :

"ಶೂದ್ರನಿಗೆ ಅಧಿಕಾರವಿಲ್ಲ.... ಆತ ವೇದಶ್ರವಣ, ವೇದಾಧ್ಯಯನ ಮಾಡಕೂಡದು.... ಹಾಗೇನಾದರೂ ಮಾಡಿದರೆ ಅವನ ಕಿವಿಗಳಿಗೆ ಕರಗಿಸಿದ ಸೀಸ ಮತ್ತು ಅರಗುಗಳನ್ನು ತುಂಬಬೇಕು.... ಶೂದ್ರನೆಂದರೆ ಸಂಚರಿಸುವ ಸ್ಮಶಾನ; ಅವನ ಬಳಿಯಲ್ಲಿ ಅಧ್ಯಯನ ಮಾಡಬಾರದು.... ಶೂದ್ರ ಓದಿದರೆ ಅವನ ನಾಲಿಗೆ ಕತ್ತರಿಸಬೇಕು; ಕಂಠಪಾಠ ಮಾಡಿಕೊಂಡಿದ್ದರೆ ಆ ದೇಹವನ್ನೆ ಕತ್ತರಿಸಿಹಾಕಬೇಕು.... ಶೂದ್ರನಿಗೆ ವಿದ್ಯಾಬುದ್ಧಿ ಕೊಡಬಾರದು...."

ಇದು ಏನನ್ನು ತೋರಿಸುತ್ತದೆ ? ಶಂಕರನಿಗೆ ಮಾನವೀಯತೆ ಇದೆಯೆ ? ಅವನು ಸುಧಾಕರನೆ ? ಅವನು ಚಾತುರ್ವರ್ಣದ ಜಾತಿಪದ್ಧತಿಯನ್ನು ಬಿಗಿಗೊಳಿಸಿದ. ನೂರಕ್ಕೆ ೮೫ ರಿಂದ ೯೦ ಇರುವ ಶೂದ್ರರನ್ನು ಅಂದರೆ ಬ್ರಾಹ್ಮಣೇತರರನ್ನು ತುಳಿದು ಬಿಟ್ಟ. ಅದಕ್ಕಾಗಿ ಮಠಗಳನ್ನು ಸ್ಥಾಪಿಸಿದ.

ಇದಲ್ಲದೆ ಜನಸಾಮಾನ್ಯರ ನೋವಿಗೆ ಮಿಡಿದು ಅವರನ್ನು ಮೇಲಕ್ಕೆತ್ತುತ್ತಿದ್ದ ಬೌದ್ಧಧರ್ಮವನ್ನು ನಾಶಪಡಿಸಿದ್ದಕ್ಕೆ ಪುರಾಶೋಧನೀಯ ಆಧಾರವಿದೆ:

"........Local tradition relates that the great Hindu Philosopher and teacher Shankaracharya of medieval times came to Nagarjunakonda with a host ot followers and destroyed the Buddhist monuments ....the ruthless manner in which all the buildings at Nagarjunakonda have been destroyed is simply appalling ....so many of the pillars, statues and sculptures have been wantonly smashed to pieces........"

(Buddhist Antiquities of Nagarjunakonda, by Long–hurst p. 6; 1938)

"ಮಧ್ಯಯುಗದ ಮಹಾ ಹಿಂದೂ ತತ್ತ್ವಜ್ಞಾನಿ ಗುರು ಶಂಕರಾಚಾರ್ಯ ತನ್ನ ಹಿಂಬಾಲಕರ ಹಿಂಡಿನೊಡನೆ ಬಂದು ಬೌದ್ಧ ಸ್ಮಾರಕಗಳನ್ನು ನಾಶಪಡಿಸಿದನೆಂದು ಸ್ಥಳೀಯ ಐತಿಹ್ಯ ಹೇಳುತ್ತದೆ... ನಾಗಾರ್ಜುನಕೊಂಡದಲ್ಲಿ ಎಲ್ಲಾ ಕಟ್ಟಡಗಳೂ ಕ್ರೂರ ರೀತಿಯಲ್ಲಿ ಧ್ವಂಸವಾಗಿರುವುದನ್ನು ನೋಡಿದರೆ ಎದೆ ನಡುಗುತ್ತದೆ....ಬಹು ಪಾಲು ಸ್ತಂಭಗಳು ವಿಗ್ರಹಗಳು ಮತ್ತು ಶಿಲ್ಪಗಳನ್ನು ಮನಸೇಚ್ಛೆ ಒಡೆದು ಚೂರು ಚೂರು ಮಾಡಿದ್ದಾರೆ...."

ಈ ದಾಖಲೆಗಳು ತಮಗೆ ತಾವೇ ಸ್ಪಷ್ಟವಾಗಿವೆ. ಇಂಥ ದಾಖಲೆಗಳಿದ್ದೂ ಶಂಕರಾಚಾರ್ಯನನ್ನು ಹೊಗಳುವುದು ಸಮರ್ಥಿಸುವುದು ಅರ್ಥಹೀನವಾಗುತ್ತದೆ. ವಿವೇಕಿಗಳು ಮಾತ್ರ ಸತ್ಯಪ್ರೇಮಿಗಳು.

[ವಿ. ಸೂ. ಹೆಚ್ಚಿನ ವಿವರಗಳಿಗೆ ನನ್ನ ಕೃತಿ 'ಶಂಕರಾಚಾರ್ಯ ಮತ್ತು ಪ್ರತಿಗಾಮಿತನ' ಏಳನೇ ಮುದ್ರಣ 1991 ನೋಡಿ. ಈ ಕೃತಿ ಇಂಗ್ಲೀಷ್, ತಮಿಳು, ಉರ್ದು, ಒರಿಯಾ, ತೆಲುಗು, ಹಿಂದಿ, ಮಲೆಯಾಳಂ ಭಾಷೆಗಳಿಗೆ ಅನುವಾದವಾಗಿದೆ.]

ಪ್ರೊ॥ ಕೆ. ಎಸ್. ಭಗವಾನ್
ಮುಖ್ಯಸ್ಥ, ಇಂಗ್ಲಿಷ್ ವಿಭಾಗ
ಯುವರಾಜ ಕಾಲೇಜು, ಮೈಸೂರು-570005

ಬಸವ (ಲಿಂಗಾಯತ) ಧರ್ಮದ ಆರು ಸೂತ್ರಗಳು

1. ಧರ್ಮ ಗುರು - ಮಂತ್ರಪುರುಷ ಬಸವಣ್ಣನವರು
2. ಧರ್ಮ ಸಂಹಿತೆ - ಸಮಾನತೆ ಸಾರುವ ವಚನ ಸಾಹಿತ್ಯ.
3. ಧರ್ಮ ಲಾಂಛನ - ವಿಶ್ವದಾಕಾರದಲ್ಲಿರುವ ವಿಶ್ವಾತ್ಮನ ಕುರುಹಾದ ಇಷ್ಟಲಿಂಗ.
4. ಧರ್ಮ ಕ್ಷೇತ್ರ - ಗುರು ಬಸವಣ್ಣನವರ ಐಕ್ಯಕ್ಷೇತ್ರ ಕೂಡಲ ಸಂಗಮ.
5. ಧರ್ಮ ಧ್ವಜ - ಬಸವ ಮಂತ್ರಸಹಿತ ಷಟ್ಕೋನ ಧ್ವಜ.
6. ಧರ್ಮದ ಧ್ಯೇಯ - ಜಾತಿವರ್ಣವರ್ಗರಹಿತ, ಧರ್ಮ ಸಹಿತ ಕಲ್ಯಾಣ ರಾಜ್ಯ ನಿರ್ಮಾಣ.

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

ಬಸವ ಗಂಗೋತ್ರಿ ನಗರ ಯೋಜನೆ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ.

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ "ಕಲ್ಯಾಣ ನಗರ" ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ.

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ "ಬಸವ ಗಂಗೋತ್ರಿ"ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೆರಿಯ ಆರೋವಿಲ್ಲೆ ತರಹ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಶರಣ ಬಂಧುಗಳು, ಬಸವ ತತ್ತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, 12 ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ತ್ವನಿಷ್ಠ, ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

1. "ಬಸವ ಗಂಗೋತ್ರಿ ನಗರ" ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳ-ನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

   ವರ್ಗ 'ಎ'-40'×60'-ವಿಸ್ತೀರ್ಣ 2400 ಚ. ಅಡಿಗಳು.

   ವರ್ಗ 'ಬಿ'-30'×40'-ವಿಸ್ತೀರ್ಣ 1200 ಚ. ಅಡಿಗಳು.

   ನಿವೇಶನಗಳಲ್ಲಿ ಬೆಳೆದ ತೆಂಗಿನ ಮರಗಳು ಬರುವಂತೆ ಯೋಜಿಸಲಾಗುವುದರಿಂದ ಅಳತೆಯು ಹೆಚ್ಚುಗೆಯೂ ಆಗಬಹುದು.

ಭೂಮಿಯ ಆಕಾರಕ್ಕನುಗುಣವಾಗಿ ನಿವೇಶನಗಳು ಇನ್ನೂ ಕಡಿಮೆ ಅಳತೆಯುಳ್ಳವುಗಳೂ ಆಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

2. ಅಭಿವೃದ್ಧಿ ಪಡಿಸಿದ ಸ್ಥಿತಿಯಲ್ಲಿರುವ ನಿವೇಶನಗಳನ್ನು ವಿತರಿಸಲಾಗುವುದು.

3. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ 1000-00 (ಒಂದು ಸಾವಿರ) ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

4. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವಕಲ್ಯಾಣ ಮಿಷನ್, ಬೆಂಗಳೂರು" ಹೆಸರಿಗೆ 100-00 (ಒಂದು ನೂರು) ರೂಗಳನ್ನು ಎಂ. ಓ. ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ :
ಸೋದರಿ ಕಸ್ತೂರಿ, ವಿಶ್ವಕಲ್ಯಾಣ ಮಿಷನ್,
ಬಸವ ಗಂಗೋತ್ರಿ ನಗರ, ಕುಂಬಳಗೋಡು–560074
ಬೆಂಗಳೂರು ದಕ್ಷಿಣ ತಾಲ್ಲೋಕು, ಬೆಂಗಳೂರು ಜಿಲ್ಲೆ.

ಚಂದಾದಾರರ ಗಮನಕ್ಕೆ

ಕಲ್ಯಾಣ ಕಿರಣ ಅಂಚೆಯಲ್ಲಿ ಬರುತ್ತಿದ್ದಂತೆಯೇ ಚಂದಾ ಸಂಖ್ಯೆ ಬರೆದಿಟ್ಟುಕೊಳ್ಳಿರಿ. ಪತ್ರ ವ್ಯವಹಾರ ಮಾಡುವಾಗ ತಪ್ಪದೆ ಚಂದಾ ಸಂಖ್ಯೆ ಬರೆಯಿರಿ. ಶೀಘ್ರ ಉತ್ತರಕ್ಕೆ ಕೆಳಗಿನ ವಿಳಾಸದೊಂದಿಗೆ ವ್ಯವಹರಿಸಿರಿ.

ಕಲ್ಯಾಣ ಕಿರಣ ಮಾಸ ಪತ್ರಿಕೆ
ಬಸವ ಗಂಗೋತ್ರಿ
ಕುಂಬಳಗೋಡು-560074
ಮೈಸೂರು ರಸ್ತೆ,
ಬೆಂಗಳೂರು ದಕ್ಷಿಣ - ತಾ.
ದೂರವಾಣಿ : 437234

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಬಸವ ಕ್ರಾಂತಿ ದಿನದ ಅಂಗವಾಗಿ

ಶರಣ ಮೇಳ

1994 ನೆಯ ಜನವರಿ 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಮಂತ್ರಪುರುಷ, ವಿಶ್ವವಿಭೂತಿ ಬಸವಣ್ಣನವರ ತತ್ತ್ವಗಳಲ್ಲಿ, ಶ್ರದ್ಧೆ-ವಿಶ್ವಾಸವಿರುವ ಬಸವ ಭಕ್ತರು, ಬಸವ ತತ್ತ್ವಾಭಿಮಾನಿಗಳು, ಬಸವ ಧರ್ಮೀಯರು, ಲಿಂಗವಂತರು ಎಲ್ಲರೂ ವರ್ಷಕ್ಕೊಮ್ಮೆಯಾದರೂ ಒಂದು ಸ್ಥಾನದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಪರಸ್ಪರರಲ್ಲಿ ಸಮಾನತ್ವ, ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಲಿಂಗೈಕ್ಯ ಕ್ಷೇತ್ರ ಕೂಡಲಸಂಗಮದಲ್ಲಿ 1988ನೆಯ ಇಸವಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವು ಜರುಗಿತಷ್ಟೇ. ಮೊಟ್ಟ ಮೊದಲನೆಯ ಈ ಐತಿಹಾಸಿಕ ಬೃಹತ್ ಮೇಳವು ಮೂರುವರೆ ಲಕ್ಷಕ್ಕೂ ಮಿಕ್ಕಿದ ಜನಸಮೂಹವನ್ನು ಆಕರ್ಷಿಸಿತು. ತುಂಬಿನಿಂತ ಬಸವ ಸಾಗರದ ಅಲೆಗಳೊಡನೆ ಸ್ಪರ್ಧಿಸುವಂತೆ ಜನಸಾಗರದ ಸಮೂಹವು ಸಮಾವೇಶವಾಗಿ ಬಸವೋದ್ಯಾನದಲ್ಲಿ ನಿರ್ಮಿತವಾದ ಬಸವ ಮಂಟಪದಲ್ಲಿ ಸಮುದಾಯ ಪ್ರಾರ್ಥನೆಯನ್ನು ಮಾಡಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವಕ್ರಾಂತಿ ದಿನ(ಮಕರ ಸಂಕ್ರಾಂತಿ)ದ ಅಂಗವಾಗಿ ನಡೆಯಲಿದ್ದು ಏಳನೆಯ ಶರಣ ಮೇಳವು 1994ನೇ ಇಸವಿಯ ಜನವರಿ 12, 13, 14 ಮತ್ತು 15ರಂದು ಏರ್ಪಾಟಾಗಲಿದೆ. ಹಲವಾರು ಪ್ರಮುಖ ಮಠಾಧೀಶರು, ಪ್ರವಚನಕಾರರು, ಗಣ್ಯರು, ಸಾಹಿತಿಗಳು ಭಾಗವಹಿಸಿ ಉಪನ್ಯಾಸ ಮಾಡುವರು. ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ ಧರ್ಮ ಕ್ಷೇತ್ರವಾದಂತೆ, ಸಿಖ್ಖರಿಗೆ ಅಮೃತಸರವು ಪವಿತ್ರ ಕ್ಷೇತ್ರವಾದಂತೆ, ಬಸವ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲಸಂಗಮವೇ ಧರ್ಮಕ್ಷೇತ್ರ. ಇಂತಹ ಪವಿತ್ರ ತಾಣದಲ್ಲಿ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರವೆಮಗೆ ಪ್ರಾಣಜೀವಾಳ

ಬೆಂಗಳೂರು ವಿಳಾಸ:	**ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ**
ಬಸವ ಮಂಟಪ, 2035.	ಕಾರ್ಯಾಧ್ಯಕ್ಷೆ. ಶರಣ ಮೇಳ ಉತ್ಸವ ಸಮಿತಿ
2ನೇ ಬ್ಲಾಕ್, ಕಾರ್ಡ್ ರಸ್ತೆ,	ಕೂಡಲಸಂಗಮ – 587115.
ರಾಜಾಜಿನಗರ, ಬೆಂಗಳೂರು–560010	ತಾ-ಹುನಗುಂದ, ಜಿಲ್ಲೆ-ಬಿಜಾಪುರ
ದೂರವಾಣಿ : 325335	ದೂರವಾಣಿ : 38

'ಬಸವ ಕಿರಣ'
ಪಾಕ್ಷಿಕ ಪತ್ರಿಕೆಗೆ ಚಂದಾದಾರರಾಗಿರಿ.

ಶಿವಮೊಗ್ಗ ರಾಷ್ಟ್ರೀಯ ಬಸವ ದಳದ ಶರಣ ಡಿ. ಎಸ್. ವಿಜಯಕುಮಾರ್ ಸಂಪಾದಕತ್ವದಲ್ಲಿ ಹೊರಡುತ್ತಿರುವ 'ಬಸವ ಕಿರಣ' ಪಾಕ್ಷಿಕ ಪತ್ರಿಕೆಯು ರಾಷ್ಟ್ರೀಯ ಬಸವ ದಳಗಳ ಕಾರ್ಯಕ್ರಮದ ವಿವರಗಳನ್ನು ಹೊತ್ತು ಬರುತ್ತದೆ. ಕಲ್ಯಾಣ ಕಿರಣವು ಲೇಖನಗಳಿಗೆ ಹೆಚ್ಚಿನ ಸ್ಥಾನ ನೀಡುವುದರಿಂದ ರಾಷ್ಟ್ರೀಯ ಬಸವ ದಳಗಳ ಸುದ್ದಿ ವಿವರಗಳನ್ನು ಕೊಡಲು ಅದಕ್ಕೆ ಸಾಧ್ಯವಾಗದು. ಈ ಕೊರತೆ ತುಂಬಲೋಸುಗ ಹುಟ್ಟಿರುವ "ಬಸವ-ಕಿರಣ"ಕ್ಕೆ ಕಲ್ಯಾಣ ಕಿರಣದ ಓದುಗರು ಚಂದಾದಾರರಾಗಬೇಕು.

ವಾರ್ಷಿಕ ಚಂದಾ : 25 ರೂ.   ಆಜೀವ ಸದಸ್ಯತ್ವ : 250 ರೂ.

ವಿಳಾಸ : **ಶರಣ ಡಿ. ಎಸ್. ವಿಜಯಕುಮಾರ್**, ಸಂಪಾದಕರು
ಬಸವ ಕಿರಣ ಕಾರ್ಯಾಲಯ, ಬಸವ ಸಾಗರ ಪ್ರಿಂಟರ್ಸ್
ಉಷಾದೇವಿ ಕಾಂಪ್ಲೆಕ್ಸ್, ಪಾರ್ಕ್ ಬಡಾವಣೆ
ದುರ್ಗಿ ಗುಡಿ, 4 ನೇ ತಿರುವು
ಶಿವಮೊಗ್ಗ - 577201.

ಬಸವ ಸಂದೇಶ

- ದೇವನೊಬ್ಬನೆ ತಂದೆ ಮಾನುಜರೆಲ್ಲರೂ ಒಂದೇ.
- ಮರ್ತ್ಯಲೋಕವೆಂಬುದಿದು ಕರ್ತಾರನ ಕಮ್ಮಟ.
- ಇಲ್ಲಿ ಸಲ್ಲುವವರು ಅಲ್ಲಿ ಸಲ್ಲುವರು.
- ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು.
- ಕುಲತನ ಇರುವುದು ಜಾತಿಯಲ್ಲಲ್ಲ ; ಗುಣ ನಡತೆಗಳಲ್ಲಿ.
- ಗುರುತ್ವ ದೊರೆಯುವುದು ಆಚಾರ-ಅರಿವು-ಅನುಭಾವಗಳಿಂದ.

ಕಲ್ಯಾಣ ಕಿರಣದ ಓದುಗರ ಗಮನಕ್ಕೆ

1. ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರ ಪ್ರವಚನವು ಅಥಣಿಯಲ್ಲಿ ನಡೆದ ಕಾಲಕ್ಕೆ ಕಲ್ಯಾಣಕಿರಣಕ್ಕೆ ಚಂದಾದಾರರಾದವರ ವಿಳಾಸಗಳು ಕಾರ್ಯಾಲಯಕ್ಕೆ ತಲ್ಪಿಲ್ಲ. ಪ್ರವಚನದ ನಂತರ ಪೂಜ್ಯರು ಸಂಗಮದಿಂದ ಬೆಂಗಳೂರಿಗೆ ಬಸ್ಸಿನಲ್ಲಿ ಕಳಿಸಿದ ಪಾರ್ಸೆಲ್ (ಇಡಲ್ಪಟ್ಟ ರಸೀತಿ ಪುಸ್ತಕಗಳ ಸಹಿತವಾಗಿ) ಕಳೆದು ಹೋದುದರಿಂದ ಹಲವಾರು ಚಂದಾದಾರರಿಗೆ ಪತ್ರಿಕೆ ಕಳಿಸಲು ಆಗಿಲ್ಲ. ನದಿ ಇಂಗಳಗಾಂವದ ಸದ್ಭಕ್ತರೂ ಸಹ ಆಗಲೇ ಸದಸ್ಯರಾಗಿದ್ದರು. ಕೆಲವರು ಪತ್ರ ಬರೆದು ರಸೀತಿ ಸಂಖ್ಯೆ ತಿಳಿಸಿದರು. ಅವರಿಗೆ ಕಳಿಸಲಾಗುತ್ತಿದೆ. ಆದ್ದರಿಂದ ಅಥಣಿ ಪ್ರವಚನ ಕಾಲಕ್ಕೆ ಆದ ಚಂದಾದಾರರು ದಯವಿಟ್ಟು ರಸೀತಿಯ ಒಂದು ಜೆರಾಕ್ಸ್ ಪ್ರತಿಯೊಡನೆ ತಮ್ಮ ವಿವರವಾದ ವಿಳಾಸ ತಿಳಿಸಬೇಕು. ಆಗಿರುವ ಪ್ರಮಾದಕ್ಕಾಗಿ ವಿಷಾದಿಸುತ್ತೇವೆ.
2. ಹಲವಾರು ಅನಾನುಕೂಲತೆಗಳು ಮತ್ತು ಪೂಜ್ಯ ಮಾತಾಜಿಯವರ ಸುದೀರ್ಘ ಪ್ರವಾಸದಿಂದಾಗಿ (25-4-1993 ರಿಂದ 20-5-93 ರ ವರೆಗೆ) ಕಲ್ಯಾಣ ಕಿರಣ ಹೊರಬಂದಿಲ್ಲ.
   1) ಜನವರಿ ಸಂಚಿಕೆ—ಶರಣ ಮೇಳದ ಆಹ್ವಾನ—ಕವರ್ ಪುಟಕ್ಕೆ ಶ್ರೀ ಬಸವೇಶ್ವರ ಐಕ್ಯಮಂಟಪ ಬಂದಿದೆ.
   2) ಫೆಬ್ರುವರಿ—ಮಾರ್ಚ್ ಸಂಚಿಕೆ—ಕೆಂಪು ಹಳದಿ ವರ್ಣದ ಹಿನ್ನೆಲೆಯಲ್ಲಿ ಬಸವಣ್ಣನವರ ರೇಖಾಚಿತ್ರ
   3) ಬಸವ—ಕಿರಣ, 12-4-1993 ರ ಸಂಚಿಕೆ
   4) ಜೂನ್ ಸಂಚಿಕೆ.

   ಇವುಗಳಲ್ಲಿ ಯಾವಾದರೂ ತಲ್ಪಿರದಿದ್ದರೆ ಪತ್ರ ಬರೆಯಿರಿ. ಕಳಿಸಲಾಗುವುದು. ಇನ್ನು ಮುಂದೆ ನಿಯಮಿತವಾಗಿ ಪ್ರಕಟಿಸುವ ಭರವಸೆ ನೀಡಿ ಈ ಅನಿಯಮಿತ-ತನಕ್ಕಾಗಿ ವಿಷಾದಿಸುತ್ತೇವೆ.
3. ಏಪ್ರಿಲ್ ತಿಂಗಳಲ್ಲಿ ಕಲ್ಯಾಣ ಕಿರಣವನ್ನು ಓದುಗರ ಕೈಗಿಡಬೇಕು. ಊಟಿಯ ಸಮ್ಮೇಳನಕ್ಕೆ ಮೊದಲು ತಲ್ಪುವಂತೆ ಮಾಡಬೇಕು ಎಂದು ಅದಕ್ಕೆ ಸಂಬಂಧಿಸಿ ಕೆಲವು ಲೇಖನ ಮುದ್ರಿಸಲಾಯಿತು. ಅದು ಸಾಧ್ಯವಾಗದೆ ಹೋದುದರಿಂದ ಆ ಲೇಖನಗಳು ಅಪ್ರಸ್ತುತವಾಗಿವೆ. ಈ ತಪ್ಪಿಗಾಗಿಯೂ ವಿಷಾದಿಸುತ್ತೇವೆ.

ಈ ವಿಷಾದ ಯೋಗ ಮುಗಿದು ಕಲ್ಯಾಣ ಕಿರಣವು ಮೊದಲಿನಂತೆ ನಿಯಮಿತವಾಗಿ, ಪುಷ್ಟವಾಗಿ ಹೊರಬರಲೆಂದು ಹಾರೈಸುವಿರಾಗಿ ನಂಬುತ್ತೇವೆ.

—**ಸೋದರಿ ಕಸ್ತೂರಿ**



ಸಮ್ಮೇಳನಾಧ್ಯಕ್ಷರು
ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ

KALYANA KIRANA-Monthly magazine printed and published by